ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 9 ಗುರುವಾರ 2023


ಸಂಪುಟ: 43 | ಸಂಚಿಕೆ: 292 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

43

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4




ಒಳಪುಟಗಳಲ್ಲಿ

15ನೇ ವಿಧಾನಸಭೆಯ ಕೊನೆಯ ಅಧಿವೇಶನ

ನಾಳೆಯಿಂದ ಆರಂಭ



■ ಈ ವರ್ಷದ ಮೊದಲ ಅಧಿವೇಶನವೂ ಹೌದು ■ ರಾಜ್ಯಪಾಲರಿಂದ ಜಂಟಿ ಸದನ ಉದ್ದೇಶಿಸಿ ಭಾಷಣ ■ ಫೆ.17ರಂದು ಹಣಕಾಸು ಸಚಿವರೂ ಆದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಜೆಟ್ ಮಂಡನೆ ■ ರಾಜಕೀಯ ಹಿತಾಸಕ್ತಿಗಳ ಮೇಲಾಟಕ್ಕೆ ಸಾಕ್ಷಿಯಾಗಲಿವೆ ಸದನದ ಕಲಾಪಗಳು!



ಬೊಮ್ಮಾಯಿ



ಥಾವರಚಂದ್

ಬೆಂಗಳೂರು, ಫೆ.8(ಕೆಎಂಶಿ)–ಹದಿನೈದನೇ ವಿಧಾನ ಸಭೆಯ ಕೊನೆಯ ಹಾಗೂ ಈ ವರ್ಷದ ಮೊದಲ ಜಂಟಿ ಅಧಿವೇಶನ ಶುಕ್ರವಾರ ಪ್ರಾರಂಭವಾಗಲಿದೆ.

ವಿಧಾನಮಂಡಲದ ಉಭಯ ಸದನದ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರು ಭಾಷಣ ಮಾಡುವುದರೊಂದಿಗೆ ಅಧಿವೇಶನ ಆರಂಭವಾಗಲಿದ್ದು, ಫೆ.24ರವರೆಗೂ ನಡೆಸಲು ತೀರ್ಮಾನಿಸಲಾಗಿದೆ. ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಂಟಿ ಅಧಿವೇಶನದ ಸಂದರ್ಭದಲ್ಲೇ ಅಂದರೆ, ಫೆ.17ರಂದು ಹಣಕಾಸು ಖಾತೆ ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಎರಡನೇ ಹಾಗೂ ಈ ಸರ್ಕಾರದ ಕೊನೆಯ ಬಜೆಟ್ ಮಂಡಿಸಲಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಸಾಧನೆಗಳ ಅವಲೋಕನದ ಜತೆಗೆ


> “ಸ್ಯಾಂಟ್ರೊ ರವಿ ಪ್ರಕರಣ, ಗುತ್ತಿಗೆದಾರರ ಸಂಘ ಸರ್ಕಾರದ ಮೇಲೆ ಆರೋಪಿಸಿರುವ 40% ಕಮಿಷನ್, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಸಿಡಿಸಿರುವ ಬ್ರಾಹ್ಮಣ ಸಿಎಂ ಹೇಳಿಕೆ, ಅಧಿಕಾರಿಗಳ ವರ್ಗಾವಣೆಯಲ್ಲಿ ಹಣ ವಸೂಲಿ ಸೇರಿದಂತೆ ನಾಡಿನ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಲಿದೆ.

ಮುನ್ನೋಟವಿರುವುದು ವಾಡಿಕೆ. ಮುಂದಿನ ವಾರ ಮಂಡನೆಯಾಗುವ ಬಜೆಟ್‌ನಲ್ಲಿ ಸಾಮಾಜಿಕ ಪಿಂಚಣಿ ಹೆಚ್ಚಳ, ಆಶಾ, ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನ ಏರಿಕೆ ಸೇರಿದಂತೆ ಜನಪರ ಬಜೆಟ್ ಮಂಡನೆ ಮಾಡುವ ನಿರೀಕ್ಷೆ ಇದೆ. ಚುನಾವಣಾ ವರ್ಷವಾಗಿರುವ ಹಿನ್ನೆಲೆಯಲ್ಲಿ ಆಡಳಿತಪರವಾದ ಅಲೆ ಸೃಷ್ಟಿಸಲು ಆಡಳಿತ ಪಕ್ಷದ ಪ್ರಣಾಳಿಕೆಯ ಅಂಶಗಳು ಆಯವ್ಯಯದಲ್ಲಿ ಪ್ರತಿಧ್ವನಿಸಲಿವೆ. ಅಲ್ಲದೆ, ಚುನಾವಣೆ ಹೊಸ್ತಿಲಲ್ಲಿ ಇರುವುದರಿಂದ ನಾಡಿನ ಜ್ವಲಂತ ಸಮಸ್ಯೆಗಳಿಗಿಂತ ಹೆಚ್ಚಾಗಿ ರಾಜಕೀಯ ವಿಚಾರಗಳು ಹೆಚ್ಚು ಪ್ರಸ್ತಾಪವಾಗುವ ಸಂಭವ ಹೆಚ್ಚಾಗಿದೆ.

ಈ ಅಧಿವೇಶನ ಮುಗಿಯುತ್ತಿದ್ದಂತೆ ಕೆಲವು ಶಾಸಕರು ಪಕ್ಷಾಂತರ ಮಾಡಲಿದ್ದು, ಅದರ ಚರ್ಚೆಗೂ ಪರೋಕ್ಷ ಅವಕಾಶ ದೊರೆಯಲಿದೆ. ಮುಂದಿನ ರಾಜಕೀಯ ನಡೆಯ ಬಗ್ಗೆ ಕೆಲವರು ಸ್ಪಷ್ಟ ತೀರ್ಮಾನ ಕೈಗೊಳ್ಳಲಿದ್ದಾರೆ.

ಮೂರು ಪ್ರಮುಖ ರಾಜಕೀಯ ಪಕ್ಷಗಳೂ ಚುನಾವಣಾ ಪ್ರಚಾರ ಆರಂಭಿಸಿದ್ದು, ಪರಸ್ಪರ ಕೆಸರೆರಚಾಟದಲ್ಲಿ ತೊಡಗಿವೆ. ಇದು ಅಧಿವೇಶನದಲ್ಲೂ ಮುಂದುವರೆದು ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಕಾವೇರಿದ ವಾಕ್ಸಮರಕ್ಕೆ ವೇದಿಕೆಯಾಗುವ ಸಾಧ್ಯತೆಗಳೇ ಹೆಚ್ಚಾಗಿವೆ. ಕಡ್ಡಾಯವಾಗಿ ಆಡಳಿತದಲ್ಲಿ ಕನ್ನಡ ಅನುಷ್ಠಾನಗೊಳಿಸುವ ▶ 8ನೇ ಪುಟಕ್ಕೆ

ಚಾಮುಂಡಿಯ ಅಂದದ ಗೋಪುರ ಮತ್ತಷ್ಟು ಚೆಂದ...



ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದ ಗೋಪುರ ಈಗ ಮತ್ತಷ್ಟು ಕಂಗೊಳಿಸುತ್ತಿದೆ. ಸೃಜನಶೀಲ ಪೇಂಟಿಂಗ್‌ನಿಂದ ಗೋಪುರದ ಅಂದ ಇಮ್ಮಡಿಸಿದೆ. ದೇವಿ ಸನ್ನಿಧಿಯ ಮಹತ್ವ, ಪಾವಿತ್ರ್ಯತೆ ಅರಿತು ಒಪ್ಪುವ ಬಣ್ಣಾಲಂಕಾರ ಮಾಡಿರುವುದಕ್ಕೆ ಭಕ್ತರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಹಿಂದೆ ಗೋಪುರಕ್ಕೆ ದಾನಿಯೊಬ್ಬರು ಕೊಟ್ಟ ಹೆಚ್‌ಎಂಟಿಯ ಸುತ್ತಾಕಾರದ ಬೃಹತ್ ಗಡಿಯಾರ ಅಳವಡಿಸುವ ಮೂಲಕ ಅಂದಗೆಡಿಸಲಾಗಿತ್ತು. –ಚಿತ್ರ: ರಜನಿ ಬೋಪಯ್ಯ

ಪೊಲೀಸ್ ಇಲಾಖೆಯಲ್ಲಿ ಮಹಿಳಾ ಪ್ರಾತಿನಿಧ್ಯ ಶೇ.33ಕ್ಕೆ ಹೆಚ್ಚಿಸಲು ಕೇಂದ್ರ ಸಲಹೆ

ನವದೆಹಲಿ: ಪೊಲೀಸ್ ಪಡೆಯಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಶೇ 33ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸಲಹೆ ನೀಡಿದೆ.

ಎಲ್ಲಾ ರಾಜ್ಯ ಸರ್ಕಾರಗಳು ಮಹಿಳಾ ಪೊಲೀಸರ ಪ್ರಾತಿನಿಧ್ಯವನ್ನು ಒಟ್ಟು ಬಲದ 33 ಪ್ರತಿಶತಕ್ಕೆ ಹೆಚ್ಚಿಸಲು ಗೃಹ ಸಚಿವಾಲಯವು 2013ರ ಏಪ್ರಿಲ್ 22, 2014ರ ಮೇ 21, 2015 ರ ಮೇ 12, 2019ರ ಜೂನ್ 21, 2021ರ ಜೂನ್ 22 ಮತ್ತು 2022ರಲ್ಲಿ ಏಪ್ರಿಲ್ 13ರ ದಿನಾಂಕದಂದು ರಾಜ್ಯಗಳಿಗೆ ಸಲಹೆಗಳನ್ನು ನೀಡಿದೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ▶ 8ನೇ ಪುಟಕ್ಕೆ

ಮೈಸೂರಿಂದ ಕುಶಾಲನಗರದವರೆಗೆ ರಾಷ್ಟ್ರೀಯ

ಹೆದ್ದಾರಿ ಅಗಲೀಕರಣಕ್ಕೆ ಹಣ ಬಿಡುಗಡೆ

ಮಾರ್ಚ್ ಎರಡನೇ ವಾರ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಪ್ರಧಾನಿ ಮೋದಿ ರಾಷ್ಟ್ರಕ್ಕೆ ಸಮರ್ಪಣೆ



ಬೆಂಗಳೂರು, ಫೆ.8 (ಕೆಎಂಶಿ)– ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿಯನ್ನು ವಿಶ್ವಮಟ್ಟದ ದರ್ಜೆಗೆ ಪರಿವರ್ತಿಸುತ್ತಿದ್ದಂತೆ ಮೈಸೂರಿನಿಂದ ಕುಶಾಲನಗರದವರೆಗಿನ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರ ಅನುದಾನ ಬಿಡುಗಡೆ ಮಾಡಿದೆ. ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಕೊಡುಗೆಗಳ ಮಹಾಪೂರವನ್ನೇ ಹರಿಸುತ್ತಿದ್ದು, ಇಂದು ಮೂರು ಸಾವಿರ ಕೋಟಿ ರೂ. ಮೊತ್ತದ ಹೆದ್ದಾರಿ ಕಾಮಗಾರಿ ಕೈಗೊಳ್ಳಲು ಹಣ ಬಿಡುಗಡೆ ಮಾಡಿದೆ. ಚುನಾವಣೆಗೂ ಮುನ್ನವೇ ಬೆಂಗಳೂರು–ಮೈಸೂರು ಹೆದ್ದಾರಿಯನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಲು ಸಿದ್ಧತೆ ನಡೆದಿದೆ. ಬಹುತೇಕ ಮಾರ್ಚ್ ಮಧ್ಯೆ ಭಾಗದಲ್ಲಿ ಪ್ರಧಾನಿ ಮೋದಿ ಅವರು ಈ ರಸ್ತೆಯನ್ನು ಉದ್ಘಾಟಿಸಲಿದ್ದಾರೆ. ಈಗಾಗಲೇ ಶೇಕಡ 90ರಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ, ಮೈಸೂರಿನಿಂದ ಕುಶಾಲನಗರದವರೆಗಿನ ರಾಷ್ಟ್ರೀಯ ಹೆದ್ದಾರಿ 275 ಗುಡ್ಡೆ ಹೊಸೂರು ಬಳಿ ನಾಲ್ಕು ಪಥ ರಸ್ತೆ ಅಗಲೀಕರಣ ಯೋಜನೆಗೆ 909.86 ಕೋಟಿ ರೂ. ಬಿಡುಗಡೆಗೊಳಿಸಿದ್ದಾರೆ. ಪ್ರಸಕ್ತ ಬಜೆಟ್‌ನಲ್ಲಿ ▶ 8ನೇ ಪುಟಕ್ಕೆ

ಡಿಕೆಶಿಗೆ ಇಡಿ, ಪುತ್ರಿಗೆ ಸಿಬಿಐ ನೋಟಿಸ್



ಬೆಂಗಳೂರು, ಫೆ. 8– ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್‌ಗೆ ಜಾರಿ ನಿರ್ದೇಶನಾಲಯ (ಇಡಿ) ಮತ್ತು ಅವರ ಪುತ್ರಿ ಐಶ್ವರ್ಯ ಅವರಿಗೆ ಸಿಬಿಐ ನೋಟಿಸ್ ನೀಡಿದ್ದು, ಡಿಕೆಶಿಗೆ ಫೆ. 22ರೊಳಗೆ ಹಾಗೂ ಪುತ್ರಿಗೆ 10 ದಿನದೊಳಗೆ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ.

ಡಿ.ಕೆ. ಶಿವಕುಮಾರ್ ಅಕ್ರಮ ಆಸ್ತಿ ಸಂಪಾದನೆ ಕುರಿತಂತೆ ತನಿಖೆ ನಡೆಸುತ್ತಿರುವ ಸಿಬಿಐ ಅಧಿಕಾರಿಗಳು ಕಳೆದ 2 ತಿಂಗಳ ಹಿಂದೆ ಡಿ.ಕೆ. ಶಿವಕುಮಾರ್ ಒಡೆತನದ ಗ್ಲೋಬಲ್ ಕಾಲೇಜಿನಲ್ಲಿ ದಾಖಲೆಗಳನ್ನು ಪರಿಶೀಲನೆ ನಡೆಸಿದ್ದರು. ಈ ಹಿಂದೆ ಸಿಬಿಐ ವಿಚಾರಣೆಗೆ ಹಾಜರಾಗಿದ್ದ ಡಿ.ಕೆ.ಶಿವಕುಮಾರ್ ಗ್ಲೋಬಲ್ ಕಾಲೇಜು ಟ್ರಸ್ಟ್ ಅಡಿಯಲ್ಲಿ ನಡೆಯುತ್ತಿದೆ ಎಂಬ ಹೇಳಿಕೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಗ್ಲೋಬಲ್ ▶ 8ನೇ ಪುಟಕ್ಕೆ

ಜಿಲ್ಲೆಗೊಂದು ಟ್ರಕ್ ಟರ್ಮಿನಲ್

30 ರಿಂದ 40 ಎಕರೆ ಜಾಗದಲ್ಲಿ 2 ಸಾವಿರ ವಾಹನ ನಿಲುಗಡೆಗೆ ವ್ಯವಸ್ಥೆ; ಇಲ್ಲಿ ಶೌಚಾಲಯ, ವ್ಯಾಯಾಮ ಶಾಲೆ, ಎಟಿಎಂ, ಪೊಲೀಸ್ ಸ್ಟೇಷನ್, ಬ್ಯಾಂಕ್, ಶಾಪಿಂಗ್ ಮಾಲ್ ಇನ್ನಿತರೆ ಅಗತ್ಯ ವ್ಯವಸ್ಥೆ



ವೀರಯ್ಯ

ಬೆಂಗಳೂರು, ಫೆ.8(ಕೆಎಂಶಿ)– ರಾಜ್ಯದ ನಗರಗಳ ಹೊರ ವಲಯಗಳಲ್ಲಿ ಲಾರಿ, ಟ್ರಕ್‌ಗಳ ನಿರ್ವಹಣೆದಾರರಿಗೆ ತಂಗುದಾಣ, ಸರಕುಗಳನ್ನು ಏರಿಳಿಸುವ ವ್ಯವಸ್ಥೆ ಒದಗಿಸುವ, ವಾಹನ ದಟ್ಟಣೆ, ಅಪಘಾತಗಳು, ರಸ್ತೆಗಳಿಗೆ ಆಗುವ ಹಾನಿ ಮತ್ತು ವಾಯುಮಾಲಿನ್ಯವನ್ನು ಕಡಿಮೆ ಮಾಡುವ ಉದ್ದೇಶದಿಂದ ಜಿಲ್ಲೆಗೊಂದು ಟ್ರಕ್ ಟರ್ಮಿನಲ್ ನಿರ್ಮಾಣ ಮಾಡಲಾಗುವುದು ಎಂದು ಡಿ. ದೇವರಾಜ್ ಅರಸ್ ಟ್ರಕ್ ಟರ್ಮಿನಲ್ ಲಿಮಿಟೆಡ್‌ನ ಅಧ್ಯಕ್ಷರು ಹಾಗೂ ವಿಧಾನಪರಿಷತ್ ಮಾಜಿ ಸದಸ್ಯರಾದ ಡಿ.ಎಸ್.ವೀರಯ್ಯ ತಿಳಿಸಿದ್ದಾರೆ.

ಜಿಲ್ಲೆಗೊಂದು ಟ್ರಕ್ ಟರ್ಮಿನಲ್ ಅನ್ನು 30ರಿಂದ 40 ಎಕರೆ ಜಾಗದಲ್ಲಿ 2 ಸಾವಿರ ವಾಹನ ನಿಲ್ದಾಣ ಸಾಮರ್ಥ್ಯದಲ್ಲಿ ನಿರ್ಮಿಸಲಾಗುವುದು. ಇದರಲ್ಲಿ ಶೌಚಾಲಯ, ವ್ಯಾಯಾಮ ಶಾಲೆ, ಎಟಿಎಂ, ಪೊಲೀಸ್ ಸ್ಟೇಷನ್, ಬ್ಯಾಂಕ್, ಶಾಪಿಂಗ್ ಮಾಲ್ ಸೇರಿದಂತೆ ಅಗತ್ಯ ವ್ಯವಸ್ಥೆ ಕಲ್ಪಿಸಲಾಗುವುದು. ಇದು ಟ್ರಕ್, ಲಾರಿ ಚಾಲಕರಿಗೆ ನೆರವಾಗುವ ಜತೆಗೆ ಉದ್ಯೋಗ ಅವಕಾಶವನ್ನು ಸೃಷ್ಟಿಸಿ ಮಿನಿ ಟೌನ್‌ಶಿಪ್‌ನಂತೆ ನಿರ್ಮಾಣಗೊಳ್ಳಲಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಲಾರಿ, ಟ್ರಕ್ ಚಾಲಕರಿಗೆ, ನಿರ್ವಾಹಕರಿಗೆ ಮೂಲಭೂತ ಸೌಕರ್ಯಗಳಾದ ತಂಗುದಾಣ, ಶೌಚಾಲಯ ಕೊರತೆಯಿದೆ. ಇದನ್ನು ನೀಗಿಸಲು ರಾಜ್ಯದ 31 ಜಿಲ್ಲೆಗಳಲ್ಲೂ ಟರ್ಮಿನಲ್ ನಿರ್ಮಿಸಲಾಗುತ್ತದೆ. ಈಗಾಗಲೇ ರಾಜ್ಯದ ಮೈಸೂರು ಹಾಗೂ ಧಾರವಾಡದಲ್ಲಿ ಟರ್ಮಿನಲ್ ನಿರ್ಮಿಸಲಾಗಿದ್ದು, ಟ್ರಕ್, ಲಾರಿ ▶ 8ನೇ ಪುಟಕ್ಕೆ



ಮೈಸೂರಲ್ಲಿ ನಾಗರಿಕರ ಸಮಸ್ಯೆ ತ್ವರಿತ ಪರಿಹಾರಕ್ಕೆ ವಲಯ ಅದಾಲತ್ ನಂತರ ಈಗ

ಮೇಯರ್ ಆನ್‌ಲೈನ್ ಅದಾಲತ್

ಪಾಲಿಕೆ ಇತಿಹಾಸದಲ್ಲಿ ಪ್ರಥಮ ಪ್ರಯೋಗ, ಫೆ.22ರವರೆಗೆ ಸೇವೆ ಲಭ್ಯ; ದೂರು ಸಲ್ಲಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಮೈಸೂರು ಮಹಾನಗರ ಪಾಲಿಕೆ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಮಂಗಳವಾರ ಮೇಯರ್ ಶಿವಕುಮಾರ್ ಅವರು ಕ್ಯೂಆರ್ ಕೋಡ್ ಅನ್ನು ಬಿಡುಗಡೆ ಮಾಡಿದರು. (ಎಡದಿಂದ) ಪಾಲಿಕೆ ಎಕ್ಸಿಕ್ಯೂಟಿವ್ ಇಂಜಿನಿಯರ್ ರಂಜಿತ್, ಅಡಿಷನಲ್ ಡೆಪ್ಯುಟಿ ಕಮಿಷನರ್ ಎಂ.ಜೆ. ರೂಪಾ, ಪ್ರತಿಪಕ್ಷದ ನಾಯಕಿ ಅಶ್ವಿನಿ ಅನಂತು, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಧುಸೂದನ್, ಮುಖ್ಯ ಲೆಕ್ಕಾಧಿಕಾರಿ ಕವಿತಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ. 8 (ಆರ್‌ಕೆ)– ವಲಯವಾರು ಪಾಲಿಕೆ ಅದಾಲತ್ ಅಂತ್ಯಗೊಳ್ಳುತ್ತಿದ್ದಂತೆಯೇ ಇದೀಗ ಆನ್‌ಲೈನ್ ಅದಾಲತ್ ಆರಂಭಿಸುವ ಮೂಲಕ ಮೇಯರ್ ಶಿವಕುಮಾರ್ ಮೈಸೂರು ಮಹಾನಗರ ಪಾಲಿಕೆಯಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ.

ಈ ಮೂಲಕ ಸಾರ್ವಜನಿಕರ ಮನೆ ಬಾಗಿಲಿಗೇ ಸೇವೆ ಒದಗಿಸುತ್ತಿರುವುದು ಇಡೀ ಕರ್ನಾಟಕ ರಾಜ್ಯದಲ್ಲೇ ಮೊದಲ ಪ್ರಯೋಗವಾಗಿದೆ. ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ಸಭಾಂಗಣದಲ್ಲಿ ಇಂದು ನಡೆದ ಸರಳ ಸಮಾರಂಭದಲ್ಲಿ ಮೇಯರ್ ಶಿವಕುಮಾರ್ ಕ್ಯೂಆರ್ ಕೋಡ್ ಅನ್ನು ಬಿಡುಗಡೆ ಮಾಡಿದರು. ಮೈಸೂರಲ್ಲಿ ನಡೆದ ವಲಯವಾರು ಅದಾಲತ್‌ನಲ್ಲಿ ಖುದ್ದಾಗಿ ಹಾಜರಾಗಲಾರದ ಹಾಗೂ ಹೊರಗಡೆ ವಾಸಿಸುತ್ತಿರುವವರು ತಾವಿರುವಲ್ಲೇ ಈ ಕ್ಯೂಆರ್ ಕೋಡ್ ಅನ್ನು ತಮ್ಮ ಮೊಬೈಲ್‌ನಿಂದ ಸ್ಕ್ಯಾನ್ ಮಾಡಿ http://bit.iy/mccmayor ವೆಬ್‌ಸೈಟ್ ತೆರೆದುಕೊಂಡು ದೂರುಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿ ಸೇವೆಗಳನ್ನು ಪಡೆಯಬಹುದಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು.

ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಗೂಗಲ್ ಅಕೌಂಟ್ ಮೂಲಕ ಲಾಗಿನ್ ಆಗಿ ಸೇವೆಯನ್ನು ಪಡೆಯಬಹುದು. ಮೈಸೂರಿನಲ್ಲಿ ಆಸ್ತಿ ಹೊಂದಿದ್ದು, ಬೇರೆ ಊರುಗಳಲ್ಲಿ ಕೆಲಸ ಮಾಡುತ್ತಿರುವ ಸರ್ಕಾರಿ ಅಧಿಕಾರಿ, ಸಿಬ್ಬಂದಿಗಳು, ಹೊರ ಜಿಲ್ಲೆ, ರಾಜ್ಯ ಹಾಗೂ ವಿದೇಶದಲ್ಲಿ ವಾಸವಾಗಿರುವವರು ಆನ್‌ಲೈನ್‌ನಲ್ಲೇ ಅರ್ಜಿ ಸಲ್ಲಿಸಿ ಸೇವೆಯನ್ನು ಪಡೆಯಬಹುದಾಗಿದೆ. ಲಂಚಕ್ಕಾಗಿ ಬೇಡಿಕೆ ಇಟ್ಟು ಸಾರ್ವಜನಿಕರನ್ನು ಅನಗತ್ಯವಾಗಿ ಕಚೇರಿಗೆ ಅಲೆಸುವುದು, ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿದ್ದ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಈ ಆನ್‌ಲೈನ್ ಅದಾಲತ್ ಕಾರ್ಯಕ್ರಮದಿಂದ ಕೈ ಕಟ್ಟಿದಂತಾಗಿದೆ. ತೊಂದರೆ ಉಂಟಾಗಿದೆ. ಆದರೆ ಹೊರ ಊರುಗಳಲ್ಲಿರುವವರು, ಅಂಗವಿಕಲರು, ರೋಗಿಗಳು, ಹಿರಿಯ ನಾಗರಿಕರ ಪಾಲಿಗೆ ಆನ್‌ಲೈನ್ ಅದಾಲತ್ ವರವಾಗಿ ಪರಿಣಮಿಸಿದೆ.

ಇಂದಿನಿಂದ ಫೆಬ್ರವರಿ 22 ರವರೆಗೆ ಆನ್‌ಲೈನ್ ಪಾಲಿಕೆ ಅದಾಲತ್ ನಡೆಯುವುದರಿಂದ ವಲಯವಾರು ಅದಾಲತ್‌ನಲ್ಲಿ ಭಾಗವಹಿಸಲಾಗದವರು ಈ ಮೂಲಕ ತಮ್ಮ ಸೇವೆಗಳಿಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದರು. ಪ್ರತಿಪಕ್ಷದ ನಾಯಕಿ ಅಶ್ವಿನಿ ಅನಂತು, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಮಧುಸೂದನ್ ಹಾಗೂ ಮುಖ್ಯ ಲೆಕ್ಕಾಧಿಕಾರಿ ಕವಿತಾ ಹಾಗೂ ಇತರರು ಮೇಯರ್ ಆನ್‌ಲೈನ್ ಅದಾಲತ್‌ಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಕಳಪೆ ಕಾಮಗಾರಿ ಖಂಡಿಸಿ ಹಿಂದೂಸ್ತಾನ ಜನತಾ ಪಾರ್ಟಿ ಮೈಸೂರಲ್ಲಿ ಪ್ರತಿಭಟನೆ

ಮೈಸೂರು, ಫೆ.8(ಎಂಟಿವೈ)– ರಾಜ್ಯ ಸರ್ಕಾರದ ಮಿತಿ ಮೀರಿದ ಭ್ರಷ್ಟಾಚಾರದಿಂದ ಎಲ್ಲೆಡೆ ಕಳಪೆ ಕಾಮಗಾರಿಗಳು ನಡೆಯುತ್ತಿವೆ ಎಂದು ಆರೋಪಿಸಿ ಹಿಂದೂಸ್ತಾನ ಜನತಾ ಪಾರ್ಟಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾಮಗಾರಿ ಹೆಸರಿನಲ್ಲಿ ಲೂಟಿ ಮಾಡಲಾಗುತ್ತಿದೆ. ಚರಂಡಿ ಕಾಮಗಾರಿ ಬಾಕಿ ಇದ್ದರೂ ರಸ್ತೆ ಕಾಮಗಾರಿ ನಡೆಸಿ ಸಾರ್ವಜನಿಕರ ತೆರಿಗೆ ಹಣ ಪೋಲು ಮಾಡಲಾಗುತ್ತಿದೆ ಎಂದು ಆರೋಪಿಸಿದರು.



ಇಂದು ಅಗತ್ಯ ಸೇವೆಗಳು ಜನಸಾಮಾನ್ಯರ ಕೈಗೆ ಎಟುಕದಂತೆ ದುಬಾರಿಯಾಗಿವೆ. ಸಾರಿಗೆ ದರ ಹೆಚ್ಚಳವಾಗಿದೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಜನರು ಪರದಾಡುವಂತಾಗಿದೆ. ಕೋವಿಡ್ ಸಂದರ್ಭದಲ್ಲಿ ಜನಸಾಮಾನ್ಯರಿಂದ ಆಸ್ಪತ್ರೆಗಳು ಸುಲಿಗೆ ಮಾಡಿವೆ. ಸರ್ಕಾರಿ ಶಾಲೆಯ ಮಕ್ಕಳು ಶಿಥಿಲ ಕೊಠಡಿಗಳಲ್ಲಿ ಪಾಠ ಕೇಳುವ ದುಸ್ಥಿತಿ ಒದಗಿದೆ. ಮಳೆಗಾಲ ಆರಂಭಕ್ಕೂ ಮುನ್ನವೇ ಸರ್ಕಾರ ಕಟ್ಟಡಗಳನ್ನು ದುರಸ್ತಿ ಮಾಡಬೇಕೆಂದು ಆಗ್ರಹಿಸಿದರು. ಮುಂದಿನ ಚುನಾವಣೆಯಲ್ಲಿ ಜನರು ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಮತ ಚಲಾಯಿಸಿ ತಕ್ಕ ಪಾಠ ಕಲಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಹಿಂದೂಸ್ತಾನ ಜನತಾ ಪಾರ್ಟಿ ಅಧ್ಯಕ್ಷ ರಾಮಚಂದ್ರ ರಾವ್, ಪಕ್ಷದ ಜಿಲ್ಲಾಧ್ಯಕ್ಷ ಪ್ರಕಾಶರಾವ್, ಕುಮಾರ್, ಬೋಗಾದಿ ಕುಮಾರ್ ಇದ್ದರು.

ಶ್ರೀ ರಾಜರಾಜೇಶ್ವರಿ ಕುಂಭಾಭಿಷೇಕ ಮಹೋತ್ಸವ



ಮೈಸೂರು, ಫೆ. 8– ಮೈಸೂರಿನ ರಾಜರಾಜೇಶ್ವರಿನಗರದ ಶ್ರೀ ರಾಜರಾಜೇಶ್ವರಿ ಅಮ್ಮನವರ ಉತ್ಸವಮೂರ್ತಿ ಪ್ರತಿಷ್ಠಾಪನ ಮತ್ತು ಕುಂಭಾಭಿಷೇಕ ಮಹೋತ್ಸವ ಜರುಗಿತು. ತಲಕಾಡು ಗಜಾರಣ್ಯ ಕ್ಷೇತ್ರ ಶ್ರೀ ಬಾಲಕೃಷ್ಣಾನಂದ ಮಹಾ ಸಂಸ್ಥಾನಂ ಶ್ರೀ ಶ್ರೀ ಗೋವಿಂದಾನಂದ ಸರಸ್ವತಿ ಮಹಾ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ಬೆಮೆಲ್ ಸಂಸ್ಥೆಯ ಮುಖ್ಯ ಪ್ರಧಾನ ವ್ಯವಸ್ಥಾಪಕ ವೆಂಕಟಸುಬ್ಬರಾವ್, ಕಾರ್ಮಿಕ ಸಂಘದ ಅಧ್ಯಕ್ಷ ಗೋವಿಂದ ರೆಡ್ಡಿ, ಸಹಕಾರ ಸಂಘದ ಅಧ್ಯಕ್ಷ ರಾಜೇಶ್ ರಾಜೇ ಅರಸ್, ಅಧಿಕಾರಿಗಳ ಒಕ್ಕೂಟದ ಜಂಟಿ ಕಾರ್ಯದರ್ಶಿ ಎಸ್ ಜಿ ಮಾದೇಗೌಡ, ಅಂಕಣಕಾರ ನಂ ಶ್ರೀ ಕಂಠ ಕುಮಾರ್, ದೇವಸ್ಥಾನದ ಆಡಳಿತ ಮಂಡಳಿಯ ಕಾರ್ಯದರ್ಶಿ ಕೆ.ಮಲ್ಲೇಶಪ್ಪ, ಅಧ್ಯಕ್ಷ ಲಿಂಗರಾಜು, ಇತರೆ ಸದಸ್ಯರು ಹಾಗೂ ಹೆಚ್ಚಿನ ಭಕ್ತಾದಿಗಳು ಭಾಗವಹಿಸಿದ್ದರು.



ದಿ ಸಿಟಿ ಕೋ ಆಪರೇಟಿವ್ ಬ್ಯಾಂಕಿನ ನೂತನ ಅಧ್ಯಕ್ಷರಾದ ಎಂ.ಎನ್.ಸ್ವರೂಪ್ ಅವರನ್ನು ಅಭಿನಂದಿಸಲಾಯಿತು. ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುಂದರ್ ಕುಮಾರ್, ಪೈಲ್ವಾನ್ ಚಂದ್ರಶೇಖರ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಹೆಚ್ ಹರೀಶ್ ಕುಮಾರ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಶ್ರೇಯಸ್, ನಿರಂಜನ್, ಪ್ರಶಾಂತ್, ಮಹದೇವ, ಬಸವರಾಜು ಮತ್ತಿತರರು ಉಪಸ್ಥಿತರಿದ್ದಾರೆ.

ಬಿಜೆಪಿ ಗೆಲ್ಲಿಸಿ ಅಭಿವೃದ್ಧಿಗೆ ಸಹಕರಿಸಿ: ಹೇಮಾನಂದೀಶ್



ಮೈಸೂರು, ಫೆ.8– ಭಾರತವನ್ನು ಹಿಯಾಳಿಸುತ್ತಿದ್ದ ಎಷ್ಟೋ ರಾಷ್ಟ್ರಗಳು ಇಂದು ಭಾರತದತ್ತ ತಿರುಗಿ ನೋಡುವಂತಾಗಿದೆ. ಇದಕ್ಕೆ ಕಾರಣವಾದ ಪ್ರಧಾನಿ ಮೋದಿ ಅವರ ಕಾರ್ಯ ಶ್ಲಾಘನೀಯ ಎಂದು ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾನಂದೀಶ್ ಹೇಳಿದರು. ಜೆ.ಪಿ.ನಗರ ಹಾಗೂ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮನೆ ಮನೆಗೆ ತೆರಳಿ ವಿಜಯ ಸಂಕಲ್ಪ ಅಭಿಯಾನದಲ್ಲಿ ಅವರು ಮಾತನಾಡಿದರು.

'ಜನ್‌ಧನ್ ಖಾತೆ, ಬೇಟಿ ಪಡಾವೋ ಬೇಟಿ ಬಚಾವೋ, ಉಜ್ವಲ್ ಯೋಜನೆ, ಪಂ.ದೀನದಯಾಳ ಗ್ರಾಮ ಜ್ಯೋತಿ, ಆಯುಷ್ಮಾನ್ ಭಾರತ ಹೀಗೆ ಹಲವಾರು ಯೋಜನೆಗಳನ್ನು ಬಿಜೆಪಿ ಸರ್ಕಾರ ತಂದಿದೆ. ಇಂತಹ ಪಕ್ಷಕ್ಕೆ ತಾವೆಲ್ಲರೂ ಕೈಜೋಡಿಸಿ ನಗರ ಹಾಗೂ ರಾಜ್ಯದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮಹಿಳಾ ಮೋರ್ಚಾ ಪ್ರಭಾರಿಗಳಾದ ಗೋಪಾಲ್‌ರಾಜೇ ಅರಸ್ ಹಾಗೂ ಬಿಜೆಪಿ ಮುಖಂಡ ದೇವರಾಜೇಗೌಡ, ಕೃಷ್ಣರಾಜ ಕ್ಷೇತ್ರದ ಮಂಡಲ ಅಧ್ಯಕ್ಷೆ ಶಾಂತ, ನಗರ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಾಗರತ್ನ ಗೌಡ, ಉಪಾಧ್ಯಕ್ಷೆ ಆಶಾ ಲಕ್ಷ್ಮಿ ನಾರಾಯಣ್ ಹಾಗೂ ಭಾಗ್ಯ, ರೂಪ ಮತ್ತಿತರರು ಹಾಜರಿದ್ದರು.

ನಿಧನ



ಮನೆಯಪಂಡ ಗಂಗಮ್ಮ ತಿಮ್ಮಯ್ಯ

ಮೈಸೂರು, ಫೆ8–ಮೈಸೂರಿನ ಟಿ.ಕೆ.ಬಡಾವಣೆ, ಕವಿತಾಸ್ಟೋರ್ಸ್ ಸಮೀಪ, ಪಡುವಣ ರಸ್ತೆ, 3ನೇ ಕ್ರಾಸ್, 4ನೇ ಹಂತ, ನಂ.1238ರ ನಿವಾಸಿ ದಿ. ಮನೆಯಪಂಡ ತಿಮ್ಮಯ್ಯ ಅವರ ಪತ್ನಿ ಮನೆಯಪಂಡ ಗಂಗಮ್ಮ ತಿಮ್ಮಯ್ಯ(ಕೊರವಂಡ) ಅವರು ಮಂಗಳವಾರ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು. ಮೃತರು ಓರ್ವ ಪುತ್ರಿ, ಅಳಿಯ, ಸೊಸೆ, ಇಬ್ಬರು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟಿ.ಎಂ.ಜಿ.ಮಹದೇವಯ್ಯ



ಮೈಸೂರು, ಫೆ. 8– ಸಾರಿಗೆ ಸಂಸ್ಥೆಯ ನಿವೃತ್ತ ಅಧಿಕಾರಿ, ಮೈಸೂರಿನ ಗಿರಿದರ್ಶಿನಿ ಬಡಾವಣೆ ನಿವಾಸಿ ಟಿ.ಎಂ.ಜಿ. ಮಹದೇವಯ್ಯ (70) ಬುಧವಾರ ನಿಧನರಾದರು. ಮೃತರು ಪತ್ನಿ, ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಗುರುವಾರ) ಅವರ ಸ್ವಗ್ರಾಮವಾದ ತಲಕಾಡಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಎಂ.ಬಿ.ಶಂಕರ್

ಮೈಸೂರು, ಫೆ.8–ಟಿ.ನರಸೀಪುರ ತಾಲೂಕಿನ ಮಾಕನಹಳ್ಳಿ ಗ್ರಾಮದವರಾದ ಹಿರಿಯ ವಕೀಲರಾದ ಎಂ.ಬಿ.ಶಂಕರ್(60) ಅವರು ಇಂದು ಸಂಜೆ ನಿಧನರಾದರು. ಮೃತರು ಪತ್ನಿ ಶ್ರೀಮತಿ ಲೀಲಾವತಿ, ಪುತ್ರ ಡಾ. ಪೃಥ್ವಿ ಶಂಕರ್ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರು ಪ್ರಸ್ತುತ ಮೈಸೂರು ಕೆ.ಸಿ.ನಗರದಲ್ಲಿ ನೆಲೆಸಿದ್ದರು. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 1 ಗಂಟೆಗೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಲ್ಲಿ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಟಿ.ನರಸೀಪುರ ತಾಲೂಕು ವಕೀಲರ ಸಂಘ ಸಂತಾಪ ಸೂಚಿಸಿದೆ. ಟಿ.ನರಸೀಪುರ ನ್ಯಾಯಾಲಯದಲ್ಲಿ ಎಪಿಪಿಯಾಗಿ 8 ವರ್ಷ ಸೇವೆ ಸಲ್ಲಿಸಿದ್ದ ಇವರು, ಈಗ ವಕೀಲಿ ವೃತ್ತಿ ಮುಂದುವರೆಸಿದ್ದರು.

ಖಾಸಗಿ ಆಸ್ಪತ್ರೆ, ವೈದ್ಯರಲ್ಲಿ ತಪಾಸಣೆಗೆ ಒಳಗಾಗುವ ಗರ್ಭಿಣಿಯರ ಮಾಹಿತಿ ಪಡೆದು

ಆರೋಗ್ಯ ಇಲಾಖೆಯೇ ಸ್ವಯಂ ಕ್ರಮದಲ್ಲಿ ತಾಯಿ ಕಾರ್ಡ್ ವಿತರಿಸಲು ಚಿಂತನೆ

ಮೈಸೂರು ಸುರಕ್ಷಿತ ತಾಯ್ತನದ ಜಿಲ್ಲೆಯಾಗಿಸಲು ಖಾಸಗಿ ವೈದ್ಯಕೀಯ ಸಂಸ್ಥೆಗಳು, ವೈದ್ಯರ ಸಹಕಾರ ಅಗತ್ಯ; ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ

ಮೈಸೂರು,ಫೆ.8(ಪಿಎಂ)– ಮೈಸೂರು ಸುರಕ್ಷಿತ ತಾಯ್ತನದ ಜಿಲ್ಲೆಯಾಗಲು ಖಾಸಗಿ ವೈದ್ಯಕೀಯ ಸಂಸ್ಥೆಗಳು, ವೈದ್ಯರ ಸಹಕಾರ ಅಗತ್ಯ. ಸುರಕ್ಷಿತ ಹೆರಿಗೆಗೆ ಕ್ರಮ ವಹಿಸಿ ತಾಯಿ–ಮಗುವಿನ ಆರೋಗ್ಯ ಕಾಪಾಡಲು ತಾಯಿ ಕಾರ್ಡ್ ಮಹತ್ವದ ಪಾತ್ರ ವಹಿಸಲಿದ್ದು, ಹೀಗಾಗಿ ಖಾಸಗಿ ಆಸ್ಪತ್ರೆ, ವೈದ್ಯರಲ್ಲಿ ತಪಾಸಣೆಗೆ ಒಳಗಾಗುವ ಗರ್ಭಿಣಿಯರ ಮಾಹಿತಿ ಪಡೆದು ಆರೋಗ್ಯ ಇಲಾಖೆಯೇ ಸ್ವಯಂ ಕ್ರಮದಲ್ಲಿ ತಾಯಿ ಕಾರ್ಡ್ ವಿತರಿಸಲು ಚಿಂತಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆ ವತಿಯಿಂದ 'ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ (ಪಿಎಂಎಸ್‌ಎಂಎ)' ಕುರಿತು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಹಾಗೂ ರೇಡಿಯೋಲಜಿಸ್ಟ್ ತಜ್ಞರಿಗೆ ಬುಧವಾರ ಹಮ್ಮಿಕೊಂಡಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು. ಖಾಸಗಿ ಆಸ್ಪತ್ರೆಗಳಲ್ಲಿ ತಪಾಸಣೆಗೆ ಒಳಗಾಗುವ ಗರ್ಭಿಣಿಯರ ಪೈಕಿ ಪೂರ್ಣ ಪ್ರಮಾಣದಲ್ಲಿ ಆರೋಗ್ಯ ಇಲಾಖೆಯ ದಾಖಲೆಯಲ್ಲಿ ನೋಂದಣಿಯಾಗುತ್ತಿಲ್ಲ. ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇಲ್ಲದವರೂ ಸಾಕಷ್ಟು ಮಂದಿ ಖಾಸಗಿ ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಳ್ಳುವುದಿದೆ. ಅವರು ಆರ್ಥಿಕ ಕಾರಣಗಳಿಗಾಗಿ ಅರ್ಧದಲ್ಲಿ ನಿಯಮಿತ ತಪಾಸಣೆಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆಗಳೂ ಇರುತ್ತವೆ.



ಮೈಸೂರಿನ ಜೆಎಲ್‌ಬಿ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ 'ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ' ಕುರಿತು ವೈದ್ಯರಿಗೆ ಬುಧವಾರ ಹಮ್ಮಿಕೊಂಡಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿದರು.

ಅಂತಹ ಪ್ರಕರಣದಲ್ಲಿ ಗರ್ಭಪಾತವಾಗಬಹುದು. ಅದನ್ನು ತಡೆಗಟ್ಟಲು ಖಾಸಗಿ ವೈದ್ಯರಲ್ಲಿ ತಪಾಸಣೆಗೆ ಒಳಗಾಗುವವರಿಗೆ ಆರೋಗ್ಯ ಇಲಾಖೆಯೇ ಸ್ವಯಂಪ್ರೇರಿತವಾಗಿ ಮಾಹಿತಿ ಪಡೆದು ತಾಯಿ ಕಾರ್ಡ್ ಮಾಡಿಸಲು ವ್ಯವಸ್ಥೆಗೆ ಕ್ರಮ ಕೈಗೊಳ್ಳಲು ಚಿಂತಿಸಲಾಗಿದೆ ಎಂದು ತಿಳಿಸಿದರು.

ತಾಯಿ ಕಾರ್ಡ್ ಬಹಳ ಮುಖ್ಯ. ಇದರ ಮೂಲಕ ಸರ್ಕಾರದ ವ್ಯವಸ್ಥೆಯೊಳಗೆ ಗರ್ಭಿಣಿಯರಿಗೆ ಯೂನಿಕ್ ಐಡಿ ನೀಡಲಾಗುತ್ತದೆ. ಆದರೆ ಕಾರ್ಪೊರೇಟ್ ಆರೋಗ್ಯ ಕ್ಷೇತ್ರಗಳಿಂದ ಆರೋಗ್ಯ ಇಲಾಖೆಗೆ ಪೂರ್ಣ ಪ್ರಮಾಣದಲ್ಲಿ ಗರ್ಭಿಣಿಯರ ಮಾಹಿತಿ ಲಭ್ಯವಾಗುತ್ತಿಲ್ಲ. ತೊಡಕಿನ ಗರ್ಭಿಣಿಯರು ಕಂಡು ಬಂದರೆ ಆಶಾ ಕಾರ್ಯಕರ್ತೆಯರಿಗೆ ಮಾಹಿತಿ ನೀಡಲು ಖಾಸಗಿ ವೈದ್ಯರು ಮುಂದಾಗಬೇಕು. ತಾಯಿ ಮತ್ತು ಮಗುವಿನ ಸುರಕ್ಷತೆ ದೃಷ್ಟಿಯಿಂದ ಖಾಸಗಿ ವೈದ್ಯರು, ಸಂಸ್ಥೆಗಳು ಆರೋಗ್ಯ ಇಲಾಖೆಗೆ ಪ್ರತಿಕ್ರಿಯೆ ಕೊಡುವಂತಹ ಕಾರ್ಯವಿಧಾನ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಚೆಲುವಾಂಬ ಆಸ್ಪತ್ರೆ ಒತ್ತಡ ತಗ್ಗಿಸಬೇಕು: ಚೆಲುವಾಂಬ ಆಸ್ಪತ್ರೆ ಮೇಲಿನ ಒತ್ತಡ ಕಡಿಮೆಗೊಳಿಸಬೇಕಿದೆ. ಈ ನಿಟ್ಟಿನಲ್ಲಿ ಸಮರ್ಪಕ ಸೌಲಭ್ಯವಿದ್ದೂ ಬಳಕೆಯಾಗದಿರುವ ಜಿಲ್ಲಾಸ್ಪತ್ರೆಗೆ ಹೆಚ್ಚು ಗರ್ಭಿಣಿಯರು ದಾಖಲಾಗುವಂತೆ ನೋಡಿಕೊಳ್ಳಬೇಕಿದೆ. ಆ ಮೂಲಕ ಚೆಲುವಾಂಬ ಆಸ್ಪತ್ರೆಯಲ್ಲಿ ತುರ್ತು ಪ್ರಕರಣಗಳಿಗೆ ಆದ್ಯತೆ ನೀಡುವ ವ್ಯವಸ್ಥೆ ಮಾಡಿಕೊಳ್ಳಬೇಕು. ಇದರಿಂದ ಎಲ್ಲಾ ಪ್ರಕರಣಗಳಲ್ಲಿ ತಾಯಿ ಮತ್ತು ಮಗುವಿನ ಸುರಕ್ಷತೆ ಕಾಯ್ದುಕೊಳ್ಳಲು ಸಾಧ್ಯವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್, ಗರ್ಭಿಣಿಯರಿಗೆ ಸಂಬಂಧಿಸಿದಂತೆ ನಿರೀಕ್ಷಿತ ಪ್ರಮಾಣದಲ್ಲಿ ನೋಂದಣಿ ಮತ್ತು ತಪಾಸಣೆ ಆಗದಿರುವ ಕಾರಣಕ್ಕೆ 'ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ' ಜಾರಿಗೊಳಿಸಲಾಗಿದೆ. ಇದರಡಿ ಪ್ರತಿ ತಿಂಗಳು 9ನೇ ತಾರೀಖಿನಂದು ಸರ್ಕಾರಿ ಆಸ್ಪತ್ರೆ ಮತ್ತು ಕೇಂದ್ರಗಳಲ್ಲಿ ಮಾತ್ರವಲ್ಲದೆ, ಆಸಕ್ತ ಖಾಸಗಿಯವರು ಸ್ವಯಂ ಪ್ರೇರಣೆಯಿಂದ ಉಚಿತ ತಪಾಸಣೆ ನಡೆಸಬೇಕು. ಮೊದಲ ಬಾರಿಗೆ ಗರ್ಭಿಣಿಯಾದವರಿಗೆ ಗಂಭೀರ ತೊಂದರೆ ಇದ್ದಲ್ಲಿ ಪತ್ತೆಹಚ್ಚಿ ಚಿಕಿತ್ಸೆ ನೀಡಲು ಇದರಿಂದ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಈ ಅಭಿಯಾನದ ಪುನಶ್ಚೇತನಕ್ಕಾಗಿ ಇಂದು ಈ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಇಡೀ ಜಿಲ್ಲೆಯಿಂದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಹಾಗೂ ರೇಡಿಯೋಲಜಿಸ್ಟ್‌ಗಳು ಸೇರಿದಂತೆ 70 ಮಂದಿ ಪಾಲ್ಗೊಂಡಿದ್ದರು. ಇದರಲ್ಲಿ ಹೆಚ್ಚಾಗಿ ಖಾಸಗಿ ವೈದ್ಯರು ಇದ್ದರು. ವರ್ಷಕ್ಕೆ 38 ಸಾವಿರದಿಂದ 40 ಸಾವಿರ ಹೆರಿಗೆ ಮೈಸೂರು ಜಿಲ್ಲೆಯಲ್ಲಿ ಆಗುತ್ತವೆ. ಅದರಲ್ಲಿ 35 ಸಾವಿರ ಹೆರಿಗೆ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲೇ ಆಗುತ್ತವೆ. ಚೆಲುವಾಂಬ ಆಸ್ಪತ್ರೆಯಲ್ಲಿ 8ರಿಂದ 10 ಸಾವಿರ ಆದರೆ, 7 ತಾಲೂಕು ಆಸ್ಪತ್ರೆಗಳಲ್ಲಿ 15ರಿಂದ 20 ಸಾವಿರ ಆಗುತ್ತವೆ. ಖಾಸಗಿ ವಲಯದಲ್ಲಿ 5ರಿಂದ 6 ಸಾವಿರ ಹೆರಿಗೆ ಆಗುತ್ತಿವೆ ಎಂದು ವಿವರಿಸಿದರು.

ಇದೇ ವೇಳೆ ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿ ಗರ್ಭಿಣಿಯರ ತಪಾಸಣೆಗೆ ಉಚಿತ ಸೇವೆ ನೀಡುತ್ತಿರುವ ಖಾಸಗಿ ವೈದ್ಯರನ್ನು ಸನ್ಮಾನಿಸಲಾಯಿತು.

ಆರ್‌ಸಿಹೆಚ್‌ಓ ಡಾ.ಎಂ.ಎಸ್. ಜಯಂತ್, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ಎಸ್. ಚಿದಂಬರ, ಚೆಲುವಾಂಬ ಆಸ್ಪತ್ರೆ ಮುಖ್ಯಸ್ಥೆ ಡಾ.ಆರ್.ಸುಧಾ ಮತ್ತಿತರರು ಹಾಜರಿದ್ದರು.

ನಾಳೆ ಮೈಸೂರಲ್ಲಿ ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್ ಉದ್ಘಾಟನೆ

ಮೈಸೂರು, ಫೆ.8(ಎಂಟಿವೈ)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರ ಸಭಾ ಭವನದಲ್ಲಿ ಫೆ.10ರ ಬೆಳಗ್ಗೆ 9.30ಕ್ಕೆ ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್‌ನ ಮೈಸೂರು ಘಟಕದ ಉದ್ಘಾಟನಾ ಸಮಾರಂಭ ಜರುಗಲಿದೆ ಎಂದು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್‌ನ ಮೈಸೂರು ಘಟಕವನ್ನು ಶ್ರೀಯೋಗ ನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕ ಡಾ.ಭಾಷ್ಯಂಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್ ಸಂಸ್ಥಾಪಕ ಡಾ. ಅರಳು ಮಲ್ಲಿಗೆ ಪಾರ್ಥಸಾರಥಿ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಶಾಸಕ ಎಸ್.ಎ.ರಾಮದಾಸ್, ವಿಶ್ವ ವಿಪ್ರತ್ರಯೀ ಪರಿಷತ್ ಅಧ್ಯಕ್ಷ ಎಸ್.ರಘುನಾಥ್, ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ.ಪ್ರಕಾಶ್ ಹಾಗೂ ರಮಾಕಾಂತ ಶೆಣೈ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ವಿಷ್ಣು ಸಹಸ್ರನಾಮದಿಂದ ತರಂಗಗಳು ಏರ್ಪಟ್ಟು ಪರಿಸರ ಶುದ್ಧಿಯಾಗುತ್ತದೆ. ಆತ್ಮಸುಖ, ಯೋಗಕ್ಷೇಮ, ಧೈರ್ಯ, ಸ್ಮರಣೆ, ಸ್ಫೂರ್ತಿ ಸೇರಿದಂತೆ ಇನ್ನಿತರ ಗುಣಗಳನ್ನು ಪಡೆಯಬಹುದಾಗಿದೆ. ಹೀಗಾಗಿ ವಿಷ್ಣು ಸಹಸ್ರನಾಮದಿಂದ ಆಗುವ ಪ್ರಯೋಜನಗಳ ಬಗ್ಗೆ ಜನರಿಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್ ಶ್ರಮಿಸುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗ್ಲೋಬಲ್ ವಿಷ್ಣು ಸಹಸ್ರನಾಮ ಸಂಚಾಲಕ ರಮಾಕಾಂತ ಶೆಣೈ, ಸದಸ್ಯರಾದ ಎಂ.ಆರ್. ಶೇಷಾದ್ರಿ, ಮುರಳಿಧರ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಸುಚೇಂದ್ರ, ಇದ್ದರು.

ಮಾ.23ರಿಂದ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ

ಬೆಂಗಳೂರು, ಫೆ.8(ಕೆಎಂಶಿ)– 14ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವು ಮಾ.23ರಿಂದ 30ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ.


ಮಾ.23ರಂದು ಚಲನಚಿತ್ರೋತ್ಸವ ಉದ್ಘಾಟನೆಯಾಗಲಿದ್ದು, 26ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ವಿತರಣೆ ಮಾಡಲಾಗುತ್ತದೆ ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಲನಚಿತ್ರೋತ್ಸವದ ಅಂಗವಾಗಿ ಸಂವಾದ, ಚರ್ಚೆ, ವಿಚಾರ ಸಂಕಿರಣ, ಅತ್ಯುತ್ತಮ ನಿರ್ದೇಶಕರೊಂದಿಗೆ ಸಂವಾದ, ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತದೆ ಎಂದರು. ಸ್ಪರ್ಧಾ ವಿಭಾಗದಲ್ಲಿ ಏಷ್ಯಾ ಚಲನಚಿತ್ರಗಳು, ಭಾರತೀಯ ಚಲನಚಿತ್ರಗಳು, ಕನ್ನಡ ಚಲನಚಿತ್ರಗಳು, ಸಮಕಾಲೀನ ವಿಶ್ವ ಸಿನಿಮಾ, ಪುನರಾವಲೋಕನ ವಿಭಾಗ, ಭಾರತೀಯ ಸಿನಿಮಾ ಪುನರಾವಲೋಕನ, ಕನ್ನಡ ಸಿನಿಮಾ ಪುನರಾವಲೋಕನ ಮಾಡಲಾಗುತ್ತದೆ.

ಶ್ರೇಷ್ಠ ಚಲನಚಿತ್ರಗಳ ಪುನರ್ ಮನನ ಜೊತೆಗೆ ವಿಶ್ವ ಸಿನಿಮಾ, ಭಾರತೀಯ ಸಿನಿಮಾ ಮತ್ತು ಕನ್ನಡ ಸಿನಿಮಾಗಳ ಪುನರ್ ಮನನ ಮಾಡುವ ಉದ್ದೇಶವು ಇದೆ ಎಂದು ಹೇಳಿದರು. ಜಗತ್ತಿನ ವಿವಿಧ ಭಾಗಗಳಲ್ಲಿ ಪ್ರದರ್ಶನಗೊಂಡು ವಿಮರ್ಶಕರ ಪ್ರಶಂಸೆಗೆ ಪಾತ್ರರಾಗಿರುವ ಚಲನಚಿತ್ರಗಳ ಪ್ರದರ್ಶನ ಹಾಗೂ ಚರ್ಚೆ ನಡೆಸಲಾಗುತ್ತದೆ ಜೊತೆಗೆ ಜನಪ್ರಿಯ ಕನ್ನಡ ಚಲನಚಿತ್ರಗಳ ಪ್ರದರ್ಶನವು ಚಲನಚಿತ್ರೋತ್ಸವದಲ್ಲಿ ಇರುತ್ತದೆ ಎಂದು ಅವರು ತಿಳಿಸಿದರು.



ಕನ್ನೇಗೌಡನಕೊಪ್ಪಲು (ಕೆ.ಜಿ.ಕೊಪ್ಪಲು)–ಜಯನಗರದ ಶ್ರೀ ಚಾಮುಂಡೇಶ್ವರಿ ಹತ್ತು ಜನಗಳ ದೇವಸ್ಥಾನದ ಟ್ರಸ್ಟ್ ವತಿಯಿಂದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಜನ್ಮದಿನವನ್ನು ಆಚರಿಸಲಾಯಿತು. ಈ ವೇಳೆ ಪಾಲಿಕೆ ಸದಸ್ಯರಾದ ಶಿವಕುಮಾರ್,ಮಾಜಿ ಸದಸ್ಯರಾದ ಚನ್ನಪ್ಪ, ಯಜಮಾನರಾದ ವೆಂಕಟೇಶ್, ರಮೇಶ್, ದೇಶಿಗೌಡ, ರವಿ, ದತ್ತು ಕುಮಾರ್, ಮಲ್ಲೇಗೌಡ, ನಾರಾಯಣ್, ಬಸಪ್ಪ, ಪಾಪಣ್ಣ, ಕೃಷ್ಣೇಗೌಡ, ಸತೀಶ್, ರಾಜು, ಮಹದೇವ, ಶ್ರೀನಿವಾಸ್, ಮಾಯಪ್ಪ, ಮೋಹನ್ ಕುಮಾರ್‌ಗೌಡ, ದಿಲೀಪ್, ಕಾಳಪ್ಪ, ಪುಟ್ಟರಾಜು, ಪ್ರಶಾಂತ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.2.2023 ಗುರುವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಭಾಗವತೀಯ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀ ಬಾಲಕೃಷ್ಣಾನಂದ ಮಹಾಸಂಸ್ಥಾನಂ :** ಉಚಿತ ಆರೋಗ್ಯ ತಪಾಸಣೆ ಹಾಗೂ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಬಾಲಕೃಷ್ಣಾನಂದ ಮಠದ ಆವರಣ, ಗಜಾರಣ್ಯ ಕ್ಷೇತ್ರ, ತಲಕಾಡು, ಬೆಳಗ್ಗೆ 9 ರಿಂದ.
■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ತ್ರಿಣೇಶ್ವರ ಸ್ವಾಮಿಯ ಬ್ರಹ್ಮೋತ್ಸವ, ಬೆಳಗ್ಗೆ ಮಹಾಭಿಷೇಕ, ಸ್ಥಳ: ಶ್ರೀ ತ್ರಿಣೇಶ್ವರ ಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಆವರಣ.
■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು, ಸೊಂಟ, ಭುಜ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.
■ **ಸೇಂಟ್ ಫಿಲೋಮಿನಾ ಕಾಲೇಜು :** ಡಿಜಿಟಲ್ ರೂಪಾಂತರ, ಸುಸ್ಥಿರತೆ ಮತ್ತು ಸ್ವಾಸ್ಥ್ಯ–ಹೊಸ ದೃಷ್ಟಿಕೋನ ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ, ಅಧ್ಯಕ್ಷತೆ : ಮೈಸೂರು ಧರ್ಮಪ್ರಾಂತ್ಯದ ಆಡಳಿತಾಧಿಕಾರಿ ಡಾ. ಬರ್ನಾಡ್ ಮೊರಾಸ್, ಮುಖ್ಯ ಅತಿಥಿಗಳು : ಡಾ. ಸಿಸ್ಟರ್ ತೆರೇಸಾ, ಪ್ರೊ. ಶಾದ್ ಅಹ್ಮದ್ ಖಾನ್, ಎಂಡಿಇಎಸ್ ಉಪಾಧ್ಯಕ್ಷ ರೆ. ಮಾನ್ಸಿಂಜರ್ ಅಲ್ಪ್ರೆಡ್ ಜಾನ್ ಮೆಂಡೋನ್ಸಾ, ವಿಜಯಕುಮಾರ್, ಡಾ. ಬರ್ನಾಡ್ ಪ್ರಕಾಶ್ ಬಾರ್ನಿಸ್, ಪ್ರಾಂಶುಪಾಲ ಡಾ. ರವಿ ಜೆ.ಡಿ. ಸಲ್ಡಾನ್ಹಾ, ಡಾ. ಅಲ್ಫೋನ್ಸ್ ಡಿಸೋಜಾ, ಡಾ. ನೂರ್ ಮುಬಾಶೀರ್, ಸ್ಥಳ: ಕಾಲೇಜು ಒಳಾಂಗಣ ಕ್ರೀಡಾಂಗಣ, ಬೆಳಗ್ಗೆ 9.30ಕ್ಕೆ.
■ **ಕಾನೂನು ಅಧ್ಯಯನ ವಿಭಾಗ ಮತ್ತು ಕಾನೂನು ಶಾಲೆ, ಮೈಸೂರು ವಿಶ್ವವಿದ್ಯಾನಿಲಯ, ಭಾರತೀಯ ಭಾಷಾ ಸಮಿತಿ, ಶಿಕ್ಷಣ ಸಚಿವಾಲಯ :** ಕನ್ನಡದಲ್ಲಿ ಕಾನೂನು ಪಠ್ಯಪುಸ್ತಕಗಳ ಅನುವಾದ, ಬರವಣಿಗೆ ಕುರಿತು ಕಾರ್ಯಾಗಾರ, ಉದ್ಘಾಟನೆ: ನ್ಯಾಯಮೂರ್ತಿ ಎಲ್. ನರಸಿಂಹರೆಡ್ಡಿ, ಮುಖ್ಯ ಅತಿಥಿಗಳು: ಭಾರತೀಯ ಭಾಷಾ ಸಮಿತಿ ಅಧ್ಯಕ್ಷ ಚಾಮು ಕೃಷ್ಣಶಾಸ್ತ್ರಿ, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಮುಖ್ಯ ಸಮನ್ವಯ ಅಧಿಕಾರಿ ಡಾ.ಬುದ್ಧ ಚಂದ್ರಶೇಖರ, ಮುಖ್ಯ ಭಾಷಣಕಾರ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಮಾಜಿ ಉಪಕುಲಪತಿ ಪ್ರೊ.ಪಿ.ಈಶ್ವರ ಭಟ್, ಗೌರವ ಅತಿಥಿಗಳು: ಮೈಸೂರು ವಿವಿ ಕುಲಪತಿ ಪ್ರೊ.ಎಚ್. ರಾಜಶೇಖರ್, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಅಧ್ಯಕ್ಷತೆ: ಭಾರತೀಯ ಭಾಷಾ ಸಂಸ್ಥಾನ ನಿರ್ದೇಶಕ ಪ್ರೊ. ಶೈಲೇಂದ್ರ ಕುಮಾರ್, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಬೆಳಗ್ಗೆ 10ಕ್ಕೆ.
■ **ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ಶ್ರೀ ತ್ಯಾಗರಾಜರ, ಶ್ರೀ ಪುರಂದರದಾಸರ, ಶ್ರೀ ಕನಕದಾಸರ ಆರಾಧನಾ ಮಹೋತ್ಸವ, ಅಧ್ಯಕ್ಷತೆ : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಉದ್ಘಾಟನೆ : ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಉಪಸ್ಥಿತರು : ಕುಲಸಚಿವ ಪ್ರೊ. ಟಿ.ಎಸ್. ದೇವರಾಜ, ಸ್ಥಳ: ವಿಶ್ವವಿದ್ಯಾಲಯದ ಆವರಣ, ಬೆಳಗ್ಗೆ 10.30 ರಿಂದ.
■ **ಶಾರದಾ ವಿಲಾಸ ಕಾಲೇಜು:** ಬಜೆಟ್ ವಿಶ್ಲೇಷಣೆ–2023, ಮುಖ್ಯ ವಕ್ತಾರರು: ನಿವೃತ್ತ ಪ್ರಾಂಶುಪಾಲ ಡಾ. ಬಿ.ಎಂ. ಕುಮಾರಸ್ವಾಮಿ, ಮುಖ್ಯ ಅತಿಥಿಗಳು: ಮೈಸೂರು ವಿವಿ ವಿಶ್ರಾಂತ ಉಪ ಕುಲಪತಿ ಡಾ.ಟಿ.ಕೆ. ಉಮೇಶ್, ಶಾರದಾ ವಿಲಾಸ ವಿದ್ಯಾಸಂಸ್ಥೆ ಕಾರ್ಯದರ್ಶಿ ಎನ್.ಚಂದ್ರಶೇಖರ್, ಪ್ರಾಂಶುಪಾಲರಾದ ಡಾ.ಎಂ. ದೇವಿಕಾ, ಅಧ್ಯಕ್ಷತೆ: ಶಾರದಾ ವಿಲಾಸ ಕಾಲೇಜು ಡೀನ್ ಪ್ರೊ.ಸತ್ಯನಾರಾಯಣ, ಸ್ಥಳ:ಶ್ರೀ ವೆಂಕಟಕೃಷ್ಣಯ್ಯ ಸಭಾಂಗಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40ಅರಿವಿನ ಶಿಖರ, ಗಾಯನ– ಜಯಂತಿ ವಿ. ಭಟ್, ಕೆ.ಪಿ. ರೇವತಿ, ಪಿ. ಸುರಭೀ, ವ್ಯಾಖ್ಯಾನ– ಡಾ.ಎನ್.ಎಸ್. ತಾರಾನಾಥ್, 8.30 ಗೆಲುವಿನ ಗುಟ್ಟು–ಪ್ರಹಸನ–ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು–ಕೆ.ಪಿ. ರೇವತಿ, 4.00 ಜನಪದ ಸಂಗೀತ, 4.30 ರಸಮಂಜರಿ– ಮೈಸೂರಿನ KSS ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 6.50 ಕೃಷಿರಂಗ–ಕಿಸಾನ್ ವಾಣಿ–ಗುಣಮಟ್ಟದ ಸಸ್ಯಗಳ ಲಭ್ಯತೆ ಹಾಗೂ ಸಸ್ಯ ಕ್ಷೇತ್ರಗಳ ನಿರ್ವಹಣಾ ಮೊಬೈಲ್ ಆ್ಯಪ್‌ನ ಬಳಕೆ ಕುರಿತು ಶರತ್ ಪ್ರಕಾಶ್ ಪಾಟೀಲ್ ಅವರೊಂದಿಗೆ ಸಂದರ್ಶನ, 8.00 ಯುವವಾಣಿ–ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 9.30 ಕನ್ನಡ ಭಾರತಿ

■ **ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ಫಿಜಿಯೋಥೆರಪಿ ಕಾಲೇಜು:** ವಾರ್ಷಿಕ ಎನ್‌ಎಸ್‌ಎಸ್ ವಿಶೇಷ ಶಿಬಿರ, ಬೆಳಗ್ಗೆ 10 ರಿಂದ ಉಚಿತ ಫಿಜಿಯೋಥೆರಪಿ ತಪಾಸಣೆ ಮತ್ತು ವೈದ್ಯಕೀಯ ಚಿಕಿತ್ಸಾ ಶಿಬಿರ, ಸ್ಥಳ:ಜೆಎಸ್‌ಎಸ್ ದಂತ ವೈದ್ಯಕೀಯ ಮಹಾವಿದ್ಯಾಲಯ.
■ **ಅಕ್ಯೂಪಂಚರ್ ಅಸೋಸಿಯೇಷನ್ ಮತ್ತು ಓರಿಯೋಲಸ್ ಯೋಗಾಸಂಸ್ಥೆ :** ಉಚಿತ ಅಕ್ಯೂಪಂಚರ್ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ, ಸ್ಥಳ: ಅಕ್ಯೂಪಂಚರ್ ಅಸೋಸಿಯೇಷನ್, ಬೆಳಗ್ಗೆ 11 ರಿಂದ.
■ **ಮೈಸೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ:** ರಾಷ್ಟ್ರೀಯ ಏಕೀಕರಣ ಶಿಬಿರದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ, ಸಮಾರೋಪ ಭಾಷಣ: ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶನಾಲಯದ ಪ್ರಾದೇಶಿಕ ನಿರ್ದೇಶಕ ಕೆ.ವಿ.ಖಾದ್ರಿ ನರಸಿಂಹಯ್ಯ, ಮುಖ್ಯ ಅತಿಥಿಗಳು : ಬೆಂಗಳೂರು ಗಾಂಧಿ ಭವನದ ಉಪಾಧ್ಯಕ್ಷ ಪ್ರೊ. ಜಿ.ಬಿ. ಶಿವರಾಜು, ಸ್ಥಳ: ಎನ್‌ಎಸ್‌ಎಸ್ ಭವನ, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.
■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
■ **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಬದುಕು ಮತ್ತು ಜೀವನ ಕುರಿತು ಉಪನ್ಯಾಸ, ಸ್ಥಳ: ದತ್ತ ಸನ್ನಿಧಿ, ಯಜ್ಞಶಾಲೆ, ಚಿನ್ಮಯ ಮಿಷನ್, ಗೋಕುಲಂ, ಸಂಜೆ 6ಕ್ಕೆ
■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಐಎಎಫ್‌ನಲ್ಲಿ ನನ್ನ ಅದ್ಭುತ ಪ್ರಯಾಣ ಕುರಿತು ಇಂಡಿಯನ್ ಏರ್‌ಫೋರ್ಸ್ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ. ವಿನಯ್ ವಿಠ್ಠಲ್ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ.
■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಮಹಾಶಿವರಾತ್ರಿ ಪ್ರಯುಕ್ತ ರಾಮಕೃಷ್ಣನಗರದಲ್ಲಿ ದ್ವಾದಶ ಜ್ಯೋತಿರ್ಲಿಂಗಗಳ ಪುಣ್ಯದರ್ಶನ, ಪ್ರತಿದಿನ ಸಂಜೆ 6.30 ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಸಂಜೆ 7 ರಿಂದ ಬಿ.ಕೆ. ರಶ್ಮಿ ಅವರಿಂದ ಪುನರ್ಜನ್ಮದ ವೃತ್ತಾಂತ ಕುರಿತು ಉಪನ್ಯಾಸ, ಸ್ಥಳ: ಖಾಲಿ ನಿವೇಶನ, ಸುಮಿತ್ರ ಸ್ಟೀಲ್ ಎದುರು, ಚದುರಂಗ ರಸ್ತೆ, ರಾಮಕೃಷ್ಣನಗರ, ಐ ಬ್ಲಾಕ್.
■ **ಶ್ರೀ ಚಿಕ್ಕಲಿಂಗೇಶ್ವರ ಸ್ವಾಮಿ ದೇವಸ್ಥಾನ :** ಶ್ರೀ ಚಿಕ್ಕಲಿಂಗಣ್ಣಸ್ವಾಮಿಗಳವರ 86ನೇ ವರ್ಷದ ಆರಾಧನಾ ಮಹೋತ್ಸವ, 47ನೇ ವರ್ಷದ ಲಿಂಗಪ್ರತಿಷ್ಠಾಪನಾ ಜಯಂತಿ, ಸ್ಥಳ: ದೇವಸ್ಥಾನ ಆವರಣ.
■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಫೆಬ್ರವರಿ ತಿಂಗಳ ಕಾರ್ಯಕ್ರಮಗಳು, ಸಂಜೆ 6 ರಿಂದ ವಿದುಷಿ ಸ್ಕಂದ ಎನ್. ಶಾಸ್ತ್ರಿ ಅವರಿಂದ ಮ್ಯಾಂಡೋಲಿನ್ ವಾದನ, ಸಂಜೆ 7.15 ರಿಂದ ವಿದ್ವಾನ್ ಪೃಥ್ವಿ ಭಾಸ್ಕರ್ ಅವರಿಂದ ಗಾಯನ, ವಿದ್ವಾನ್ ಕೇಶವ್ ಮೋಹನಕುಮಾರ್ – ಪಿಟೀಲು, ವಿದ್ವಾನ್ ಜಿ.ಟಿ. ಸ್ವಾಮಿ – ಮೃದಂಗ, ಸ್ಥಳ: ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ನಾರಾಯಣಶಾಸ್ತ್ರಿ ರಸ್ತೆ.
■ **ಸಂಚಲನ ಮೈಸೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಕಾರ್ಕಳ ಯಕ್ಷ ರಂಗಾಯಣದ ಸಂಚಾರಿ ರಂಗ ಕಲಾವಿದರಿಂದ ಅವರಿಂದ ಪರಶುರಾಮ ನಾಟಕ ಪ್ರದರ್ಶನ, ರಚನೆ : ಶಶಿರಾಜ್ ಕಾವೂರು, ನಿರ್ದೇಶನ : ಡಾ. ಜೀವನ್ ರಾಂ ಸುಳ್ಯ, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಚಂಚಲನ ಅಧ್ಯಕ್ಷ ದೀಪಕ್ ಮೈಸೂರು, ಸ್ಥಳ: ಕಲಾಮಂದಿರ, ಸಂಜೆ 7ಕ್ಕೆ.

ಬಜೆಟ್‌ನಲ್ಲಿ 20 ಬೇಡಿಕೆ ಈಡೇರಿಸಲು ಮುಖ್ಯಮಂತ್ರಿಗೆ ರೈತ ಸಂಘ ಪತ್ರ

ಈ ಸರ್ಕಾರದ ಬಗ್ಗೆ ಭರವಸೆ ಇಲ್ಲದಿದ್ದರೂ ಪತ್ರ: ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ

ಮೈಸೂರು,ಫೆ.8(ಪಿಎಂ)– ರಾಜ್ಯ ಬಿಜೆಪಿ ಸರ್ಕಾರ ಜನಪರ, ದುಡಿಯುವ ವರ್ಗದ ಪರವಾಗಿಲ್ಲ. ಆದರೂ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ ಕೋರಿಕೆ ಮೇರೆಗೆ ಮತ್ತು ಚುನಾವಣೆ ಸಮೀಪವಿರುವ ಹಿನ್ನೆಲೆಯಲ್ಲಿ ಒಂದಿಷ್ಟು ನಿರೀಕ್ಷೆ ಇಟ್ಟುಕೊಳ್ಳಬಹುದೇನೋ ಎಂದು 20 ಬೇಡಿಕೆಗಳನ್ನು ಬಜೆಟ್‌ನಲ್ಲಿ ಈಡೇರಿಸಲು ಮುಖ್ಯಮಂತ್ರಿಗಳಿಗೆ ಪತ್ರ ಬರೆಯಲಾಗಿದೆ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸಿಎಂ ಬಸವರಾಜ ಬೊಮ್ಮಾಯಿ ಕೊನೆ ಬಜೆಟ್ ಮಂಡಿಸುತ್ತಿದ್ದಾರೆ. ನಾವು ನಿರೀಕ್ಷೆ ಹೊಂದಿಲ್ಲ. ಏಕೆಂದರೆ ಹಿರಿಯ ಸಾಹಿತಿ ದೇವನೂರ ಮಹಾದೇವನವರು ಹೇಳಿದಂತೆ ಈ ಸರ್ಕಾರ ಜನಪ್ರತಿನಿಧಿ ಸರ್ಕಾರ ಅಲ್ಲ. ವಾಮ ಮಾರ್ಗ ಮೂಲಕ ಬಂದ ಸರ್ಕಾರವಿದು ಎಂದು 20 ಬೇಡಿಕೆಗಳನ್ನು ವಿವರಿಸಿದರು.

ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ–ಸಂರಕ್ಷಣಾ ಕಾಯ್ದೆ ಹಿಂಪಡೆಯಬೇಕು. ಆಂಧ್ರ ಪ್ರದೇಶ ಸರ್ಕಾರದಂತೆ ಮುಂಗಾರಿನಲ್ಲಿ ರೈತರಿಗೆ ಎಕರೆಯೊಂದಕ್ಕೆ 10 ಸಾವಿರ ಸಹಾಯಧನ ನೀಡಬೇಕು. ಗುಜರಾತ್ ಸರ್ಕಾರದಂತೆ ನಾಟಿ ಹಸು ಸಾಕಲು ಮಾಸಿಕ 400 ರೂ. ಸಹಾಯಧನ ನೀಡಬೇಕು. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ 50 ರೂ. ನೀಡಬೇಕು.

ಕೇಂದ್ರ ಸರ್ಕಾರ ಉದ್ದೇಶಿಸಿರುವ ವಿದ್ಯುತ್ ತಿದ್ದುಪಡಿ ಕಾಯ್ದೆ ರಾಜ್ಯದಲ್ಲಿ ಜಾರಿ ಇಲ್ಲವೆಂದು ಘೋಷಣೆ ಮಾಡಬೇಕು. ಭರವಸೆಯಂತೆ ಗೃಹ ವಿದ್ಯುತ್ ಬಾಕಿ ಮನ್ನಾ ಮಾಡಬೇಕು. ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಬೆಳಕೆದಾರರಿಗೆ ಯೂನಿಟ್ ಮಿತಿ ಕೈಬಿಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು 10 ಗಂಟೆ ಕಾಲ 3–ಫೇಸ್ ವಿದ್ಯುತ್ ಪೂರೈಸಬೇಕು. ಫಸಲು ಪಹಣಿ ಶುಲ್ಕ ರದ್ದುಪಡಿಸಿ ಉಚಿತವಾಗಿ ನೀಡಬೇಕು. ಆಶ್ವಾಸನೆಯಂತೆ ಸಾಲ ವಸೂಲಿಗಾಗಿ ರೈತರ ಆಸ್ತಿ ಹರಾಜು ಪ್ರಕ್ರಿಯೆಗೆ ತಡೆ ನೀಡಬೇಕು.



ಹತ್ತಿಗೆ 10,500 ರೂ., ಕೊಬ್ಬರಿಗೆ 19 ಸಾವಿರ ರೂ., ತೊಗರಿಗೆ 6,500 ರೂ. ನಿಗದಿ (ಕ್ವಿಂಟಾಲ್‌ಗೆ) ಮಾಡಿ ಸರ್ಕಾರವೇ ಖರೀದಿಸಬೇಕು. ಆವರ್ತನಿಧಿಗಾಗಿ ಕನಿಷ್ಠ 20 ಸಾವಿರ ಕೋಟಿ ಮೀಸಲಿಡಬೇಕು. ಕೃಷಿ ಬೆಲೆ ಆಯೋಗದ ಶಿಫಾರಸ್ಸು ಜಾರಿ ಮಾಡಬೇಕು. ರಾಗಿ, ಭತ್ತ, ತೊಗರಿ, ಎಣ್ಣೆಕಾಳು, ಸಿರಿಧಾನ್ಯಗಳನ್ನು ಪಡಿತರ ವ್ಯವಸ್ಥೆಗೆ ಲಿಂಕ್ ಮಾಡಿ ನೇರವಾಗಿ ರೈತರಿಂದ ಕನಿಷ್ಠ ಬೆಂಬಲ ಬೆಲೆಗೆ ಖರೀದಿಸಬೇಕು. ಎಲ್ಲಾ ಜಿಲ್ಲೆಗಳ ಭತ್ತದ ಬೆಳೆಗಾರರಿಗೂ ಕ್ವಿಂಟಾಲ್‌ಗೆ 500 ರೂ. ಸಹಾಯಧನ ನೀಡಬೇಕು.

ನೈಸರ್ಗಿಕ ಕೃಷಿ ಉತ್ತೇಜಿಸಲು ಆಂಧ್ರ ಪ್ರದೇಶ ಸರ್ಕಾರದಂತೆ ಪ್ರತ್ಯೇಕ ಸೆಕ್ರೇಟರಿಯೇಟ್ ಆರಂಭಿಸಬೇಕು. ಶೂನ್ಯ ಬಡ್ಡಿದರದಲ್ಲಿ 5 ಲಕ್ಷ ರೂ.ವರೆಗೆ ಕೃಷಿ ಬೆಳೆ ಸಾಲ ನೀಡಬೇಕು. ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ಹಳ್ಳಿಗಳಿಗೆ ಸಮರ್ಪಕ ಕುಡಿಯುವ ನೀರು ಒದಗಿಸಬೇಕು. ಕಾಡಂಚಿನ ಪ್ರದೇಶದಲ್ಲಿನ ಮಾನವ–ವನ್ಯಜೀವಿ ಸಂಘರ್ಷ ತಡೆಗೆ ಶಾಶ್ವತ ಪರಿಹಾರಕ್ಕೆ ಹಣ ಮೀಸಲಿಡಬೇಕು. ಅಲ್ಲದೆ, ಸಾವು ಸಂಭವಿಸಿದರೆ ಕನಿಷ್ಠ 15 ಲಕ್ಷ ಪರಿಹಾರ ನೀಡಬೇಕು. ಕಾಡುಪ್ರಾಣಿಗಳಿಂದಾಗುವ ಬೆಳೆ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ನೀಡಬೇಕು. ಕೆ.ಎಸ್.ಪುಟ್ಟಣ್ಣಯ್ಯ, ಎನ್.ಡಿ.ಸುಂದರೇಶ್ ಅವರ ಅಧ್ಯಯನ ಪೀಠ ಸ್ಥಾಪಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಫೆ.13ರಂದು ನೆನಪಿನ ದಿನಾಚರಣೆ: ಫೆ.13ರಂದು ಚಾಮರಾಜನಗರದಲ್ಲಿ ಪ್ರೊ.ಎಂ.ಡಿ.ನಂಜುಂಡಸ್ವಾಮಿಯವರ ನೆನಪಿನ ದಿನಾಚರಣೆ, ರೈತ ಸಂಘದ ಯುವ ಘಟಕಕ್ಕೆ ಚಾಲನೆ ಸಮಾರಂಭ ಆಯೋಜಿಸಲಾಗಿದೆ. ಬೆಳಗ್ಗೆ 11ಕ್ಕೆ ನಂದಿ ಭವನದಲ್ಲಿ ನೆನಪಿನ ದಿನಾಚರಣೆ, ಯುವ ಘಟಕಕ್ಕೆ ಚಾಲನೆ ಸಮಾರಂಭ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಚಿಂತಕರಾದ ಡಾ.ಬಂಜಗೆರೆ ಜಯಪ್ರಕಾಶ್, ಪ್ರೊ.ಯೋಗೇಂದ್ರ ಯಾದವ್ ಭಾಗವಹಿಸಲಿದ್ದಾರೆ. ಫೆ.16 ರಂದು ರೈತ, ದಲಿತ, ಕಾರ್ಮಿಕ, ಮಹಿಳೆ, ವಿದ್ಯಾರ್ಥಿ ಮತ್ತು ಜನರ ಸಮಸ್ಯೆಗಳ ಪರಿಹಾರಕ್ಕೆ ಆಗ್ರಹಿಸಿ ಬೆಂಗಳೂರು ಚಲೋ ಹಮ್ಮಿಕೊಂಡಿದ್ದು, ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಹೋರಾಟ ನಡೆಸಲಾಗುವುದು ಎಂದರು. ಸಂಘದ ಮುಖಂಡರಾದ ಮನು ಸೋಮಯ್ಯ, ಮಂಜುನಾಥಗೌಡ, ನೇತ್ರಾವತಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ರೈತರಿಂದ ತೇಜಸ್ವಿ ಸೂರ್ಯಗೆ ಕೃಷಿ ಪಾಠ

ಮೈಸೂರು: ರೈತರ ಸಾಲ ಮನ್ನಾ ಮಾಡಿದರೆ ದೇಶಕ್ಕೆ ಉಪಯೋಗ ಇಲ್ಲವೆಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದರು ಹೇಳಿಕೆ ನೀಡಿದ್ದಾರೆ. ಹೆಬ್ಬೆಟ್ಟು ಒತ್ತುವ ರೈತರಿಂದ ಅವರಿಗೆ ಕೃಷಿ–ರೈತರ ಉಪಯೋಗದ ಪಾಠ ಹೇಳಿಕೊಡಿಸುತ್ತೇವೆ. ಬೇಕಿದ್ದರೆ ಬರಲಿ ಎಂದು ತೇಜಸ್ವಿ ಸೂರ್ಯ ಹೆಸರೇಳದೇ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಛೇಡಿಸಿದರು.

ನರೇಂದ್ರ ಮೋದಿ ಸರ್ಕಾರ 9 ಲಕ್ಷ 91 ಸಾವಿರ ಕೋಟಿ ಕಾರ್ಪೊರೇಟ್ ಸೆಕ್ಟರ್‌ನ ಸಾಲ ಮನ್ನಾ ಮಾಡಿದೆ. 536 ಮಂದಿ ಉದ್ಯಮಿಗಳು ಸಾಲ ತೀರಿಸದೇ ದೇಶ ತೊರೆದಿದ್ದಾರೆ. ಅವರ ಸಾಲ ಮನ್ನಾದಿಂದ ದೇಶಕ್ಕೆ ಆಗಿರುವ ಉಪೋಗದ ಬಗ್ಗೆ ಅವರು ಉತ್ತರ ಕೊಡಬೇಕು. ರೈತರ ಅವಹೇಳನ ಮಾಡಿದರೆ ಅವರು ತೀವ್ರ ಪ್ರತಿಭಟನೆ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬೊಮ್ಮಾಯಿಗೆ ಭಯ: ಬಜೆಟ್ ಪೂರ್ವದಲ್ಲಿ ರೈತರ ಸಭೆ ಕರೆಯಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಭಯ. ರೈತರು ಸೇರಿದಂತೆ ವಿವಿಧ ಸಂಘಟನೆಗಳ ಸಭೆ ಕರೆಯಲಾಗುವುದು ಎಂಬ ಸುದ್ದಿ ವರದಿಯಾಗಿತ್ತು. ಆದರೆ ಕರೆದಿಲ್ಲ. ಅವರ ಆಪ್ತ ಕಾರ್ಯದರ್ಶಿಯನ್ನು ಸಭೆ ಏಕೆ ಕರೆದಿಲ್ಲ ಎಂದರೆ ಅವರಲ್ಲಿ ಉತ್ತರವಿಲ್ಲ. ಈ ಸರ್ಕಾರಕ್ಕೆ ರೈತರ ಪ್ರಶ್ನೆಗೆ ಉತ್ತರಿಸುವ ಮುಖವಿಲ್ಲ. ಕೇವಲ ಒಂದು ಉದಾಹರಣೆ ಹೇಳುವುದಾದರೆ ರೈತರ ಚಳವಳಿ ಎದುರಿಸಲಾಗದೇ ಸಚಿವ ಗೋಪಾಲಯ್ಯ ಮಂಡ್ಯ ಉಸ್ತುವಾರಿ ಸಚಿವ ಸ್ಥಾನವನ್ನೇ ಬದಲಾಯಿಸಿಕೊಂಡಿದ್ದಾರೆ ಎಂದು ಹೇಳಿದರು.

ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಮಾತನಾಡಿ, 400 ಹಸುಗಳ ಸಾವಿಗೆ ಸಂಬಂಧಿಸಿದಂತೆ ವಿಮೆ ಹಣ ನೀಡದೇ ನ್ಯಾಷನಲ್ ಇನ್ಸೂರೆನ್ಸ್ ಕಂಪನಿ ರೈತರಿಗೆ ಅನ್ಯಾಯ ಮಾಡಿದೆ. ಫೆ.16ರ ಬಳಿಕ ರಾಮಸ್ವಾಮಿ ವೃತ್ತದಲ್ಲಿರುವ ಈ ಕಂಪನಿ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಸಿಲ್ಕ್ ಇಂಡಿಯಾ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ



ಮೈಸೂರು, ಫೆ8(ಎಂಕೆ)– ನಾರದ ವಿನೋಭಾ ರಸ್ತೆಯಲ್ಲಿರುವ ನಂಜರಾಜ ಬಹದ್ದೂರ್ ಛತ್ರದಲ್ಲಿ ನ್ಯೂ ಕ್ರಾಫ್ಟ್ಸ್ ಆಫ್ ಇಂಡಿಯಾ ಆಯೋಜಿಸಿರುವ 'ಸಿಲ್ಕ್ ಇಂಡಿಯಾ' ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ನಾನಾ ವಸ್ತ್ರ ಉತ್ಪನ್ನಗಳು ಮೇಳದಲ್ಲಿದ್ದು, ಸಾಕಷ್ಟು ಜನರು ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಫೆ.12ರವರೆಗೆ ಮೇಳ ನಡೆಯಲಿದ್ದು, ಪ್ರತಿನಿತ್ಯ ಹೊಸ ಹೊಸ ವಸ್ತುಗಳು ಸೇರ್ಪಡೆಯಾಗುತ್ತಿವೆ ಎಂದು ಆಯೋಜಕರು ತಿಳಿಸಿದ್ದಾರೆ. 10 ದಿನದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ 25ಕ್ಕೂ ಹೆಚ್ಚು ಮಳಿಗೆಗಳಿದ್ದು, ದೇಶಾದ್ಯಂತದ ವಿನ್ಯಾಸಕರು ನೇರವಾಗಿ ಗ್ರಾಹಕರನ್ನು ತಲುಪಲು ತಮ್ಮ ಕರಕುಶಲ ಉತ್ಪನ್ನಗಳನ್ನು ಪ್ರದರ್ಶಿಸುತ್ತಿದ್ದಾರೆ. ಕಾಶ್ಮೀರಿ, ಪಶ್ಚಿಮ ಬಂಗಾಳ, ಇಕ್ಕತ್, ಒರ್ಡಿಶಾ, ಬನಾರಸ್ ಸೀರೆಗಳು, ಟಸ್ಸರ್ ಸಿಲ್ಕ್ ಸೀರೆಗಳು, ಜ್ಯೂಟ್ ಸೀರೆಗಳು, ರಾಜಸ್ಥಾನ್ ಜೈಪುರ ಟಾಪ್ಸ್, ಬಾಗಲ್ಪುರ್ ಸೂಟ್‌ಗಳು, ಕಲಂಕಾರಿ ಟಾಪ್ಸ್, ಹುಬ್ಬಳ್ಳಿ ಸೀರೆಗಳು, ಜೈಪುರ ಬೆಡ್‌ಶೀಟ್‌ಗಳು, ಕುಚ್ ಬುಚ್ ಟಾಪ್ಸ್, ಒಂದು ಗ್ರಾಂ ಗೋಲ್ಡ್ ಜ್ಯುವೆಲ್ಲರಿ, ಪೋಚಂಪಾಲಿ ಉತ್ಪನ್ನಗಳ ಲಭ್ಯವಿದೆ.

ಚಾಲನೆ: ಆತ್ಯಾಕರ್ಷಕ ವಿನ್ಯಾಸ ಹಾಗೂ ಗುಣಮಟ್ಟದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಆಯೋಜಕ ಮಾನಸ್ ಆಚಾರ್ಯ, ಎಸ್.ಎಂ.ಆದಿ ಮತ್ತಿತರರಿದ್ದರು.



ಮೈಸೂರಿನ ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಸ್ವರೂಪ್ ಹಾಗೂ ಉಪಾಧ್ಯಕ್ಷರಾಗಿ ಕುರುಬಾರಹಳ್ಳಿ ಪ್ರಕಾಶ್ ಬುಧವಾರ ಅವಿರೋಧ ಆಯ್ಕೆಯಾದರು. ಅವರನ್ನು ಬ್ಯಾಂಕ್‌ನ ನಿರ್ದೇಶಕರು, ಸಿಬ್ಬಂದಿ ವರ್ಗ ಹಾಗೂ ಅಭಿಮಾನಿಗಳು ಅಭಿನಂದಿಸಿದರು.

ದಶಕದ ಭೀಕರ ಭೂಕಂಪ: 11,200ಕ್ಕೂ ಅಧಿಕ ಸಾವು



ಗಾಝಿಯಾನ್ಟೆಪ್, ಅಂಕಾರಾ (ಟರ್ಕಿ): ದಶಕದಲ್ಲೇ ಅತ್ಯಂತ ಭೀಕರವೆನಿಸಿದ ಭೂಕಂಪದಿಂದ ಟರ್ಕಿ ಮತ್ತು ಸಿರಿಯಾದಲ್ಲಿ ಮೃತರ ಸಂಖ್ಯೆ ದಿನೇ ದಿನೆ ಏರುತ್ತಿದೆ. ಈ ದುರಂತದಲ್ಲಿ ಮಡಿದವರ ಸಂಖ್ಯೆ ಬುಧವಾರ 11,236ಕ್ಕೆ ತಲುಪಿದೆ.

ಕಟ್ಟಡಗಳ ಅವಶೇಷಗಳಡಿ ಜೀವಂತ ಸಮಾಧಿಯಾದವರ ಶವಗಳನ್ನು ಹೊರತೆಗೆಯುವ ಕೆಲಸ ಹಗಲು–ರಾತ್ರಿ ಮುಂದುವರಿದಿದೆ. ಬದುಕುಳಿದವರಿಗಾಗಿ ಶೋಧ ಮತ್ತು ರಕ್ಷಣಾ ಕಾರ್ಯವನ್ನು ವಿಪತ್ತು ಸ್ಪಂದನಾ ಪಡೆಗಳ ಸಿಬ್ಬಂದಿ ಕೊರೆವ ಚಳಿ ಲೆಕ್ಕಿಸದೇ ನಡೆಸುತ್ತಿದ್ದಾರೆ.

ಟರ್ಕಿಯಲ್ಲಿ ಒಬ್ಬ ಭಾರತೀಯ ಪ್ರಜೆ ಕಾಣೆಯಾಗಿದ್ದು, ಇತರ 10 ಭಾರತೀಯರು ಹಾನಿಗೊಳಗಾದ ಪ್ರದೇಶದಲ್ಲಿ ಸಿಲುಕಿದ್ದಾರೆ. ಆದರೆ, ಅವರೆಲ್ಲರೂ ಸುರಕ್ಷಿತವಾಗಿದ್ದಾರೆ ಎಂದು ಭಾರತ ಸರ್ಕಾರ ಹೇಳಿದೆ. ಕಾಣೆಯಾದ ವ್ಯಕ್ತಿಯ ಕುಟುಂಬದ ಜತೆ ಕೇಂದ್ರದ ಅಧಿಕಾರಿಗಳು ಸಂಪರ್ಕದಲ್ಲಿದ್ದಾರೆ. ಸಂತ್ರಸ್ತರಿಗಾಗಿ ಸೇನೆಯ ನಾಲ್ಕು ವಿಮಾನಗಳಲ್ಲಿ ವೈದ್ಯಕೀಯ ನೆರವು, ಔಷಧ, ರಕ್ಷಣಾ ಸಿಬ್ಬಂದಿ ತಂಡ ಹಾಗೂ ಪರಿಹಾರ ಸಾಮಗ್ರಿಗಳನ್ನು ಕೇಂದ್ರ ಸರ್ಕಾರ ಈಗಾಗಲೇ ಟರ್ಕಿಗೆ ಕಳುಹಿಸಿದೆ ಎಂದು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ (ಪಶ್ಚಿಮ) ಸಂಜಯ್ ವರ್ಮಾ ಹೇಳಿದ್ದಾರೆ.

ಸೋಮವಾರ ನಸುಕಿನಲ್ಲಿ ಕಂಪನ ಸಂಭವಿಸಿತ್ತು. ರಿಕ್ಟರ್ ಮಾಪಕದಲ್ಲಿ 7.8 ತೀವ್ರತೆ ಇತ್ತು. ಇದರಿಂದ ಟರ್ಕಿಯಲ್ಲಿ 8,574 ಜನರು ಮತ್ತು ಸಿರಿಯಾದಲ್ಲಿ 2,662 ಜನರು ಈವರೆಗೆ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಂಪನದ ಕೇಂದ್ರಬಿಂದುವಿದ್ದ ಪಟ್ಟಣ ಪರ್ಝಾರಿಕ್ ಮತ್ತು ತೀವ್ರ ಹಾನಿಗೀಡಾದ ಹತಾಯ್‌ಗೆ ಟರ್ಕಿ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೊಗನ್ ಬುಧವಾರ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಮೊದಲ ದಿನದ ರಕ್ಷಣಾ ಕಾರ್ಯದಲ್ಲಿ ಆದ ನ್ಯೂನತೆಗಳನ್ನು ಒಪ್ಪಿಕೊಂಡ ಅವರು, ವಿಪತ್ತು ಬಾಧಿತ ಪ್ರದೇಶಕ್ಕೆ ಹೆಚ್ಚಿನ ನೆರವು ಕಲ್ಪಿಸಲು ಸ್ಥಳದಲ್ಲೇ ಆದೇಶಿಸಿದರು. ಜತೆಗೆ, ಯಾವುದೇ ಸಂತ್ರಸ್ತ ಬೀದಿ ಪಾಲಾಗಲು ಆಸ್ಪದ ನೀಡುವುದಿಲ್ಲವೆಂದೂ ವಾಗ್ದಾನ ಮಾಡಿದರು. ಶೋಧ ಮತ್ತು ರಕ್ಷಣಾ ಕಾರ್ಯದಲ್ಲಿ ಸುಮಾರು 60 ಸಾವಿರ ಸಿಬ್ಬಂದಿ ತೊಡಗಿದ್ದಾರೆ. ಆದರೆ, ಈ ವಿನಾಶದಲ್ಲಿ ಸಿಲುಕಿರುವ ಅನೇಕ ಸಂತ್ರಸ್ತರು ಜೀವ ಬಿಗಿಹಿಡಿದು ನೆರವಿಗಾಗಿ ಇನ್ನೂ ಕಾಯುತ್ತಿದ್ದಾರೆ. ಅವಶೇಷಗಳಡಿ ಸಿಲುಕಿರುವವರ ತುರ್ತು ರಕ್ಷಣೆ, ಗಾಯಾಳುಗಳಿಗೆ ತಕ್ಷಣದ ನೆರವು ಸಿಗುತ್ತಿಲ್ಲವೆನ್ನುವ ಆಕ್ರೋಶ ಮತ್ತು ಹತಾಶೆ ಸಂತ್ರಸ್ತರಿಂದ ವ್ಯಕ್ತವಾಗುತ್ತಿರುವುದೂ ವರದಿಯಾಗಿದೆ.

ಮೈಸೂರು–ಬೆಂಗಳೂರು ಹೆದ್ದಾರಿಗೆ 'ಭುವನೇಶ್ವರಿ' ಹೆಸರಿಡಲು ವಾಟಾಳ್ ಆಗ್ರಹ

ಮೈಸೂರು, ಫೆ8(ಎಂಟಿವೈ)– ಮೈಸೂರು–ಬೆಂಗಳೂರು ದಶಪಥ ರಸ್ತೆಗೆ ಕನ್ನಡಾಂಬೆ ಭುವನೇಶ್ವರಿ ಹೆಸರಿಡುವಂತೆ ಆಗ್ರಹಿಸಿ, ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಪ್ರತಿಭಟನೆ ಮಾಡಿದರು.



ಮೈಸೂರಿನ ಹಾರ್ಡಿಂಗ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಅವರು, ದಶಪಥ ರಸ್ತೆಗೆ ಸೂಕ್ತ ಹಾಗೂ ಗೌರವಯುತ ಹೆಸರಿಡಬೇಕಾದರೆ, ಭುವನೇಶ್ವರಿ ಹೆಸರನ್ನೇ ಇಡಬೇಕು. ಸರ್ಕಾರ ಹಾಗೂ ವಿರೋಧ ಪಕ್ಷಗಳ ಸದಸ್ಯರಿಗೆ ಕನ್ನಡದ ಮೇಲೆ ಅಭಿಮಾನವಿದ್ದರೆ, ಕನ್ನಡಾಂಬೆ ಹೆಸರಿಡಬೇಕು. ಇಲ್ಲದಿದ್ದರೆ ಕನ್ನಡ ಚಟುವಳಿ ವಾಟಾಳ್ ಪಕ್ಷದಿಂದಲೇ ನಾಮಕರಣ ಮಾಡುತ್ತೇವೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಕನ್ನಡ ಚಳಿವಳಿಗಾರರಾದ ಮೂಗೂರು ನಂಜುಂಡಸ್ವಾಮಿ, ತಾಯೂರು ವಿಠ್ಠಲಮೂರ್ತಿ ಇದ್ದರು.

ಯುವ ಕಾಂಗ್ರೆಸ್‌ನಿಂದ ಯೂತ್ ಜೋಡೊ–ಬೂತ್ ಜೋಡೊ

ಮೈಸೂರು, ಫೆ.8(ಎಂಕೆ)– ಯುವ ಕಾಂಗ್ರೆಸ್ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ 'ಯೂತ್ ಜೋಡೊ–ಬೂತ್ ಜೋಡೊ' ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ರಾಷ್ಟ್ರೀಯ ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬಂಟಿ ಶೇಲ್ಕೆ ಕರೆ ನೀಡಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಯುವ ಸಮ್ಮೇಳನ ಹಾಗೂ ಮೈಸೂರು ನಗರ ಯೂತ್ ಕಾಂಗ್ರೆಸ್ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯ ಮತ್ತು ದೇಶದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕಾದರೆ ಯುವಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು.




ಯೂತ್ ಕಾಂಗ್ರೆಸ್ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಭ್ರಷ್ಟಾಚಾರವನ್ನು ತಿಳಿಸಬೇಕು. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಭಾರತ್ ಜೋಡೊ ಪಾದಯಾತ್ರೆ ನಡೆಸಿದ್ದಾರೆ. ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಾದಯಾತ್ರೆ ಮಾಡಿದ್ದಾರೆ. ಆದರೆ ನಾವು ಅಷ್ಟೂ ದೂರದ ಬದಲು ನಮ್ಮ ನಮ್ಮ ಕ್ಷೇತ್ರದಲ್ಲಿ ಮನೆ ಮನೆಗೆ ಪಾದಯಾತ್ರೆ ನಡೆಸಿ ಕಾಂಗ್ರೆಸ್ ಕೊಡುಗೆ ತಿಳಿಸುವ ಮೂಲಕ ಪಕ್ಷ ಸಂಘಟನೆ ಮಾಡಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಮೈಸೂರು ನಗರ ಯೂತ್ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕಗೊಂಡ ಸೈಯದ್ ಅಬ್ರಾರ್ ಅವರಿಗೆ ಯೂತ್ ಕಾಂಗ್ರೆಸ್ ಬಾವುಟ ನೀಡುವ ಮೂಲಕ ಮೈಸೂರು ನಗರಾಧ್ಯಕ್ಷ ಆರ್. ಮೂರ್ತಿ ಅಧಿಕಾರ ಹಸ್ತಾಂತರಿಸಿದರು. ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಮುಖಂಡ ನವೀನ್ ಕುಮಾರ್, ರಾಷ್ಟ್ರೀಯ ಯೂತ್ ಕಾಂಗ್ರೆಸ್ ಕಾರ್ಯದರ್ಶಿ ಮಹಿನ್ ಖಾನ್, ಯುವ ಮುಖಂಡರಾದ ಇಮ್ರಾನ್, ಶ್ರೀನಾಥ್ ಬಾಬು, ಎಸ್.ಆರ್.ರವಿ, ಚೇತನ್ ಕಾಂತ ರಾಜು, ಗಿರೀಶ್, ದೀಪಕ್, ಮಹಿಳಾ ಮುಖಂಡರಾದ ವಿದ್ಯಾ, ಭವ್ಯ, ಕಮಲಮ್ಮ ಮತ್ತಿತರರಿದ್ದರು.


ಪ್ರತಿಭಟನೆ...
ಪದಗ್ರಹಣ ಸಮಾರಂಭದ ಬಳಿಕ ಕಾಂಗ್ರೆಸ್ ಕಚೇರಿ ಎದುರು ಜಮಾವಣೆಗೊಂಡ ನಗರ ಯೂತ್ ಕಾಂಗ್ರೆಸ್ ಕಾರ್ಯಕರ್ತರು ಪ್ರಧಾನಿ ಮೋದಿ ವಿರುದ್ಧ ಧಿಕ್ಕಾರ ಕೂಗಿದರಲ್ಲದೆ ದೇಶದ ಪ್ರಧಾನ ಮಂತ್ರಿಗಳು ತಮ್ಮ ಕಾರ್ಯ ಮರೆತು ಉದ್ಯಮಿ ಅದಾನಿಯ ದಲ್ಲಾಳಿಯಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯತಿರಾಜ ರಾಮಾನುಜ ಜೀಯರ್ ಸ್ವಾಮೀಜಿಗೆ ಜೀವ ಬೆದರಿಕೆ: 'ವೈ' ಕ್ಯಾಟಗಿರಿ ಭದ್ರತೆ



ಮಂಡ್ಯ: ನಿಷೇಧಿತ ಪಿಎಫ್‌ಐ ಸಂಘಟನೆ ಸದಸ್ಯರು ಮೇಲುಕೋಟೆಯ ಯದುಗಿರಿ ಮಠದ ಪೀಠಾಧಿಪತಿ ಯತಿರಾಜ ರಾಮಾನುಜ ಜೀಯರ್ ಸ್ವಾಮೀಜಿಗೆ ಜೀವ ಬೆದರಿಕೆ ಹಾಕಿರುವಂತಹ ಘಟನೆ ನಡೆದಿದೆ. ಜಮ್ಮು–ಕಾಶ್ಮೀರದಲ್ಲಿ ರಾಮಾನುಜಚಾರ್ಯ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ಈ ಹಿನ್ನೆಲೆ ಇಂಟರ್‌ನೆಟ್ ಕರೆ ಮಾಡಿದ ದುಷ್ಕರ್ಮಿಗಳು ಬೆದರಿಕೆ ಹಾಕುತ್ತಿದ್ದಾರೆ. ಜೀವ ಬೆದರಿಕೆ ಕರೆ ಬಂದ ಹಿನ್ನೆಲೆ ಕೇಂದ್ರ ಗೃಹ ಇಲಾಖೆ ಸ್ವಾಮೀಜಿಗೆ ವೈ ಕೆಟಗರಿ ಭದ್ರತೆ ನೀಡಿದೆ.

ನಾಯ್ಡುನಗರದ ಮುಡಾ ನಿವೇಶನಗಳಲ್ಲಿ ನಿರ್ಮಿಸುತ್ತಿದ್ದ ಅನಧಿಕೃತ ಮನೆಗಳ ನೆಲಸಮ




ಮೈಸೂರು, ಫೆ.8(ಆರ್‌ಕೆ)–ಮೈಸೂರಿನ ಆರ್.ಎಸ್.ನಾಯ್ಡು ನಗರದ ಮುಡಾ ನಿವೇಶನಗಳಲ್ಲಿ ಅನಧಿಕೃತವಾಗಿ ನಿರ್ಮಿಸುತ್ತಿದ್ದ 4 ಮನೆಗಳನ್ನು ಇಂದು ನೆಲಸಮಗೊಳಿಸಲಾಯಿತು.

ನಾಯ್ಡು ನಗರ ಬಸ್ ನಿಲ್ದಾಣದ ಹಿಂಭಾಗ ಬೆಲವತ್ತ ಗ್ರಾಮದ ಸರ್ವೆ ನಂಬರ್ 152/2ಎ ರಲ್ಲಿ 2.06 ಎಕರೆ ಭೂಮಿಯನ್ನು 2000ನೇ ಸಾಲಿನಲ್ಲಿ ಭೂ ಸ್ವಾಧೀನಪಡಿಸಿಕೊಂಡಿದ್ದ ಮುಡಾ, ಅಲ್ಲಿ ವಸತಿ ಬಡಾವಣೆ ನಿರ್ಮಿಸಿದೆ. ಅದರಲ್ಲಿ ನಿವೇಶನ ಹಂಚಿಕೆ ಮಾಡಿ ಉಳಿದಿದ್ದ 4 ನಿವೇಶನಗಳಲ್ಲಿ ಕೆಲವರು ಅತಿಕ್ರಮ ಪ್ರವೇಶ ಮಾಡಿ ಮನೆಗಳನ್ನು ನಿರ್ಮಿಸುತ್ತಿದ್ದರು.

ಕೆಲ ಸ್ಥಳೀಯ ಪಟ್ಟಭದ್ರ ಹಿತಾಸಕ್ತಿಯುಳ್ಳ ಮುಖಂಡರು, ರಿಯಲ್ ಎಸ್ಟೇಟ್ ಉದ್ಯಮಿಗಳು ಅತಿಕ್ರಮ ಪ್ರವೇಶ ಮಾಡಿ ದಬ್ಬಾಳಿಕೆಯಿಂದ ಕಟ್ಟಡಗಳನ್ನು ನಿರ್ಮಿಸುತ್ತಿದ್ದ ವಿಷಯ ತಿಳಿದ ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರು ನೆಲಸಮಗೊಳಿಸಲು ಆದೇಶ ನೀಡಿದ್ದರು.

ಅದರಂತೆ ಇಂದು ಬೆಳಗ್ಗೆ 6 ರಿಂದ 10 ಗಂಟೆವರೆಗೆ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು, ಪೊಲೀಸ್ ಭದ್ರತೆ ಪಡೆದು ನಿರ್ಮಾಣ ಹಂತದಲ್ಲಿದ್ದ ಮನೆಗಳನ್ನು ನೆಲಸಮಗೊಳಿಸಿ ಸುಮಾರು 1 ಕೋಟಿ ರೂ. ಮೌಲ್ಯದ ಜಾಗವನ್ನು ವಶಕ್ಕೆ ಪಡೆದರು. ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಚನ್ನಕೇಶವ, ಎಕ್ಸಿಕ್ಯೂಟಿವ್ ಇಂಜಿನಿಯರ್ ಧರ್ಮೇಂದ್ರ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಹೆಚ್.ಪಿ.ಶಿವಣ್ಣ, ಕಿರಣ್, ಹರ್ಷ, ಮೋಹನ್ ಕುಮಾರ್, ಶ್ರೀನಿವಾಸ್, ಕಿರಿಯ ಇಂಜಿನಿಯರ್‌ಗಳು ಹಾಗೂ ಸಿಬ್ಬಂದಿ ನೆಲಸಮ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಮಗುವಿಗೆ ಜನ್ಮ ನೀಡಿದ ಲಿಂಗತ್ವ ಅಲ್ಪಸಂಖ್ಯಾತ



ಕೋಯಿಕ್ಕೋಡ್: ಕೇರಳದ ಸರ್ಕಾರಿ ಆಸ್ಪತ್ರೆಯೊಂದರಲ್ಲಿ ಲಿಂಗತ್ವ ಅಲ್ಪಸಂಖ್ಯಾತ ರೊಬ್ಬರು ಬುಧವಾರ ಮಗುವಿಗೆ ಜನ್ಮ ನೀಡಿದ್ದು, ಇದು ದೇಶದ ಮೊದಲ ಪ್ರಕರಣ ಎನ್ನಲಾಗಿದೆ. ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಬುಧವಾರ ಬೆಳಗ್ಗೆ 9.30ರ ವೇಳೆಗೆ ಸಿಸೇರಿಯನ್ ಶಸ್ತ್ರಚಿಕಿತ್ಸೆಯ ಮೂಲಕ ಜಹಾದ್ ಮಗುವಿಗೆ ಜನ್ಮ ನೀಡಿದ್ದಾರೆ ಎಂದು ಜಹಾದ್ ಅವರ ಸಂಗಾತಿ ಜಿಯಾ ಪಾವಲ್ ತಿಳಿಸಿದ್ದಾರೆ.

ಮಗು ಮತ್ತು ಜಹಾದ್ ಇಬ್ಬರೂ ಆರೋಗ್ಯವಾಗಿದ್ದಾರೆ ಎಂದು ಮಾಧ್ಯಮಗಳಿಗೆ ಮಾಹಿತಿ ನೀಡಿರುವ ಜಿಯಾ, ನವಜಾತ ಶಿಶುವಿನ ಲಿಂಗವನ್ನು ಬಹಿರಂಗಪಡಿಸಲು ನಿರಾಕರಿಸಿದ್ದು, ಅದನ್ನು ಇದೀಗ ಸಾರ್ವಜನಿಕಗೊಳಿಸಲು ಬಯಸುವುದಿಲ್ಲ ಎಂದು ಹೇಳಿದ್ದಾರೆ. ಇತ್ತೀಚೆಗಷ್ಟೇ ಜಿಯಾ ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಜಹಾದ್ ಅವರೀಗ ಎಂಟು ತಿಂಗಳ ಗರ್ಭಿಣಿ ಎಂದು ಘೋಷಿಸಿದ್ದರು. ನಾನು ತಾಯಿಯಾಗುವ ಮತ್ತು ಅವನು ತಂದೆಯಾಗುವ ಕನಸನ್ನು ನನಸಾಗಿಸಿಕೊಳ್ಳಲಿದ್ದೇವೆ. ಎಂಟು ತಿಂಗಳ ಭ್ರೂಣವು ಈಗ ಜಹಾದ್ ಹೊಟ್ಟೆಯಲ್ಲಿ ಬೆಳೆಯುತ್ತಿದೆ. ನಮಗೆ ತಿಳಿದುಬಂದ ಮಾಹಿತಿ ಪ್ರಕಾರ, ಭಾರತದಲ್ಲಿ ಲಿಂಗಪರಿವರ್ತಿತ ಪುರುಷ (ಟ್ರಾನ್ಸ್‌ಮ್ಯಾನ್) ಗರ್ಭಧಾರಣೆ ಮಾಡಿರುವುದು ಇದೇ ಮೊದಲು ಎಂದೂ ಜಿಯಾ ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ತಿಳಿಸಿದ್ದರು.

ಹಳೆಯ ಪದಾರ್ಥಗಳಿಗೆ ಹೊಸರೂಪ

ಇ–ವೇಸ್ಟ್‌ನಿಂದ ರೂಪುಗೊಂಡ ಪ್ರಾಣಿ–ಪಕ್ಷಿ ಸೇರಿದಂತೆ ನಾನಾ ಕಲಾಕೃತಿಗಳು

- ಪ್ರಮುಖ ವೃತ್ತ, ಉದ್ಯಾನವನಗಳಲ್ಲಿ ಪ್ರತಿಷ್ಠಾಪನೆ
- ಮುಂದಿನ ದಿನಗಳಲ್ಲಿ ಇನ್ನು ನವೀನ ಮಾದರಿ ಅನುಸರಿಸಲು ನಿರ್ಧಾರ




ಮೈಸೂರು, ಫೆ.8(ಎಂಕೆ)– ಇ–ವೇಸ್ಟ್(ಎಲೆಕ್ಟ್ರಾನಿಕ್ ಅಥವಾ ವಾಹನಗಳ ಕಬ್ಬಿಣದ ನಿರುಪಯುಕ್ತ ವಸ್ತುಗಳು) ಗಳಿಂದ ನಿರ್ಮಾಣಗೊಂಡ ಪ್ರಾಣಿ–ಪಕ್ಷಿಗಳ ಕಲಾಕೃತಿಗಳು ನೋಡುಗರ ಗಮನ ಸೆಳೆಯುವುದಲ್ಲದೆ ಬಾರೀ ಪ್ರಶಂಸೆಗೆ ಪಾತ್ರವಾಗಿವೆ...

ಮೈಸೂರು ಮಹಾಪಾಲಿಕೆಯ ಕೇಂದ್ರ ಕಚೇರಿ ಎದುರು ಸೇರಿದಂತೆ ನಗರದ ವಿವಿಧ ಉದ್ಯಾನವನಗಳಲ್ಲಿ ಅಳವಡಿಸಿರುವ ಕಲಾಕೃತಿಗಳು ಹೊಸ ಹೊಳಪನ್ನು ನೀಡುವುದಲ್ಲದೆ ನಿರುಪಯುಕ್ತ ವಸ್ತುಗಳು ಉಪಯುಕ್ತವಾಗುತ್ತವೆ ಎಂಬುದನ್ನು ಸಾಕ್ಷೀಕರಿಸಿವೆ.



ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡದೆ ಮರುಬಳಕೆ ಮಾಡಿ ಆಟಿಕೆ, ಕಲಾಕೃತಿ ಅಥವಾ ಗೃಹೋಪಯೋಗಿ ಅಲಂಕಾರಿಕ ವಸ್ತುಗಳನ್ನು ತಯಾರಿಸುವ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸುವ ಪಾಲಿಕೆಯ ಉದ್ದೇಶ ಸಾಕಾರಗೊಂಡಿದ್ದು, ಮೊದಲ ಹಂತದಲ್ಲಿ ಪಾಲಿಕೆ ಕಚೇರಿ ಎದುರು ಸೇರಿದಂತೆ 9 ವಲಯ ಕಚೇರಿ ವ್ಯಾಪ್ತಿ ಉದ್ಯಾನವನಗಳಲ್ಲಿ ನಿರುಪಯುಕ್ತ ವಸ್ತುಗಳಿಂದ ತಯಾರಾದ ಗಂಡ ಬೇರುಂಡ, ನವಿಲು, ಮೇಕ್ ಇನ್ ಇಂಡಿಯಾ ಲೋಗೋ ಮಾದರಿಯ ಹುಲಿ, ಪಾಂಡ, ನವಿಲು, ಯೂನಿಕಾರ್ನ್, ಡೈನೋಸಾರ್, ಆಗ್ರಿ ಬರ್ಡ್ ಸೇರಿದಂತೆ 14 ಕಲಾಕೃತಿಗಳು ಗಮನ ಸೆಳೆಯುತ್ತಿವೆ.



ನಗರ ಪಾಲಿಕೆ ಮುಖ್ಯ ಕಚೇರಿ ಎದುರು ಗಂಡು ಬೇರುಂಡ, ಮೇಕ್ ಇನ್ ಇಂಡಿಯಾ ಲೋಗೋ ಮಾದರಿಯ ಹುಲಿ ಹಾಗೂ ನವಿಲು ಇದ್ದರೆ, ಮಧುವನ ಉದ್ಯಾನವನದಲ್ಲಿ ಪಾಂಡ ಮತ್ತು ನವಿಲು ಕಲಾ ಕೃತಿಗಳಿವೆ. ಸುಮಾಸೋಪಾನ ಉದ್ಯಾನವನದಲ್ಲಿ ಯೂನಿಕಾರ್ನ್, ಚೆಲುವಾಂಬ ಉದ್ಯಾನವನದಲ್ಲಿ ಆಗ್ರಿ ಬರ್ಡ್ ಮತ್ತು ಕಾಂಗರೂ, ಯೋಗ ನರಸಿಂಹ ಉದ್ಯಾನವನದಲ್ಲಿ ಡೈನೋಸಾರ್, ಎಲ್‌ಐಸಿ ವೃತ್ತದಲ್ಲಿ ಆನೆ, ಉದಯಗಿರಿ ಪಾರ್ಕ್‌ನಲ್ಲಿ ಸಿಂಹ ಹಾಗೂ ಸ್ಕೇಟಿಂಗ್ ಉದ್ಯಾನವನದಲ್ಲಿ ಪಾಂಡಾ ನೋಡುಗರ ಗಮನ ಸೆಳೆಯುತ್ತಿವೆ.


ಪ್ರಾಯೋಗಿಕ ಪ್ರಯತ್ನ: ನಿರುಪಯುಕ್ತ ಮೆಟಲ್ ವಸ್ತುಗಳಿಂದ ಪ್ರಾಯೋಗಿಕವಾಗಿ ಪ್ರಾಣಿ–ಪಕ್ಷಿಗಳ ಕಲಾಕೃತಿಗಳನ್ನು ಸಿದ್ಧಪಡಿಸಿ, ಉದ್ಯಾನವನಗಳಲ್ಲಿ ಹಾಗೂ ಕಚೇರಿ ಎದುರು ಅಳವಡಿಸಲಾಗಿದೆ. ಕಲಾಕೃತಿಗಳು ಉತ್ತಮವಾಗಿ ಮೂಡಿಬಂದಿದ್ದು, ಸಾರ್ವಜನಿಕರ ಮೆಚ್ಚುಗೆಗೂ ಪಾತ್ರವಾಗಿದೆ. ಮಳೆ–ಗಾಳಿ–ಬಿಸಿಲು ಎಷ್ಟೇ ಇದ್ದರೂ ಹಾಳಾಗದಂತೆ ಕಲಾಕೃತಿಗಳನ್ನು ವಿನ್ಯಾಸ ಮಾಡಿದ್ದು, ಸೂಕ್ತ ಸ್ಥಳಗಳಲ್ಲಿ ಅಳವಡಿಸಲಾಗಿದೆ ಎಂದು ಕಾರ್ಯಪಾಲಕ ಇಂಜಿನಿಯರ್ ರಂಜಿತ್ ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಬೆಂಗಳೂರಿನಲ್ಲಿ ತಯಾರಿ: ಕಲಾಕೃತಿಗಳ ರಚನೆಗೆ ಗುತ್ತಿಗೆ ಪಡೆದವರು ಮೈಸೂರಿನಿಂದ ಇ–ವೇಸ್ಟ್‌ಗಳನ್ನು ತೆಗೆದುಕೊಂಡು ಹೋಗಿ ಬೆಂಗಳೂರಲ್ಲಿ ಕಲಾಕೃತಿಗಳನ್ನಾಗಿ ಸಿದ್ಧಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಇ–ವೇಸ್ಟ್‌ನಿಂದ ಇನ್ನಷ್ಟು ಕಲಾಕೃತಿಗಳನ್ನು ನಿರ್ಮಿಸಿ ನಗರದ ಎಲ್ಲಾ ಉದ್ಯಾನವನಗಳಲ್ಲಿ ಅಳವಡಿಸುವ ನಿರ್ಧಾರ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸಾರ್ವಜನಿಕ ಸಂದೇಶ ನೀಡುವ ಗುರಿ...




ಸಿಮೇಜ್ ಪಾರಂನಲ್ಲಿ ಸಂಗ್ರಹವಾಗಿದ್ದ ಹಾಗೂ ಪಾಲಿಕೆ ವಾಹನ ವಿಭಾಗದಲ್ಲಿದ್ದ ನಿರುಪಯುಕ್ತ ಕಬ್ಬಿಣದ ವಸ್ತುಗಳಲ್ಲಿ ಮೊದಲ ಹಂತವಾಗಿ ಪ್ರಾಣಿ–ಪಕ್ಷಿಗಳ ಕಲಾಕೃತಿಗಳನ್ನು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಪರಿಸರ ಸಂರಕ್ಷಣೆ ಕುರಿತು ವಿವಿಧ ಪರಿಕಲ್ಪನೆಗಳ ಆಧಾರದ ಮೇಲೆ ಕಲಾಕೃತಿಗಳನ್ನು ನಗರದ ಎಲ್ಲಾ ಉದ್ಯಾನವನಗಳು ಹಾಗೂ ವಲಯ ಕಚೇರಿಗಳ ವ್ಯಾಪ್ತಿಯಲ್ಲಿ ಅಳವಡಿಸಲಾಗುವುದು. - ಶಿವಕುಮಾರ್, ಮೇಯರ್











ನಕ್ಕರೆ ಅದೇ ಸ್ವರ್ಗ

ಗಂಡ : ನಿನ್ನ ತಾಯಿಯನ್ನು ಜೊತೆಯಲ್ಲಿ ಕರೆದುಕೊಂಡು ಬರಬೇಡ ಅಂತ ತಂತಿ ಕೊಟ್ಟಿದ್ದೆನಲ್ಲ. ಮತ್ತೆ ಯಾಕೆ ಕರೆದುಕೊಂಡು ಬಂದೆ?

ಹೆಂಡತಿ : ಹೌದು, ನೀವೇನೋ ತಂತಿ ಕೊಟ್ರಿ. ಅದೇನು ಸಮಾಚಾರ ಅಂತ ತಿಳಿಯೋಕೆ ಬಂದಿದ್ದಾರೆ ನಮ್ಮ ತಾಯಿ!

ಮೈಸೂರು ಮಿತ್ರ

ಗುರುವಾರ, 9 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಚಿನ್ನ ಮತ್ತು ಬೆಳ್ಳಿ ಮಾತ್ರವೇ ನಾಣ್ಯಗಳಲ್ಲ. ಗುಣವೂ ನಾಣ್ಯವೇ. ಜಗತ್ತಿನೆಲ್ಲೆಡೆ ಚಲಾವಣೆಯಾಗುವ ನಾಣ್ಯವದು –ಸಾಫೋಕ್ಲಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆರಂಭದ ಬುಡ ಕಷ್ಟ, ಅಧಿಕಾರದ ತುದಿ ಕಷ್ಟ

ನಿಮ್ಮ ಪತ್ರಗಳು

ಸಾಮಾಜಿಕ ಜಾಲತಾಣಗಳಲ್ಲಿ ರಾಜಕೀಯ ಸಲ್ಲದು!

ಮಾನ್ಯರೆ,

ರಾಜ್ಯದಲ್ಲಿ ಚುನಾವಣೆಯ ರಾಜಕೀಯ ಕಾವೇರುತ್ತಿದ್ದಂತೆಯೇ ಸೋಷಿಯಲ್ ಮೀಡಿಯಾದಲ್ಲಿಯೂ ರಾಜಕೀಯ ಪಕ್ಷಗಳ ಕುರಿತ ಅಣಕು, ಟೀಕೆಗಳು ಅಧಿಕವಾಗಿವೆ. ರಾಜಕಾರಣಿಗಳೆಲ್ಲಾ ಇಲ್ಲಿ ಟ್ರೋಲಿಂಗ್ ಮೂಲಕ ಕಾಲೆಳೆಸಿಕೊಳ್ಳುತ್ತಿದ್ದಾರೆ. ಪಕ್ಷಗಳ ನಡುವಣ ಕೆಸರೆರಚಾಟ ಜನಸಾಮಾನ್ಯರಿಗೆ ಮನರಂಜನೆ ನೀಡುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಇಂದಿನ ರಾಜಕಾರಣ ಬೆತ್ತಲಾಗುತ್ತಿರುವ ಪರಿ ಅಷ್ಟಿಷ್ಟಲ್ಲ! ಹೀಗೆ ಸೋಷಿಯಲ್ ಮೀಡಿಯಾದಲ್ಲಿ ಟ್ರೋಲ್ ಆಗುತ್ತಿರುವುದು ಕೇವಲ ಒಂದು ಪಕ್ಷಕ್ಕೆ ಸೀಮಿತವಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಹೀಗೆ ಎಲ್ಲಾ ರಾಜಕೀಯ ಪಕ್ಷಗಳ ನಾಯಕರುಗಳು ಟೀಕೆಗೊಳಗಾಗುತ್ತಿದ್ದಾರೆ!

ಪ್ರತಿಯೊಬ್ಬ ವ್ಯಕ್ತಿಯೂ ರಾಜಕಾರಣಿಯೇ ಎಂಬ ಮಾತೊಂದಿದೆ. ರಾಜಕಾರಣ ಯಾರನ್ನೂ ಯಾವುದನ್ನೂ ಬಿಡದು. ಪ್ರತಿಯೊಬ್ಬರೂ ತಮ್ಮದೇ ಆದ ರಾಜಕೀಯ ನಿಲುವು–ಒಲವು ಹೊಂದಿರುತ್ತಾರೆ. ಚುನಾವಣಾ ರಾಜಕಾರಣದ ಸಂದರ್ಭದಲ್ಲಿ ಇದನ್ನು ಬಡಿದೆಬ್ಬಿಸುವ ಕೆಲಸವನ್ನು ನಮ್ಮ ರಾಜಕೀಯ ಪಕ್ಷಗಳು ಮಾಡುತ್ತಾ ಬಂದಿವೆ. ಈಗ ಸೋಷಿಯಲ್ ಮೀಡಿಯಾದಲ್ಲಿ ಆಕ್ಟಿವ್ ಆಗಿರುವ ಈ 'ಮತದಾರ' ಸದ್ಯ ರಾಜಕೀಯ ಪಕ್ಷಗಳ ನಿಲುವು–ಒಲವುಗಳ ಮಾಹಿತಿ ಸಂಗ್ರಹಿಸಿ ವಿವಿಧ ಪಕ್ಷಗಳನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಟ್ರೋಲ್ ಮಾಡಿ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ತೋರ್ಪಡಿಸುತ್ತಿದ್ದಾನೆ. ಹೀಗೆ ಸೋಷಿಯಲ್ ಮೀಡಿಯಾದಲ್ಲಿ ರಾಜಕೀಯ ಅಭಿಪ್ರಾಯ ರೂಪಿಸುತ್ತಿರುವುದು ಬರೀ ಮತದಾರ ಮಾತ್ರವಲ್ಲದೇ, ವಿವಿಧ ರಾಜಕೀಯ ಪಕ್ಷಗಳು ಮತ್ತು ಅವುಗಳ ಕಾರ್ಯಕರ್ತರು, ಅಭಿಮಾನಿಗಳು, ಹಿತೈಷಿಗಳು ಹೀಗೆ ದೊಡ್ಡ ಬಳಗವೇ ಇದೆ. ಸೋಷಿಯಲ್ ಮೀಡಿಯಾದಲ್ಲಿಯೇ ಸಂಘಟಿತರಾಗುತ್ತಿರುವ ಈ ಬಳಗ, ತಮ್ಮ ನೆಚ್ಚಿನ ರಾಜಕಾರಣಿಯನ್ನು ಬೆಂಬಲಿಸಲು ಮತ್ತು ತಮ್ಮ ಪಕ್ಷವನ್ನು ಸಮರ್ಥಿಸಿಕೊಳ್ಳಲು, ಪ್ರಚಾರ ಮಾಡಲು ಹಾಕುವ 'ಶ್ರಮ' ರಾಜಕೀಯ ಪಕ್ಷಗಳ ಕೆಲಸಕ್ಕಿಂತ ಹೆಚ್ಚಿನದು. ಕೆಲವೊಮ್ಮೆ ರಾಜಕೀಯ ಪಕ್ಷಗಳ ನಾಯಕರಿಗಿಂತ ಮೊದಲೇ ತಮ್ಮ ರಾಜಕೀಯ ವಿರೋಧಿಗಳ ಮೇಲೆ ಮುಗಿಬೀಳುವ ಈ ಪಡೆ, ಯಾವೊಂದೂ ಅವಕಾಶವನ್ನು 'ಮಿಸ್' ಮಾಡಿಕೊಳ್ಳುವುದಿಲ್ಲ! ಹೀಗಾಗಿ ಇಂದು ಸೋಷಿಯಲ್ ಮೀಡಿಯಾದಲ್ಲಿ 'ರಾಜಕೀಯ ಸಮರ' ಈ ಮಟ್ಟಕ್ಕೆ ನಡೆಯಲು ಕಾರಣವಾಗಿದೆ.

ಸಾಮಾಜಿಕ ಜಾಲ ತಾಣಗಳಲ್ಲಿ ರಾಜಕಾರಣವನ್ನು, ರಾಜಕಾರಣಿಗಳನ್ನು ಈ ರೀತಿ ಅಪಹಾಸ್ಯ ತೇಜೋವಧೆ ಮಾಡುತ್ತಾ ಟ್ರೋಲ್ ಮಾಡುವುದು ಯಾರಿಗೂ ಶೋಭೆ ಹಾಗೂ ಘನತೆಯನ್ನು ತರದು. ಇದರಿಂದ ಸಾಮಾಜಿಕ ಸಂಘರ್ಷ ಹೆಚ್ಚಾಗಿ ನೋಡುಗರ ಸ್ವಾಸ್ಥ್ಯ ಕೆಡುತ್ತದೆ. ಅಲ್ಲದೇ ಇದೇ ರೀತಿ ಎಲ್ಲಾ ರಾಜಕೀಯ ಪಕ್ಷಗಳು ಸೋಷಿಯಲ್ ಮೀಡಿಯಾವನ್ನು ತಮಗೆ ಬೇಕಾದಂತೆ ಬಳಸಿಕೊಳ್ಳುತ್ತಾ ಹೋದರೆ, ಜನರಿಗೆ ಸಾಮಾಜಿಕ ಜಾಲತಾಣಗಳ ಮೇಲೆ ವಿಶ್ವಾಸವೇ ಇರದಂತೆ ಆಗುತ್ತದೆ. ಹೀಗಾಗಿ ಚುನಾವಣೆಯ ಹೊಸ್ತಿಲಿನಲ್ಲಿರುವ ಈ ಸಮಯದಲ್ಲಿ ಸಾಮಾಜಿಕ ಜಾಲತಾಣಗಳ ಮೇಲೆ ಸರ್ಕಾರಗಳು ತೀವ್ರ ನಿಗಾ ವಹಿಸಿ, ಆಕ್ಷೇಪಾರ್ಹ ಹಾಗೂ ಅಸಂಬದ್ಧ ರಾಜಕೀಯ ಪೋಸ್ಟರ್‌ಗಳು ಹಾಗೂ ಟ್ರೋಲ್‌ಗಳಿಗೆ ಕಡಿವಾಣ ಹಾಕಿ ಕಠಿಣ ಕ್ರಮ ವಹಿಸುವುದು ಅತ್ಯಂತ ಅವಶ್ಯಕ ಹಾಗೂ ಅನಿವಾರ್ಯವಾಗಿದೆ.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.

ಶೀಘ್ರ ರಸ್ತೆ ಡಾಂಬರೀಕರಣ ಮಾಡಿ

ಮಾನ್ಯರೆ,

ನಾನೊಬ್ಬ ಹಿರಿಯ ನಾಗರಿಕನಾಗಿದ್ದು, ಮೈಸೂರಿನ ಕಂದಾಯನಗರ 3ನೇ ಹಂತದಲ್ಲಿ ವಾಸಿಸುತ್ತಿದ್ದೇನೆ. ನಮ್ಮ ಬಡಾವಣೆಯಲ್ಲಿ ಅಧಿಕಾರಿಗಳು ಮೋರಿ ತೆಗೆದ ಮಣ್ಣುಗುಡ್ಡೆಯನ್ನು ತೆರವುಗೊಳಿಸಿ, ಸಮತಟ್ಟು ಮಾಡಿ, ಜಲ್ಲಿ ಹಾಕಿ, ಅದರ ಮೇಲೆ ರೋಲರ್ ಉರುಳಿಸಿದರು. ಇನ್ನೇನು ರಸ್ತೆ ಅಭಿವೃದ್ಧಿ ಆಗುತ್ತದೆ ಎಂದು ನಾವು ಸಂತಸಪಟ್ಟಿದ್ದೆವು. ಆದರೆ, ಇದಾಗಿ 15 ದಿನ ಕಳೆದರೂ ರಸ್ತೆಗೆ ಡಾಂಬರೀಕರಣ ಮಾಡಿಲ್ಲ. ಇದರಿಂದ ಜಲ್ಲಿಕಲ್ಲುಗಳು ಮೇಲೆ ಬಂದು ಈ ರಸ್ತೆಯಲ್ಲಿ ಸಂಚರಿಸುವ ವಾಹನಗಳು ಪಂಚರ್ ಆಗುತ್ತಿವೆ. ಪಾದಚಾರಿಗಳು ಓಡಾಡಲು ಕೂಡ ಕಷ್ಟವಾಗುತ್ತಿದೆ. ಹಿರಿಯ ನಾಗರಿಕರೇ ಹೆಚ್ಚಾಗಿ ವಾಸ ಮಾಡುತ್ತಿರುವ ಈ ಬಡಾವಣೆಯ ರಸ್ತೆ ಡಾಂಬರೀಕರಣ ಮಾಡಿ ಅನುಕೂಲ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

–ಎನ್. ವೆಂಕಟಾಚಲಪ್ಪ, ಕಂದಾಯನಗರ.

ಇಪಿಎಫ್ 95ರ ಪಿಂಚಣಿ ಯೋಜನೆ ಎಲ್ಲರಿಗೂ ಜಾರಿಯಾಗಲಿ


ಮಾನ್ಯರೆ,

ಹಲವಾರು ಸಂಘ ಸಂಸ್ಥೆಗಳ ಮೂಲಕ ಸುಮಾರು 35 ರಿಂದ 40 ವರ್ಷಗಳವರೆಗೆ ಸಾರ್ವಜನಿಕ ಸೇವೆಯನ್ನು ಮಾಡಿ ನಿವೃತ್ತಿ ಹೊಂದಿದ ವಯಸ್ಸು 60 ದಾಟಿದ ನೌಕರರಿಗೆ ತಲಾ 800 ರೂ.ಗಳಿಂದ 2500 ರೂ.ಗಳವರೆಗೆ ಮಾಸಿಕ ಪಿಂಚಣಿಯನ್ನು ಭಿಕ್ಷೆಯ ರೂಪದಲ್ಲಿ ನೀಡುತ್ತಿದ್ದೀರಿ. ಈ ಒಂದು ಸಂದರ್ಭದಲ್ಲಿ ಹೈಕೋರ್ಟ್ ನ್ಯಾಯಾಧೀಶರ ಗಮನಕ್ಕೆ, ಸರ್ವೋಚ್ಚ ನ್ಯಾಯಾಧೀಶರ ಗಮನಕ್ಕೆ, ಭಾರತದ ಅಧ್ಯಕ್ಷರ ಗಮನಕ್ಕೆ, ಪ್ರಧಾನಿ ನರೇಂದ್ರ ಮೋದಿಯವರ ಗಮನಕ್ಕೆ, ಕೇಂದ್ರದ ಕಾರ್ಮಿಕ ಮಂತ್ರಿಯವರಲ್ಲಿ ವಿನಂತಿಸುತ್ತಾ, ಕೇವಲ 2500 ರೂ. ಪಿಂಚಣಿ ಪಡೆದು ಇಂದಿನ ಪರಿಸ್ಥಿತಿಯಲ್ಲಿ ಸಂಸಾರ ನಡೆಸಲು ಸಾಧ್ಯವಿದೆಯೇ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕು. ಭವಿಷ್ಯನಿಧಿ ಪ್ರಾಧಿಕಾರವು 2014ರ ಸೆಪ್ಟೆಂಬರ್ 1ಕ್ಕೂ ಮುನ್ನ ನಿವೃತ್ತರಾದವರಿಗೆ ಅಧಿಕ ವೇತನ, ಅಧಿಕ ಪಿಂಚಣಿ ಆಯ್ಕೆ ಮಾಡಿಕೊಂಡಿಲ್ಲದಿದ್ದಲ್ಲಿ ಅಂತಹ ನೌಕರರಿಗೆ ಸುಪ್ರೀಂ ಕೋರ್ಟ್ ಆದೇಶ ಅನ್ವಯಿಸುವುದಿಲ್ಲ ಎಂದು ಹೇಳಿರುತ್ತೀರಿ.

ಹಾಗಾದರೆ ಕೇರಳ ಹೈಕೋರ್ಟ್, ಜೈಪುರ, ಮಧ್ಯ ಪ್ರದೇಶ, ಕರ್ನಾಟಕ ಹೈಕೋರ್ಟ್‌ಗಳು ಕಾರ್ಮಿಕರೆಲ್ಲರಿಗೂ ಪಿಂಚಣಿ ನೀಡುವಂತೆ ಕಾರ್ಮಿಕರ ಪರವಾಗಿ ತೀರ್ಪನ್ನು ನೀಡಿಲ್ಲವೆ? ಸುಪ್ರೀಂಕೋರ್ಟ್ ಸಹ ಕಾರ್ಮಿಕರ ಪರವಾಗಿ ತೀರ್ಪನ್ನು ನೀಡಿದ್ದರೂ ಇಪಿಎಫ್ ಸಂಸ್ಥೆ ಪಿಂಚಣಿದಾರರಿಗೆ ಮಾಹಿತಿಯನ್ನು ಮರೆಮಾಚುತ್ತಿದ್ದೀರಿ. ಹಾಗಾದರೆ 1.9.2014ರ ಹಿಂದೆ ಕಾರ್ಮಿಕರ ವೇತನದಲ್ಲಿ ಇಪಿಎಫ್ ಯೋಜನೆಗೆ ನೀವು ಹಣವನ್ನು ಕಡಿತ ಮಾಡಿಲ್ಲವೇ? ಹಾಗಾದಲ್ಲಿ ಎಲ್ಲಾ ಕಾರ್ಮಿಕರು ಅಧಿಕ ವೇತನ, ಅಧಿಕ ಪಿಂಚಣಿಗೆ ಅರ್ಹರಲ್ಲವೆ? ಇಂತಹ ಇಪಿಎಫ್ ಯೋಜನೆಯನ್ನು ಕಾರ್ಮಿಕರ ಗಮನಕ್ಕೆ ತಾರದೇ, ಕಾರ್ಮಿಕರ ಅಭಿಪ್ರಾಯವನ್ನು ಕೇಳದೆ ಮರೆಮಾಚಿ ಎಲ್ಲಾ ಸಂಸ್ಥೆಯ ಅಧಿಕಾರಿ ವರ್ಗದವರು, ಕಾರ್ಮಿಕರಿಗೆ ದ್ರೋಹ ಬಗೆದಿರುತ್ತೀರಿ. ದಯವಿಟ್ಟು ಪಿಂಚಣಿ ಯೋಜನೆಗಾಗಿ ವೇತನದಲ್ಲಿ ಹಣ ಕಡಿತ ಮಾಡಿರುವ ಪ್ರತಿಯೊಬ್ಬರಿಗೂ ಕನಿಷ್ಠ 6500 ರಿಂದ 15000 ರೂ.ಗಳವರೆಗೆ ಪಿಂಚಣಿಯನ್ನು ನೀಡಲು ಕ್ರಮ ಕೈಗೊಳ್ಳಿ ಹಾಗೂ ಹಿರಿಯ ನಾಗರಿಕರಿಗೆ ಬಿಪಿಎಲ್ ಕಾರ್ಡ್ ಹಾಗೂ ಇಎಸ್‌ಐ ಸೌಲಭ್ಯವನ್ನು ಒದಗಿಸಿಕೊಡಬೇಕು. ಈ ಎಲ್ಲಾ ಸೌಲಭ್ಯವನ್ನು ಒದಗಿಸಿಕೊಡುವ ಮೂಲಕ ಹಿರಿಯ ನಾಗರಿಕರು ಅಂತ್ಯ ಕಾಲದಲ್ಲಿ ನೆಮ್ಮದಿಯಿಂದ ಜೀವನ ನಡೆಸುವಂತಹ ವಾತಾವರಣವನ್ನು ನಿರ್ಮಿಸಿಕೊಡುತ್ತೀರೆಂಬ ಆಶಯ.

–ಎನ್.ಆರ್. ವಿಜಯಕುಮಾರ್, ಹಿರಿಯ ನಾಗರಿಕರು, ಮಾನಸನಗರ, ಮೈಸೂರು.

ಎದೆ ತುಂಬಿ ಹಾಡಿದ ಕವಿಗೆ ಭಾವಪೂರ್ಣ ನಮನ



ಜಿ.ಎಸ್. ಶಿವರುದ್ರಪ್ಪ

ಜಿ.ಎಸ್.ಎಸ್ ಅರ್ಥಾತ್ ಜಿ.ಎಸ್. ಶಿವರುದ್ರಪ್ಪನವರು ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದ ಕವಿಗಳಲ್ಲೊಬ್ಬರು. ತಮ್ಮ ಕವಿತೆಗಳಲ್ಲಿ ವಿಭಿನ್ನವಾದ ವಸ್ತುಗಳನ್ನು ಆರಿಸಿಕೊಂಡು ಪದಗಳಿಗೆ ವಿಶಿಷ್ಟ ಬಗೆಯಲ್ಲಿ ಅರ್ಥವನ್ನು ನೀಡಿದವರು. ಜಿ.ಎಸ್.ಎಸ್ ಅವರ ಕವಿತೆಗಳಲ್ಲಿ ವಿಶೇಷವಾದ ಚೈತನ್ಯವೊಂದು ಅಡಗಿರುತ್ತದೆ.

ತಮ್ಮ ಬದುಕು ಸಾರ್ಥಕ ಎಂಬುದನ್ನು ಸಾಮಗಾನ ಕವನ ಸಂಕಲನದಲ್ಲಿ ಬರುವ 'ತೃಪ್ತಿ' ಕವನದಲ್ಲಿ ಸಾರಿದ್ದಾರೆ.

ಎದೆ ತುಂಬಿ ಹಾಡಿದೆನು ಅಂದು ನಾನು
ಮನವಿಟ್ಟು ಕೇಳಿದಿರಿ ಅಲ್ಲಿ ನೀವು
ಇಂದು ನಾ ಹಾಡಿದರೂ, ಅಂದಿನಂತೆಯೆ ಕುಳಿತು
ಕೇಳುವಿರಿ ಸಾಕೆನಗೆ ಅದುವೆ ಬಹುಮಾನ
ಹಾಡು ಹಕ್ಕಿಗೆ ಬೇಕೆ ಬಿರುದು ಸನ್ಮಾನ? ॥
ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ
ಹಾಡುವುದು ಅನಿವಾರ್ಯ ಕರ್ಮ ನನಗೆ
ಕೇಳುವವರಿಹರೆಂದು ನಾ ಬಲ್ಲೆ ಅದರಿಂದ
ಹಾಡುವೆನು ಮೈದುಂಬಿ ಎಂದಿನಂತೆ ।ಯಾರು
ಕಿವಿ ಮುಚ್ಚಿದರೂ ನನಗಿಲ್ಲ ಚಿಂತೆ ॥

ನಾನು ಅಂದು ಹಾಡಿದಾಗ ನೀವು ಮನವಿಟ್ಟು ಕೇಳಿದಿರಿ ಇಂದಿಗೂ ನಾನು ಹಾಡಿದರೂ ಅಂದಿನಂತೆ ಕುಳಿತು ಕೇಳುವಿರಿ ಎಂಬ ಸಾರ್ಥಕತೆಯನ್ನು ಹೇಳುವ ಕವಿ ನನಗೆ ಇದರ ಹೊರತಾಗಿ ಮತ್ಯಾವುದೇ ಬಹುಮಾನ ಬೇಡವೆಂದು, ಹಾಡುವ ಹಕ್ಕಿ ಹೇಗೆ ಬಿರುದು ಸನ್ಮಾನಗಳ ಅವಶ್ಯಕತೆಗಳು ಇಲ್ಲವೋ ಹಾಗೇ ತನಗೆ ಬೇರೆ ಬಿರುದು ಬಹುಮಾನಗಳು ಬೇಡವೆಂದು ಸಾರುವ ಕವಿ ವಿಭಿನ್ನವಾಗಿ ಕಾಣುತ್ತಾರೆ. ನನ್ನನ್ನು ಎಲ್ಲಾ ಗುರುತಿಸಬೇಕು, ನನಗೆ ಆ ಬಹುಮಾನ ಬರಬೇಕಿತ್ತು ಎಂದೆಲ್ಲಾ ಬೊಬ್ಬೆ ಹಾಕುವವರ ಮಧ್ಯೆ ತನ್ನ ಹಾಡನ್ನು ಕೇಳುವವರು ಮನಸಿಟ್ಟು ಕೇಳಿದರೆ ಸಾಕು ತನಗೆ ಅದುವೇ ದೊಡ್ಡ ಬಹುಮಾನ, ಅದರ ಮುಂದೆ ಇನ್ನಾವುದೇ ಬಹುಮಾನಗಳು ಬೇಡ ಎಂದು ಹೇಳಿದ್ದಾರೆ.

ಮುಂದೆ ನನ್ನ ಹಾಡನ್ನು ಎಲ್ಲರೂ ಕೇಳಲಿ ಎಂಬ ಆಸೆಯಿಂದ ತಾನು ಹಾಡುವುದಿಲ್ಲ ಹಾಡುವುದು ತನ್ನ ಕೆಲಸ ಎಂದು ಹೇಳುವ ಮೂಲಕ ತನ್ನ ಕಾಯಕವನ್ನು ನಿಷ್ಠೆಯಿಂದ ಮಾಡುವೆನೆಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ. ನನ್ನ ಹಾಡನ್ನು ಕೇಳುವವರು ಇರುವರು ಅದಕ್ಕಾಗಿ ತಾನು ಹಾಡುವೆನು ಎಂದು, ಇವರ ಹಾಡನ್ನು ನಾನು ಕೇಳಲಾರೆ ಎಂದು ಯಾರಾದರೂ ಮತ್ಸರ ಪಟ್ಟು ಕಿವಿ ಮುಚ್ಚಿದರೂ ತನಗೆ ಯಾವುದೇ ಬಗೆಯ ಚಿಂತೆ ಇಲ್ಲ ಎಂದೂ ದಿಟ್ಟತನದ ಮೂಲಕ ನಿಂದಕರಿದ್ದರೂ ಅವರ ಮುಂದೆ ತಾನು ಬೆಳೆದು ನಿಲ್ಲಬಲ್ಲೆನೆಂಬ ಆತ್ಮವಿಶ್ವಾಸದ ನುಡಿ ಅಡಗಿರಬಹುದೆಂಬ ಭಾವ ವ್ಯಕ್ತವಾಗಿದೆ.

ಇದೇ ಜಿ.ಎಸ್.ಶಿವರುದ್ರಪ್ಪ ಅವರ ಮತ್ತೊಂದು 'ಕವಿತೆ ಪ್ರೀತಿ ಇಲ್ಲದ ಮೇಲೆ' ಕವನ ಸಂಕಲನದಲ್ಲಿ ಬರುವ ಕವಿತೆ ಯಾವ ಹಾಡ ಹಾಡಲಿ?

ಯಾವ ಹಾಡು ಹಾಡಲಿ
ಯಾವ ಹಾಡಿನಿಂದ ನಿಮಗೆ
ನೆಮ್ಮದಿಯನು ನೀಡಲಿ?

ಸುತ್ತ ಮುತ್ತ ಮನೆ ಮಠಗಳು
ಹೊತ್ತಿಕೊಂಡು ಉರಿಯುವಲ್ಲಿ
ಸೋತು ಮೂಕವಾದ ಬದುಕು
ನಿಟ್ಟುಸಿರೊಳು ತೇಲುವಲ್ಲಿ ಯಾವ ಹಾಡು ಹಾಡಲಿ

ಬರಿ ಮಾತಿನ ಜಾಲದಲ್ಲಿ
ಶೋಷಣೆಗಳ ಶೂಲದಲ್ಲಿ
ವಂಚನೆಗಳ ಸಂಚಿನಲ್ಲಿ
ಹಸಿದ ಹೊಟ್ಟೆ ನರಳುವಲ್ಲಿ
ಯಾವ ಹಾಡು ಹಾಡಲಿ

ಉರಿವ ಕಣ್ಣ ಚಿತೆಗಳಲ್ಲಿ
ಇರುವ ಕನಸು ಸೀಯುವಲ್ಲಿ
ಎದೆ ಎದೆಗಳ ಜ್ವಾಲಾಮುಖಿ
ಹೊಗೆ ಬೆಂಕಿಯ ಕಾರುವಲ್ಲಿ
ಯಾವ ಹಾಡು ಹಾಡಲಿ

ಬೆಳಕಿಲ್ಲದ ದಾರಿಯಲ್ಲಿ
ಪಾಳುಗುಡಿಯ ಸಾಲಿನಲ್ಲಿ
ಬಿರುಗಾಳಿಯ ಬೀಡಿನಲ್ಲಿ
ಕುರುಡ ಪಯಣ ಸಾಗುವಲ್ಲಿ ಯಾವ ಹಾಡು ಹಾಡಲಿ

ಈ ಕವಿತೆಯಲ್ಲಿ ಕವಿ ಜಿ.ಎಸ್.ಎಸ್ ಅವರು ಓದುಗರಿಗೆ ಯಾವ ಹಾಡನ್ನು ನಾನು ನಿಮಗಾಗಿ ಹಾಡಲಿ, ಹೇಗೆ ನೆಮ್ಮದಿಯನ್ನು ನೀಡಲಿ. ಸಮಾಜದಲ್ಲಿ ನಮ್ಮ ಸುತ್ತಾ – ಮುತ್ತಾ ಇರುವ ಮನೆಗಳಾಗಲೀ, ಮಠಗಳಾಗಲೀ ನೆಮ್ಮದಿಯ ವಾತಾವರಣವಿಲ್ಲ, ಎಲ್ಲಾ ಕಡೆಯಲ್ಲಿಯೂ ನಾನು ನನ್ನದೆನ್ನುವ ಸ್ವಾರ್ಥ ಪರವಾದ ಚಿಂತನೆಗಳಿಂದ ಜನರ ಬದುಕು ಮೂಕವಾಗಿದೆ. ಎಲ್ಲೆಡೆ ಜನರ ನಿಟ್ಟುಸಿರು ತೇಲಿ ಬರುವಾಗ ಯಾವ ಹಾಡನ್ನು ನಾನು ಹಾಡಿ ನಿಮಗೆ ನೆಮ್ಮದಿಯನ್ನು ನೀಡಲಿ ಎಂದು ಪ್ರಶ್ನಿಸುವ ಕವಿಗೆ ಸಮಾಜದಲ್ಲಿ ತಾಂಡವವಾಡುತ್ತಿರುವ ಮೋಸ, ವಂಚನೆ, ಶೋಷಣೆಗಳ ಸಂಚು ಬೇಸರ ತರಿಸಿದ್ದು ಇವುಗಳಿಂದಾಗಿ ಬಡವರು ಹಸಿವಿನ ನರಳಾಟ ದಲ್ಲಿರುವಾಗ ನಾನು ಯಾವ ಹಾಡನ್ನು ಹಾಡಿ ನಿಮಗೆಲ್ಲಾ ನೆಮ್ಮದಿಯನ್ನು ನೀಡಲಿ ಎಂದು ಸಮಾಜದಲ್ಲಿನ ಅವ್ಯವಸ್ಥೆಯನ್ನು ಪ್ರಶ್ನಿಸಿದ್ದಾರೆ. ಕೆಲ ಜನರನ್ನು ನೋಡಿದಾಗ ಮತ್ತೊಬ್ಬರ ಮೇಲೆ ದ್ವೇಷ, ಅಸೂಯೆ ಕಾಣುವ ಉರಿಯುವಂತಹ ಕಣ್ಣುಗಳು ಗೋಚರವಾದರೆ ಮತ್ತೊಂದೆಡೆ ಬದುಕನ್ನು ಕಟ್ಟಿಕೊಳ್ಳಲು ಕನಸು ಕಾಣುತ್ತಿರುವವರ ಕನಸುಗಳನ್ನು ಸೀಳುವಂತಹ ಜನರು ಕಾಣಸಿಗುತ್ತಾರೆ. ಪರಸ್ಪರ ಪ್ರೀತಿ, ಸ್ನೇಹಗಳು ಮರೆಯಾಗಿ ದ್ವೇಷದಂತಹ ದಳ್ಳುರಿ ಮನೆ ಮಾಡಿ ಬೆಂಕಿಯಂತೆ ಹೊಗೆ ಕಾರುವಂತಹ ಜನರನ್ನು ನೋಡಿ ನಾನೆಂದು ಹಾಡಲಿ ಎಂದು ಪ್ರಶ್ನಿಸುವ ಶಿವರುದ್ರಪ್ಪ ಅವರು ಮುಂದೆ ಜೀವನವೆಂಬ ಕತ್ತಲೆಯ ದಾರಿಯಲ್ಲಿ ಬೆಳಕನ್ನು ನೀಡುವವರು ಯಾರಿಹರು. ಪಾಳು ಬಿದ್ದ ಗುಡಿಯ ಸಾಲಿನಲ್ಲಿ, ಬಿರುಗಾಳಿಯ ಬೀಡಾಗಿರುವ ಈ ಕುರುಡು ಪಯಣ ಸಾಗಿಸುವಲ್ಲಿ ನಾನು ಯಾವ ಹಾಡನ್ನು ಹಾಡಿ ನಿಮಗೆ ನೆಮ್ಮದಿಯನ್ನು ನೀಡಲಿ ಎಂದು ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡಿ ಸಹಿಸಲಾಗದೇ, ಅದನ್ನು ವಿರೋಧಿಸುವ ನೆಲೆಗಟ್ಟಿನಲ್ಲಿ ಬರೆದಿರಬಹುದಾದ ಕವಿತೆ ಇದಾಗಿದೆ ಎನ್ನಬಹುದು.

ಜಿ.ಎಸ್.ಶಿವರುದ್ರಪ್ಪ ಅವರ ಕವಿತೆಗಳಲ್ಲಿ ಪ್ರಸಿದ್ಧವಾದ ಮತ್ತೊಂದು ಕವಿತೆ ಸಾಮಗಾನ ಕವನ ಸಂಕಲನದಲ್ಲಿರುವ ಹಳೆಯ ಹಾಡು ಕವಿತೆ.

ಹಾಡು ಹಾಡು ಹಾಡು ಹಳೆಯದಾದರೇನು
ಭಾವ ನವನವೀನ
ಎದೆಯ ಭಾವ ಹೊಮ್ಮುಹುದಕೆ
ಭಾಷೆ ಒರಟು ಯಾನ

ಹಳೆಯ ಹಾಡು ಹಾಡು ಮತ್ತೆ
ಅದನೆ ಕೇಳಿ ತಣಿಯುವೆ
ಹಳೆಯ ಹಾಡಿನಿಂದ ಹೊಸತು
ಜೀವನ ಕಟ್ಟುವೆ.

ಹಾಡನೊಲಿದು ಕೇಳುವನಿತು
ತೆರೆದ ಹೃದಯ ನನಗಿದೆ
ಅಷ್ಟೆ ಸಾಕು ; ಹಾಡು ನೀನು
ಅದನೆ ಕೇಳಿ ಸುಖಿಸುವೆ.

ಹಮ್ಮು ಬಿಮ್ಮು ಒಂದೂ ಇಲ್ಲ
ಹಾಡು, ಹೃದಯ ತೆರೆದಿದೆ
ಹಾಡಿನಲ್ಲಿ ಲೀನವಾಗಲೆನ್ನ
ಮನವು ಕಾದಿದೆ

ಹಳೆಯದ್ದು ಯಾವಾಗಲೂ ಹೊಸತರ ಹುಟ್ಟಿಗೆ ಕಾರಣವಾದುದಾಗಿರುತ್ತದೆ. ಇಲ್ಲಿಯೂ ಕೂಡ ಕವಿ ಅದನ್ನೇ ಹೇಳಿದ್ದಾರೆ.ಹಾಡು ಹಳೆಯದಾದರೂ ಅದರಿಂದ ಹೊಮ್ಮುವ ಭಾವ ಯಾವಾಗಲೂ ಹೊಸತರಂತೆ ನವನವೀನವಾಗಿರುತ್ತದೆ. ಹಳೆಯ ಹಾಡನ್ನೆ ಹಾಡಿ ಮತ್ತೆ ಮತ್ತೆ ಅದನ್ನೆ ಕೇಳಿ ಸಂಭ್ರಮಿಸುವೆ– ಎಷ್ಟು ನಿಜ ಅಲ್ವ. ನಾವು ಇಂದು ಏನೇ ಆಗಿರಬಹುದು. ಉನ್ನತ ಅಧಿಕಾರಿ, ಶಿಕ್ಷಕ, ರೈತ, ವೈದ್ಯ, ಅಭಿಯಂತರ, ಕಾರ್ಮಿಕ, ಕೂಲಿ, ಶ್ರಮಿಕ, ವಿದ್ಯಾರ್ಥಿ ಹೀಗೆ ಏನೇ ಆಗಿದ್ದರೂ ನಮ್ಮ ಬಾಲ್ಯದಲ್ಲಿ ಕಳೆದ ಸುಮಧುರ ಕ್ಷಣಗಳು, ಭೇದ ಭಾವಗಳಿಲ್ಲದೇ ಎಲ್ಲಾ ಒಟ್ಟಿಗೆ ಸೇರಿ ಸಂಭ್ರಮದಿಂದ ಆಚರಿಸಿದ ಹಬ್ಬಗಳು ಇವುಗಳು ಯಾವಾಗಲೂ ನಮ್ಮ ಸ್ಮೃತಿಪಟಲದಲ್ಲಿ ಅಚ್ಚಹಸಿರಾಗಿಯೇ ಉಳಿದಿರುತ್ತವೆ. ನಮ್ಮ ಜೀವನವನ್ನು ಮತ್ತೊಮ್ಮೆ ಮೆಲುಕು ಹಾಕಿ ನೋಡಿದಾಗ ಹಳೆಯ ಸುಮಧುರ ಕ್ಷಣಗಳೇ ಕಣ್ಮುಂದೆ ಮರಳಿ ಬರುತ್ತವೆ.ಕವಿ ಅದನ್ನೇ ಇಲ್ಲಿ ಹೇಳಿದ್ದಾರೆ.

ಹಾಡುವ ಹಾಡನ್ನು ಪ್ರೀತಿಯಿಂದ ಕೇಳುವ ಹೃದಯ ನನಗಿದೆ. ನನಗದೆ ಸಾಕು ಅದನ್ನೇ ಕೇಳಿ ಕೇಳಿ ಸುಖಿಸುವೆ ಎನ್ನುವ ಕವಿ ನನಗೆ ಯಾವ ಬಗೆಯ ಹಮ್ಮು ಬಿಮ್ಮುಗಳಿಲ್ಲ ಈ ಹೃದಯ ತೆರೆದಿದೆ ಹಾಡಿನಲ್ಲಿ ಲೀನವಾಗಲು ಈ ಮನವು ಕಾದಿದೆ ಎನ್ನುವ ಮೂಲಕ ಹಳೆಯ ಸಂಗತಿಗಳನ್ನು ಯಾವುದನ್ನೂ ತಾನು ಮರೆಯಲಾರೆ, ಅದನ್ನು ನೆನಪಿಸಿಕೊಂಡು ಅದರಲ್ಲೇ ಮಗ್ನನಾಗಲು ನನಗೆ ಯಾವುದೇ ಹಮ್ಮು ಬಿಮ್ಮುಗಳಿಲ್ಲ ಎಂದು ಹಳೆಯ ಹಾಡಿನಲ್ಲೇ ಹೊಸತನ್ನು ಹುಡುಕುವ ಪರಿಯನ್ನು ವ್ಯಕ್ತಪಡಿಸಿದ್ದಾರೆ.

ಈ ಕವಿತೆಯನ್ನು ಪುಟ್ಟಣ್ಣ ಕಣಗಾಲ್ ನಿರ್ದೇಶನದ ಮಾನಸ ಸರೋವರ ಚಲನಚಿತ್ರಕ್ಕೆ (ಮೂರನೇ ಪದ್ಯಭಾಗವನ್ನು ಹೊರತುಪಡಿಸಿ) ಬಳಸಿಕೊಳ್ಳಲಾಗಿದೆ.

ಜಿ.ಎಸ್.ಶಿವರುದ್ರಪ್ಪ ಅವರ ಸಂಕಲ್ಪ ಗೀತೆ ಕವಿತೆ

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

ಕಲುಷಿತವಾದೀ ನದೀ
ಜಲಗಳಿಗೆ ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ
ಹೊಸ ಭರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡವುತ ಸೇತುವೆಯಾಗೋಣ

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದಲಿ ಬದುಕೋಣ
ಭಯ ಸಂಶಯದೊಳು ಸಂದಿದ ಕಣ್ಣೊಳು
ನಾಳಿನ ಕನಸನು ಬೆಳೆಯೋಣ

ನಾಡಿನ ಜನತೆಗೆ ಸಂಕಲ್ಪ ನೀಡುವ ನಿಟ್ಟಿನಲ್ಲಿ ಬರೆದಂತಿರುವ ಈ ಕವಿತೆ ಹೊಸ ಬದುಕಿಗೆ, ಭರವಸೆಗೆ ನಾಂದಿಯನ್ನು ನೀಡಿದೆ. ಅಜ್ಞಾನ, ಅಂಧಕಾರ, ಮಬ್ಬು ತುಂಬಿಕೊಂಡು ಎಲ್ಲೆಡೆ ಆವರಿಸಿಕೊಂಡಿರುವ ಈ ಸಮಯದಲ್ಲಿ ನಾವು ಪ್ರೀತಿ ಎಂಬ ಹಣತೆಯನ್ನು ಹಚ್ಚೋಣ ಆ ಮೂಲಕ ಆವರಿಸಿರುವ ಕತ್ತಲನ್ನು ಹೋಗಲಾಡಿಸೋಣ ಎಂದು ಬಿರುಗಾಳಿ ಹೊಯ್ದಾಟಕ್ಕೆ ನಡುಗಿರುವ ಈ ಜೀವನ ಎಂಬ ಹಡಗನ್ನು ಎಚ್ಚರದಿಂದ ಮುನ್ನಡೆಸೋಣ ಎಂಬ ಸಂಕಲ್ಪ ಪ್ರತಿಯೊಬ್ಬರಿಗೂ ತಲುಪಬೇಕೆಂದು ಬಯಸಿದ ಕವಿ ಹೃದಯ ಕಲುಷಿತವಾಗಿರುವ ನದಿ, ಜಲಗಳಿಗೆ ಮುಂಗಾರಿನ ಮಳೆಯನ್ನು ತರಿಸಿ ಕಲುಷಿತವಾದುದನ್ನೆಲ್ಲ ಹೋಗ ಲಾಡಿಸುವಂತೆ ಮಾಡೋಣವೆಂದು ಅಂದರೆ ಬೇಡದ ವಿಚಾರಗಳಿಂದ ಕಲುಷಿತವಾಗಿರುವ ಮನಸ್ಸನ್ನು ಶುದ್ಧಿಕರಿಸುವ ಕೆಲಸವನ್ನು ಮಾಡೋಣವೆಂದು ಪ್ರೀತಿ, ಮಮತೆ ಮರೆತು ಬರಡಾಗಿರುವ ಕಾಡು ಮೇಡುಗಳಿಗೆ ಹೊಸತನ್ನು ನೀಡುವ ವಸಂತ ವಾಗೋಣ ಎಂದು ಕ್ಷೀಣಿಸಿಯಾಗಿರುವ ಮಾನವೀಯ ಸಂಬಂಧಗಳನ್ನು ನೆನಪಿಸಿಕೊಳ್ಳುವ ಮೂಲಕ ಮತ್ತೆ ಹೊಸ ಬದುಕನ್ನು ಪಡೆಯೋಣ ಎಂಬ ಉದಾತ್ತ ಚಿಂತನೆಯನ್ನು ತಿಳಿಸಿದ್ದಾರೆ.

ಮುರಿದು ಬಿದ್ದಿರುವ ಆತ್ಮವಿಶ್ವಾಸ, ಸಂಬಂಧಗಳನ್ನು ಹೊಸ ಭರವಸೆಗಳೊಂದಿಗೆ ಮತ್ತೆ ಕಟ್ಟೋಣ ಎಂದು ಮನುಷ್ಯರ ನಡುವೆ ಕಾಣದಾಗೆ ನಿರ್ಮಾಣವಾಗಿರುವ ಅಡ್ಡಗೋಡೆಗಳನ್ನು ಕೆಡವುತ ಪರಸ್ಪರ ಒಬ್ಬರನ್ನೊಬ್ಬರು ತಿಳಿದು ಬದುಕುವ ಮೂಲಕ ಸಾಮರಸ್ಯ ಎಂಬ ಸೇತುವೆಯನ್ನು ಕಟ್ಟೋಣವೆಂದು ಭಾವೈಕ್ಯತೆಯ ಸಂದೇಶವನ್ನು ಸಾರಿದ್ದಾರೆ. ಎಲ್ಲಾ ಮತಗಳು ಬದುಕಿಗೆ ದಾರಿ ತೋರುವ ದಾರಿಗಳು ಎಂದು ಎಚ್ಚರಿಕೆಯಿಂದ ಬದುಕೋಣ, ಭಯ– ಸಂಶಯದಿಂದ ಕಂಗೆಟ್ಟ ಕಣ್ಣುಗಳಿಗೆ ನಾಳಿನ ಕನಸನ್ನು ಬೆಳೆಯೋಣ ಅಂದರೆ ಪರಸ್ಪರ ನಮ್ಮಲ್ಲಿರುವ ಮತ, ಧರ್ಮ, ಜಾತಿ ಎಂಬ ಭಯ, ಸಂಶಯವನ್ನು ತೊಲಗಿಸಿ ಉತ್ತಮ ನಾಗರಿಕರಾಗಿ ಬದುಕನ್ನು ಕಟ್ಟಿಕೊಂಡು ಭವ್ಯ ಭಾರತವನ್ನು ಕಟ್ಟೋಣ ಎಂಬ ಉದಾರ ತತ್ವವನ್ನು ಈ ಸಂಕಲ್ಪ ಗೀತೆಯ ಮೂಲಕ ಕವಿ ಭಾರತೀಯತೆಯನ್ನು ಎತ್ತಿ ಹಿಡಿದಿದ್ದಾರೆ ಎನ್ನಬಹುದು.


ಹೀಗೆ ವಿಭಿನ್ನ ತತ್ವಗಳ ನೆಲೆಯಲ್ಲಿ ಬದುಕಿನ ಮಹತ್ವವನ್ನು ಸಾರಿದ ಎದೆ ತುಂಬಿದ ಹಾಡಿದ ಕವಿಗೊಂದು ಭಾವಪೂರ್ಣ ನಮನದ ಮೂಲಕ ಜನುಮ ದಿನದ (ಫೆ.7) ಶುಭಾಶಯಗಳು.

– ಸಿ.ಎಸ್.ರಾಘವೇಂದ್ರ

ಇಷ್ಟಲಿಂಗಕ್ಕೆ ಶಿವಭಕ್ತರಿಂದ ಭಾರೀ ಬೇಡಿಕೆ

ಮೈಸೂರು, ಫೆ8(ಎಸ್‌ಪಿಎನ್)– ಮಹಾ ಶಿವರಾತ್ರಿ ಹಿನ್ನೆಲೆಯಲ್ಲಿ ಹೊಸ 'ಇಷ್ಟಲಿಂಗ' ತಯಾರಿಕೆ ಹಾಗೂ ಭಿನ್ನಗೊಂಡ ಇಷ್ಟಲಿಂಗ ಕಸೂತಿ(ಚದರಸ ಬಿಟ್ಟು ಇಷ್ಟಲಿಂಗ ಸರಿಪಡಿಸುವ ಕೆಲಸ) ಕೆಲಸಕ್ಕೆ ಶಿವಭಕ್ತರಿಂದ ಬೇಡಿಕೆ ಹೆಚ್ಚಾಗಿದೆ.

ಮಹಾಶಿವರಾತ್ರಿ ವಿಶೇಷ



ಇಷ್ಟಲಿಂಗ ತಯಾರಿಕೆ, ಅದರ ಕಸೂತಿ ಕೆಲಸ ಅಷ್ಟು ಸುಲಭವಲ್ಲ. ಈ ಕೆಲಸದಲ್ಲಿ ತೊಡಗಿಸಿಕೊಳ್ಳುವವರು ಪೂಜ್ಯ ಭಾವನೆಯಿಂದ ತೊಡಗಿಸಿಕೊಳ್ಳುತ್ತಾರೆ. ಇನ್ನು ಮುಂದಾದರೂ ಸರ್ಕಾರ ಗುರುತಿಸುವ ಕೆಲಸ ಮಾಡಲಿ.
–ಎನ್.ಜಿ.ಗಿರೀಶ್, ಸದಸ್ಯರು, ಜಿಲ್ಲಾ ವೀರಶೈವ ಮಹಾಸಭಾ

ಶಿವಭಕ್ತರಿಗೆ ಮಹಾಶಿವರಾತ್ರಿ ವಿಶೇಷ ಆಚರಣೆ ಹಾಗೂ ಶಿವನಿಗೆ ಬಲು ಪ್ರಿಯವಾದ ದಿನ. ಶಿವಭಕ್ತರು ಧಾರಣೆ ಮಾಡಿರುವ ಇಷ್ಟಲಿಂಗವನ್ನು ವಿಶೇಷವಾಗಿ ಪೂಜಿಸುವ ಹಬ್ಬ. ಈ ವೇಳೆ ಇಷ್ಟಲಿಂಗ ಸ್ವಲ್ಪ ಭಿನ್ನವಾಗಿದ್ದರೂ ಶಿವರಾತ್ರಿ ಪೂಜೆ ಶಿವನಿಗೆ ಸಲ್ಲುವುದಿಲ್ಲ ಎಂಬುದು ಹಿಂದಿನಿಂದ ನಂಬಿಕೊಂಡು ಬಂದಿರುವುದು ವಾಡಿಕೆ ಎನ್ನುತ್ತಾರೆ ಮೈಸೂರು ಅಗ್ರಹಾರದ ಕುದೇರು ಮಠದ ನಿವಾಸಿ ಶರಣ ಲಿಂಗರಾಜು.

ಕಳೆದ 40 ವರ್ಷಗಳಿಂದ ಹೊಸ ಇಷ್ಟಲಿಂಗ ತಯಾರಿಕೆ ಮತ್ತು ಭಿನ್ನವಾಗಿರುವ ಇಷ್ಟಲಿಂಗಗಳನ್ನು ಸರಿಪಡಿಸುವ ಕಾಯಕದಲ್ಲಿ ತೊಡಗಿದ್ದು, ಈ ಕೆಲಸಕ್ಕೆ ಗೇರು ಎಣ್ಣೆ, ಸುಟ್ಟ ಬೆರಣಿ ಪುಡಿ ಸೇರಿದಂತೆ ಹಲವು ಕಚ್ಚಾ ಸಾಮಗ್ರಿಗಳಿಂದ ಹದ ಮಾಡಿದ 'ಚದುರಸ' ಬಳಕೆ ಮಾಡುತ್ತೇವೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇಷ್ಟಲಿಂಗ ತಯಾರಿಕೆ ಮತ್ತು ಕಸೂತಿ ಕೆಲಸ ವರ್ಷಪೂರ್ತಿ ಇರುತ್ತದೆ. ಶಿವರಾತ್ರಿ ಸಂದರ್ಭದಲ್ಲಿ ಜನರಿಂದ ಬೇಡಿಕೆ ಹೆಚ್ಚಾಗಿರುತ್ತದೆ. ಆದರೆ, ಈ ಕೆಲಸದಲ್ಲಿ ಆಸಕ್ತಿ ಮತ್ತು ದೈವದಲ್ಲಿ ನಂಬಿಕೆ ಇರುವವರು ಮಾತ್ರ ತೊಡಗಿಸಿಕೊಳ್ಳುತ್ತಾರೆ. ನಮ್ಮಲ್ಲಿ ಸಣ್ಣ ಇಷ್ಟಲಿಂಗವನ್ನು ಸಾಮಾನ್ಯರು ಧಾರಣೆ ಮಾಡುತ್ತಾರೆ. ದೊಡ್ಡ ದೊಡ್ಡ ಇಷ್ಟಲಿಂಗಗಳನ್ನು ತಯಾರಿಸಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದೇವೆ.

ಹಲವು ವರ್ಷಗಳಿಂದ ಈ ಕಾಯಕದಲ್ಲಿ ನಾನು ಮತ್ತು ನನ್ನ ಅಣ್ಣ ಚಂದ್ರಪ್ಪ ತೊಡಗಿಸಿಕೊಂಡಿದ್ದೇವೆ. ನಾನು ಮೈಸೂರಿನ ಕುದೇರು ಮಠದಲ್ಲಿ ವಾಸವಿದ್ದು, ಈ ಕಾಯಕ ಮುಂದುವರೆಸಿದ್ದೇನೆ. ನನ್ನ ಅಣ್ಣ ಮಹದೇಶ್ವರ ಬೆಟ್ಟದ ಸಾಲೂರು ಮಠದಲ್ಲಿದ್ದುಕೊಂಡು ಈ ಕಾಯಕ ಮಾಡುತ್ತಿದ್ದಾರೆ.

ಗೇರು ಎಣ್ಣೆ ಪಾತ್ರ ಪ್ರಮುಖ: ಇಷ್ಟಲಿಂಗ ತಯಾರಿಕೆಗೆ ಗೇರು ಎಣ್ಣೆ ತೆಗೆಯುವುದು ಅಷ್ಟು ಸುಲಭದ ಕೆಲಸವಲ್ಲ. ಒಂದು ದಿನ ಪೂರ್ತಿ ಗೇರುಬೀಜ ಕಾಯಿಸಿ, ಎಣ್ಣೆ ತೆಗೆಯುತ್ತೇವೆ. ಗೇರು ಎಣ್ಣೆ ತೆಗೆಯುವ ಸಂದರ್ಭದಲ್ಲಿ ಯಾರೊಬ್ಬರೂ ಇದರತ್ತ ಸುಳಿಯಬಾರದು. ಸಣ್ಣ ಮಕ್ಕಳಲ್ಲಿ ಗೇರುಎಣ್ಣೆಯನ್ನು ನಮ್ಮ ಪೋಷಕರು ಕುಡಿಸಿರುವ ಹಿನ್ನೆಲೆಯಲ್ಲಿ ಗೇರು ಎಣ್ಣೆ ಮುಟ್ಟಲು ಸಾಧ್ಯವಾಗಿದೆ. ಇಲ್ಲವಾದರೆ, ಗೇರು ಬೀಜ ಮುಟ್ಟಿದರೂ ಆ ಜಾಗ ಗಾಯವಾಗುತ್ತದೆ.

ಹೊಳಪು ಬರಲು ಪಾದರಸ ಅಗತ್ಯ: ತುಪ್ಪದ ಕರ್ಪೂರ, ಅಷ್ಟ ಗಂಧ, ಸುಟ್ಟ ಬೆರಣಿ ಬೂದಿ ಇರಬೇಕು. ಇದಕ್ಕೆ ಪಾದರಸ ಮಿಕ್ಸ್ ಮಾಡಿದರೆ ಇಷ್ಟಲಿಂಗ ಹೊಳಪು ಬರುತ್ತದೆ. ಪಾದರಸ ವನ್ನು ಬೆಂಗಳೂರಿನಿಂದ ತಂದು ಮಿಕ್ಸ್ ಮಾಡಿ ಇಷ್ಟಲಿಂಗ ತಯಾರಿಕೆಗೆ ಹದ ಮಾಡಿಕೊಳ್ಳುತ್ತೇವೆ. ಈ ಕೆಲಸಕ್ಕೆ ಬೇಕಾ ಗುವ ಸಾಮಾಗ್ರಿಗಳನ್ನು ವರ್ಷಕ್ಕೊಮ್ಮೆ ಖರೀದಿಸಿ ಇಟ್ಟುಕೊಳ್ಳುತ್ತೇವೆ. ಶಿವರಾತ್ರಿ ಸಂದರ್ಭದಲ್ಲಿ ನೂರು ರೂ.ನಿಂದ ಸಾವಿರ ರೂ.ವರೆಗಿನ ಇಷ್ಟಲಿಂಗವನ್ನು ಬೇಡಿಕೆಗೆ ತಕ್ಕಂತೆ ತಯಾ ರಿಸಿ ಕೊಡುತ್ತೇವೆ. ದೇವಸ್ಥಾನದ ಲಿಂಗ ತಯಾರಿಕೆಯ ಕೆಲಸವನ್ನು ಒಪ್ಪಿಕೊಳ್ಳುತ್ತೇವೆ.

1ರಿಂದ 5ನೇ ನಂಬರ್‌ನ ಇಷ್ಟಲಿಂಗಕ್ಕೆ ಬೇಡಿಕೆ: 1–5ನೇ ನಂಬರ್ ಇಷ್ಟಲಿಂಗವನ್ನು ಜನ ಸಾಮಾನ್ಯರು ಧಾರಣೆ ಮಾಡಿದರೆ, ಇದಕ್ಕೂ ಮೇಲ್ಪಟ್ಟ ಇಷ್ಟಲಿಂಗವನ್ನು ಸಂತರು ಧಾರಣೆ ಮಾಡಿರುತ್ತಾರೆ. ಈ ಕೆಲಸವನ್ನು ನಾವು ಜೀವನೋಪಾಯಕ್ಕೆ ಮಾಡುತ್ತಿಲ್ಲ. ಬದಲಾಗಿ, ಧಾರ್ಮಿಕ ಹಿನ್ನೆಲೆಯಲ್ಲಿ ಈ ಕೆಲಸದಲ್ಲಿ ತೊಡಗಿದ್ದು, ನಮ್ಮ ಪೂರ್ವಜರಿಂದ ಬಂದಿರುವ ವಿಶೇಷ ಕಸೂತಿ ಕೆಲಸವನ್ನು ಮುಂದುವರೆಸಿಕೊಂಡು ಬಂದಿದ್ದೇವೆ.

ಈ ಕೆಲಸವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ ಗುರುತಿಸಲಿ: ಈ ಕೆಲಸವನ್ನು ಇಂದಿನ ಪೀಳಿಗೆಯ ಯುವಕರು ಕಲಿಯಲು ಆಸಕ್ತಿ ತೋರುತ್ತಿಲ್ಲ. ಅಲ್ಲದೆ, ಇದರ ಕಚ್ಚಾ ಸಾಮಗ್ರಿಗಳ ಸಂಗ್ರಹ ಅಷ್ಟು ಸುಲಭವಲ್ಲ. ಈ ಸಾಮಗ್ರಿಗಳು ಸುಲಭವಾಗಿ ಸಿಗುವಂತಾಗಲು ಸರ್ಕಾರದ ಕ್ರಮ ಕೈಗೊಳ್ಳಬೇಕು ಮತ್ತು ಈ ಕಸೂತಿ ಕೆಲಸದಲ್ಲಿ ತೊಡಗಿರುವವರನ್ನೂ ಸರ್ಕಾರದಿಂದ ಗುರುತಿಸಬೇಕು. ಆಗ ಮಾತ್ರ ಈ ಕೆಲಸದಲ್ಲಿ ತೊಡಗಿಸಿಕೊಂಡವರಿಗೆ ನ್ಯಾಯ ಒದಗಿಸಲು ಸಾಧ್ಯ. ಆದರೆ, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷವಾದರೂ ನಮ್ಮನ್ನು (ಇಷ್ಟಲಿಂಗ ತಯಾರಕರನ್ನು) ರಾಜ್ಯ ಮತ್ತು ಕೇಂದ್ರ ಸರ್ಕಾರ ಗುರುತಿಸಿಲ್ಲ ಎಂದು ಬೇಸರ ಹೊರ ಹಾಕಿದರು.

ನಾಳೆ ಇಕೊ ಸ್ಟೆಮ್ ವರ್ಷದ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ

ಮೈಸೂರು,ಫೆ.8(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಫೆ.10 ರಂದು ಬೆಳಗ್ಗೆ 10.30ಕ್ಕೆ 'ಇಕೊ ಸ್ಟೆಮ್ ವರ್ಷದ ಶಿಕ್ಷಕ, ಶಿಕ್ಷಕಿ ಪ್ರಶಸ್ತಿ' ಪ್ರದಾನ ಸಮಾರಂಭ ಆಯೋಜಿಸಲಾಗಿದೆ ಎಂದು ಬೆಂಗಳೂರಿನ ಯುವ ಚಿಂತನ ಫೌಂಡೇಷನ್ ಅಧ್ಯಕ್ಷ ಸಿ.ಎಲ್.ಗೌಡ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 10 ಮಂದಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಜೆಂಡರ್ ಚಾಂಪಿಯನ್, ಸ್ಟೆಮ್ ಚಾಂಪಿಯನ್, 21 ನೇ ಶತಮಾನದ ಶೈಕ್ಷಣಿಕ ಕೌಶಲ್ಯ ಚಾಂಪಿಯನ್ 3 ವಿಭಾಗಗಳಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ. ವೃತ್ತಿ ಜೀವನ, ಸಂಶೋಧನೆ, ತರಬೇತಿ ಸೇರಿದಂತೆ ವಿವಿಧ ವಿಷಯಗಳಲ್ಲಿ ಪರಿಣಿತಿ ಹೊಂದಿರುವ ಶಿಕ್ಷಕರಾದ ಡಿ.ಬಿ.ಗುರುಸ್ವಾಮಿ, ರೋಶನ್ ಅರಾ ಬೇಗಮ್, ತಾಹಿರಾ ಬಾನು, ಸಿರಾಜ್ ಉರ್ ರೆಹಮಾನ್, ಸಿ.ಹೆಚ್. ಸ್ವಾಮಿ, ಸ್ವರ್ಣವತಿ, ಕೆ.ಬಿ.ಕಾವ್ಯ, ನಂಜೇಗೌಡ, ಆರ್.ಬಿಂದು ಹಾಗೂ ಬಿ.ವಿ. ಕಿರಣ್ ಕುಮಾರ್ ಅವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಪ್ರತಿಷ್ಠಾನದ ಡಾ.ಕೆ. ಪುಟ್ಟಸ್ವಾಮಿ, ಕಿರಣ್, ಸ್ವಾಮಿ, ಗುರುಸ್ವಾಮಿ, ಮದನ್ ಮೋಹನ್ ಈಶ್ವರ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು, ಅಭಿಷೇಕ್ ಸರ್ಕಲ್ ಬಳಿ ಇರುವ ಮೆಡಿಕಲ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ:
9845 76 1114

ಸೈಟ್ ಫಾರ್ ಸೇಲ್
ಜ್ಞಾನಭಾರತಿ ಲೇಔಟ್, 2ನೇ ಹಂತ, ದಡದಹಳ್ಳಿ, ಮುಡಾ ಖಾತೆ ಆಗಿದೆ. ಜೆ.ಪಿ.ನಗರ ರಿಂಗ್ ರೋಡ್ ನಿಂದ 5 ಕಿ.ಮೀ ದೂರ, 30x40, ಈಸ್ಟ್ ಫೇಸಿಂಗ್, 24 ಲಕ್ಷ, ಮಾಲೀಕರು:
9342123373

ಸೈಟು ಮಾರಾಟಕ್ಕಿದೆ
30x50, Site No. 561/B ನೋಂದಣಿಗೆ ರೆಡಿ ಇದೆ. ಶ್ರೀ ನಂಜುಂಡೇಶ್ವರ ನಗರ, ತಳೂರು ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು.
9986992040
7349257910

20x30 ಡ್ಯೂಪ್ಲೆಕ್ಸ್ ಹೊಸ ಮನೆ – 68 ಲಕ್ಷ
30x40 ಸೈಟ್ ದಟ್ಟಗಳ್ಳಿ,
20x30 ಸೈಟ್ – 25 ಲಕ್ಷ
ಹಳೇ ಮನೆ – ಹೊಸ ಮನೆ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
Mob: 9945042875

airtel WANTED Promoters
Salary: 16,000/- + Incentive. Contact:
Mob: 91480 86332

ಮನೆ ಭೋಗ್ಯಕ್ಕಿದೆ
ಶಾಂತವೇರಿ ಗೋಪಾಲಗೌಡ ನಗರ 20x30, North Face, 6.25 ಲಕ್ಷ, New House.
ಸೈಟು ಮಾರಾಟಕ್ಕಿದೆ
30x40 W/F No. 83 ವಿಶ್ವಪ್ರಜ್ಞಾ, ಬನ್ನೂರು ರೋಡ್, ವಾಜಮಂಗಲ, 20 ಲಕ್ಷ.
Mob: 7676926525

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಬೇಕಾಗಿದ್ದಾರೆ
ಟೆಲಿಕಾಲರ್ಸ್, ಡೇಟಾ ಎಂಟ್ರಿ ಆಪರೇಟರ್ಸ್, ಹೆಲ್ಪರ್ಸ್, ಡಿಪ್ಲೋಮಾ ಮೆಕ್ಯಾನಿಕಲ್ (2 ವರ್ಷ ಅನುಭವ ಬೇಕು, ಮೈಸೂರು, ನಂಜನಗೂಡು) & ಎಂಬಿಎ (2 ವರ್ಷ ಅನುಭವ ಬೇಕು. ಮೈಸೂರು) ಅಕೌಂಟೆಂಟ್ ಅನುಭವ ಬೇಕು. ಹೌಸ್ ಕೀಪಿಂಗ್, ಆಫೀಸ್ ಬಾಯ್, ಸೆಕ್ಯೂರಿಟಿ ಗಾರ್ಡ್, ರಿಸೆಪ್ಷನಿಸ್ಟ್ ಕರೆ ಮಾಡಿ: ವೃಂದ (HR)
9035560544

ನೀರಾವರಿ ಜಮೀನು ಹಾಗೂ ಅಂಗಡಿ ಮಳಿಗೆ ಬಾಡಿಗೆಗಿದೆ
ಮೈಸೂರು ತಾಲ್ಲೂಕು, ಬೋಗಾದಿ ರಸ್ತೆಯಲ್ಲಿ ಮಹಲಿಂಗೇಶ್ವರ ದೇವಸ್ಥಾನದ ಪಕ್ಕ, 2.19 ಎಕರೆ ನೀರಿನ, ವಿದ್ಯುಚ್ಛಕ್ತಿ, ಕಾಂಪೌಂಡ್ ವಾಸಕ್ಕೆ 2 ಮನೆ, ರಸ್ತೆ ಅನುಕೂಲವಿರುವ ಜಮೀನು, ಕೃಷಿ, ತೋಟಗಾರಿಕೆ, ಪಶುಪಾಲನೆ, ಕೈಗಾರಿಕೆಗೆ ಉದ್ದೇಶಕ್ಕೆ ತಿಂಗಳಿಗೆ ರೂ.9000/– ಬಾಡಿಗೆಗೆ 5 ವರ್ಷಗಳ ಅವಧಿಗೆ ಬಾಡಿಗೆಗಿದೆ. ಹಾಗೂ ಕುವೆಂಪುನಗರ ಆರ್.ಎಂ.ಪಿ ಕ್ವಾಟ್ರಸ್ ಮುಖ್ಯರಸ್ತೆಯಲ್ಲಿ ಪೂರ್ವಾಭಿಮುಖವಾದ 10*12 ಅಳತೆಯ ನೀರಿನ ಸಂಪರ್ಕವಿರುವ ಮಳಿಗೆ, ದರ್ಶಿನಿ, ಚಾಟ್ಸ್ ಸೆಂಟರ್, ಟೀ ಶಾಪ್‌ಗೆ ಬಾಡಿಗೆಗಿದೆ.
8197609290

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

SITES FOR SALE
30x40 sites
Bank loan upto 80%
Near Gurur Bus Stop Ramabainagar, Mysore. DTCP Approved (Corporation limits)
1.5 kms from J.P. Nagar Ring Road
Mob: 8660105902

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ, ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಠ ಓದು / ಬರಹ ಗೊತ್ತಿರಬೇಕು, ವೇತನ:– 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9108100117

ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed.
ವಿವಾಹ ನೊಂದಣಿಗೆ ಕರೆ ಮಾಡಿ
(2nd Marriage also)
9164743059

ಬೇಕಾಗಿದ್ದಾರೆ
Sales Excutive
Male & Female
Salary : 15,000 - 27,000
8088666663

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಗಾಂಧಿ ಸರ್ಕಲ್ ಸಿಟಿ ಬಸ್ ಸ್ಟಾಂಡ್ ಹತ್ತಿರ
9686667762
9986731199

WANTED MEDICAL STAFF
Male / Female with or without experience with basic English & Medical knowledge.
Location: Bannimantap. Contact:
77606-05040 / 93439-83533

JOB Vacancy
1) Counselor: Graduate, Communication Skills, Digital Marketing
2) Faculty/Teaching: BE Civil/ Arch, Knowledge of Design Software must.
Location:
CADDCENTRE
VVMohalla,Gokulam Road Mysore 570002
0821-4006323 / 9880908444

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನಲ್ಲಿರುವ ಅಡಕನಹಳ್ಳಿ ಮತ್ತು ಕಡಕೊಳ ಇಂಡಸ್ಟ್ರಿಗಳಿಗೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
9740324112 / 9035269781
0821-4852002 / 2303459

ತ್ವರೆ ಮಾಡಿ
ನಿಮ್ಮ ಕನಸಿನ ಮನೆಯನ್ನು ಬುಕ್ ಮಾಡಿ
20X30 45 ಲಕ್ಷ*
30X40 75 ಲಕ್ಷ*
30X50 95 ಲಕ್ಷ*
ಮೈಸೂರಿನ ಪ್ರಮುಖ ಸ್ಥಳಗಳಲ್ಲಿ
98800 65122 / 77956 09173

WANTED
For an Industry at Mysore ;
1) Technicians; ITI Electrical / Electronics.
2) Trainee Engineer ; B.E / Diploma - E&E, E&C.
Contact between 10.00 am to 5.00 pm
9901178588
Apply with resume : hr.sipltd@yahoo.com

ಬೇಕಾಗಿದ್ದಾರೆ
Chef North Indian -1
South Indian -1
ಸರಸ್ವತಿಪುರಂ, ಮೈಸೂರು
9620000658

WANTED
Smart young boys or girls, should be able to talk fluent English for a reputed coffee café.
Full time or Part time
Attractive Salary
Contact: 93421 88351

ಹೆಸರು ಬದಲಾವಣೆ
ನಾನು ರಿಜ್ವಾನ್ ಪಾಶಾ (ಹಳೆಯ ಹೆಸರು), #2113, ಬೆರ್ ಕಾ ಮಕಾನ್, ಲಷ್ಕರ್ ಮೊಹಲ್ಲಾ, ಮೈಸೂರು–570 001 ರಲ್ಲಿ ವಾಸಿಸುತ್ತಿರುವ S/o ಅಬ್ದುಲ್ ಅಜೀಜ್ ಅವರು 30–11–2022 ರಂದು ಮೈಸೂರಿನಲ್ಲಿ ನೋಟರಿ ಎಲ್.ಎನ್. ರಾಜೇಂದ್ರ ಅವರ ಸ್ವಂತ ಇಚ್ಛೆಯ ಮೇರೆಗೆ ನನ್ನ ಹೆಸರನ್ನು ಅಬ್ದುಲ್ ಸುಭಾನ್ (ಹೊಸ ಹೆಸರು) ಎಂದು ಬದಲಾಯಿಸಿದ್ದಾರೆ.

ಮುಡಾ ಸೈಟ್ ಮಾರಾಟಕ್ಕಿದೆ
ವಿಕ್ರಾಂತ್ ಟೈರ್ ಎದುರು, ಚಾಮುಂಡೇಶ್ವರಿ ರೈಲ್ವೆ ಬಡಾವಣೆ ಪಕ್ಕ, ಮೈಸೂರು
40x60
8453459670

WANTED HOUSE KEEPING
ROYAL LOOK SALON PROFESSIONAL UNISEX
LADIES ONLY
#468/A, Vinaya Marga, Opp. Jain Temple, Siddartha Layout, Nazarbad Mohalla, Mysore - 570011
M : 89712 32898

AMAZE


SUNZONE SOLAR SYSTEM
VM Double Road, Kuvempunagar, Mysuru
9845175443

ಸೈಟು ಮಾರಾಟಕ್ಕಿದೆ
ಅಳತೆ 22x33 @ ಇಲವಾಲ ಟೌನ್, ಮೈಸೂರು. (9 & 11ಎ ಖಾತಾ) ಸಂಪರ್ಕಿಸಿ:
9019110150
7975276174

ಬೇಕಾಗಿದ್ದಾರೆ
ಸಸ್ಯಹಾರಿ ಹೋಟೆಲ್ ಕೆಲಸಕ್ಕೆ ಅಡುಗೆ ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಬೇಕಾದ ಮೊಬೈಲ್ ಸಂಖ್ಯೆ:
9380441839

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
Mob: 9108566022

WANTED
1) Electrician
2) Office Boy
3) Delivery Boy.
Call: 7259016509 / 512
Between 9.30 am to 6 pm

WANTED
0-1 Year Exp.
Work in Medical Shop (Male / Female) D.Pharma / B.Pharma, Vijayanagar 3rd Stage, Behind Ishwarya Petrol Bunk, Mysore.
9986031304

ತಕ್ಷಣ ಬೇಕಾಗಿದ್ದಾರೆ
(AAL) ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC and ITI (Any Trade), Age Limit : Males, 18-30 Years
7019380847
7090309148

ಬೇಕಾಗಿದ್ದಾರೆ
ಮುಖ್ಯ ಗಾರ್ಡ್. ವೇತನ: 11,000 – 12,000. ಸ್ಥಳ: ಹೆಬ್ಬಾಳ್, ಹೂಟಗಳ್ಳಿ, ವಯಸ್ಸು: 30 ರಿಂದ 60.
ಸೆಕ್ಯೂರಿಟಿ ಗಾರ್ಡ್ಸ್. ವೇತನ: 10,000 – 11,000. ಸ್ಥಳ: ಆಲನಹಳ್ಳಿ, ಸಿದ್ದಾರ್ಥ ಲೇಔಟ್, ಬನ್ನಿಮಂಟಪ. ಸಂಪರ್ಕಿಸಿ:
9741513225, 9741513227

(30x40) Sale
@ "Olive Enclave"
Mys-B'lore Highway
3 km from Ring Road.
25 Lakhs.
95388-39926

ಬೇಕಾಗಿದ್ದಾರೆ
ಮೇಟಗಳ್ಳಿ ಪ್ರದೇಶಕ್ಕೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
(8 Hours Duty)
ಎಸ್.ಎಸ್.ಎಲ್.ಸಿ ಪಾಸ್ ಅಥವಾ ಫೇಲ್. ದೂರವಾಣಿ ಸಂಖ್ಯೆ:
0821-4852002
9035269781

ಮೈಸೂರಿನಲ್ಲಿ ಉದ್ಯೋಗ
(Consultancy ಅಲ್ಲ) ಕುವೆಂಪುನಗರದಲ್ಲಿರುವ AWG ಕಂಪನಿಯೊಂದಕ್ಕೆ SSLC (Pass), PUC, ITI, Any Degree, Diploma ಆಗಿರುವ Freshers + Experience ಆದ 227 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ: 18 ರಿಂದ 31 Years. ತಿಂಗಳಿಗೆ: 18,000 ರಿಂದ 25,000 ಗಳಿಸಬಹುದು. (ಉಚಿತ ವಸತಿ).
ಸಂಪರ್ಕಿಸಿ: ಸ್ವಾತಿಗೌಡ
9844219943, 7349699460

Change of Name
I, Chandra Kumar. S., residing at #160, 2nd Cross, Yeraganahalli 2nd Stage, Mysore-570 011, have changed my name from Chandra Kumar to Chandra Kumar. S. on my own free will, sworn in before Notary C.R. Seetharam, Mysuru, vide affidavit dated 8-2-2023.
Sd/- Chandra Kumar. S.

Premium Residential Layout VINYAS NANDA GOKULA
DTCP Approved Ready for Registration. Attached to NH 275, Near Varuna, T.N.Pura Road, Mysore. 30x40 - odd Sites
9980628991 / 9740484094

HOUSE FOR RENT
South Facing, 2BHK, Spacious, Ground Floor with Solar Gokulam 3rd Stage. Only Vegetarians. Contact:
7019455168
7892765763

Professional Building Solutions WATERPROOFING
To, Secure and Modernise your building. "We-Fix" leaking roof (terrace), tank, sump, bathroom, tile joints, skylight, also undertake house painting, Tiling, polishing, drilling, grouting, fabrication., carpentry & epoxy floor coating. Monica Adhesive & Chemicals. For professional service at competitive rates:
Call: MACBOND
Mob: 9448572697

Sale Service Sale
Contact for used / refurbished Desk Top and Laptop & CCTV installation. Also contact for repair of Desktop, Laptop, all power supply and all types of monitor. LCD / LED.
9663579654, 9902955544

Job Job Job
Call us for all types of Jobs, SSLC, PUC, Degree, BE, MBA. Any qualification.
Any type of job.
Immediate placements.
9663579654, 9902955544

ಬೇಕಾಗಿದ್ದಾರೆ
Office In-charge ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
ಸಂಬಳ 30000/ & above
Ph.9380142144
ಶಿವರಾಂಪೇಟೆ, ಮೈಸೂರು

ಶ್ರೀ ಅನಘ ಗೋಲ್ಡ್ ಕಂಪನಿ
1 ಗ್ರಾಂ ಚಿನ್ನಕ್ಕೆ 5800 (ಗುಣಮಟ್ಟದ ಮೇಲೆ) ನಿಮ್ಮ ಚಿನ್ನದ ಮೇಲೆ ಸಾಲಕ್ಕೆ EMI ಕೂಡ ದೊರೆಯುತ್ತದೆ.
(ಕೆಲಸಕ್ಕೆ ಬೇಕಾಗಿದ್ದಾರೆ)
9591290440
8105300750

ಮನೆ ಮಾರಾಟಕ್ಕಿದೆ
ಸುಣ್ಣದಕೇರಿ, ಸಿದ್ದಪಾಜಿ ಗುಡಿ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು. ಅಳತೆ 15x27, ಸಂಪರ್ಕಿಸಿ
9945734293
9945992221

AFFIDAVIT
I, Mujeeb Ahamed @ Syed Mahamood Aged about 71 years, Resident of # 3207/1B Mohamed Sait Block, Lashkar Mohalla, Mysore 570001. I do hereby declare that Mujeeb Ahamed @ Syed Mahamood both my names hereafter I will be using Only Mujeeb Ahamed as my legal and official name and this name is officially mentioned in my legal records i.e., Passport, Aadhar and PAN Card, valid Affidavit dated on 24-08-2021, sworn before P.N.Nagesha Advocate and Notary, Bangalore.
Sd/- Mujeeb Ahamed

ಜಮೀನು ಮಾರಾಟಕ್ಕಿದೆ
ಮೈಸೂರು ತಾ॥, ಜಯಪುರ ಹೋಬಳಿ ಹಾಗೂ ಹಂಪಾಪುರ ಹೋಬಳಿಯಲ್ಲಿ ಜಮೀನು ತೋಟಗಳು ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ
9945661696, 9663793666

ಅಪಾರ್ಟ್‌ಮೆಂಟ್ ಸೇಲ್
2ಬಿಹೆಚ್‌ಕೆ, 3ಬಿಹೆಚ್‌ಕೆ,
Muda Approved
ಬೆಲೆ 48 ಲಕ್ಷದಿಂದ ಆರಂಭ
SBI Bank ಸಾಲದೊಂದಿಗೆ
No Brokerage
9945344203

AFFIDAVIT
I, Rajeshwari S.M., W/o Harshakumar G.S., residing at #505, Gaddige Main Road, M.K. Halli Gate, front of Royal Enclave Arch, Bogadi, Mysore-570 026. I declare that my name as per in my Aadhar card is mentioned as Rajeshwari S.M., but in my passport my name mentioned as Rajeshwari Siddapura Mallegowda. I swear in front of Notary Venkatesha Patawardhana, that Rajeshwari S.M. & Rajeshwari Siddapura Mallegowda names are one and the same person and belongs to me only.
Sd/- Rajeshwari S.M.

ತಕ್ಷಣ ಬೇಕಾಗಿದ್ದಾರೆ
ಸೂಪರ್‌ವೈಸರ್: 3, ಹೌಸ್ ಕೀಪಿಂಗ್ ಸ್ಟಾಫ್: 15, ವಾರ್ಡ್ ಬಾಯ್ : 5, ಸೆಕ್ಯೂರಿಟಿ ಸೂಪರ್‌ವೈಸರ್ : 3, ಸೆಕ್ಯೂರಿಟಿ ಗಾರ್ಡ್: 15. ನೇರನೇಮಕಾತಿ ಯಾವುದೇ ಶುಲ್ಕವಿರುವುದಿಲ್ಲ, ಸಂಬಳ +ಇಎಸ್ಐ + ಪಿಎಫ್, ಸಂಪರ್ಕಿಸಿ
7353756555, 6361993230

ಉದ್ಯೋಗವಕಾಶ
ಮೈಸೂರು, ನಂಜನಗೂಡು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲಾದ್ಯಂತ ನಿವೃತ್ತಿ / ಸ್ವಯಂ ನಿವೃತ್ತಿ, ಸರ್ಕಾರಿ ನೌಕರರು ಹಾಗೂ ಆಸಕ್ತಿ ಇರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಕರೆಯಲಾಗಿದೆ. ಸಂಪರ್ಕಿಸಿ:
9110676257, 9739239004

ತಕ್ಷಣ ಬೇಕಾಗಿದ್ದಾರೆ
ಅಡುಗೆ ಸಹಾಯಕರು, (ಆಲ್‌ರೌಂಡರ್) ದೋಸೆ ಮಾಸ್ಟರ್, ಕೌಂಟರ್ ಹುಡುಗರು, ಚಾಟ್ಸ್ & ಚೈನೀಸ್ ಮಾಡುವವರು. ಮೊದಲು ಬಂದವರಿಗೆ ಆದ್ಯತೆ.
8904515065
9964644225

ಬೇಕಾಗಿದ್ದಾರೆ
ದೇವಿಶ್ರೀ ಹೋಟೆಲ್‌ಗೆ ಪರ್ಮನೆಂಟ್ ಕೆಲಸಗಾರರು ಬೇಕಾಗಿದ್ದಾರೆ. ಸಪ್ಲೈಯರ್ ಹಾಗೂ ಸ್ಟಾಲ್‌ಬಾಯ್ ಫುಲ್‌ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ.
8970856325
7892176372

ತಕ್ಷಣ ಬೇಕಾಗಿದ್ದಾರೆ
Helper ಕೆಲಸಕ್ಕೆ ಹುಡುಗಿಯರು ಮತ್ತು ಮಹಿಳೆಯರು ಟೈಲರಿಂಗ್ ತಿಳಿದಿರುವವರಿಗೆ ಮೊದಲ ಆದ್ಯತೆ ಕೂಡಲೇ ಕರೆ ಮಾಡಿ. ಅಕುಲ್ ಕ್ರಿಯೇಷನ್ಸ್, ಸರಸ್ವತಿಪುರಂ, ಮೈಸೂರು.
9066412935 / 8951088742

ಬೇಕಾಗಿದ್ದಾರೆ
ಎ–ರಾಚ್ ಫುಡ್ ಹೌಸ್ ವೆಜ್ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ. ಅನುಭವವಿರುವ ವೈಟರ್ಸ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 12,000/–, ಹುಡುಗರಿಗೆ, ರೂಂ, ವ್ಯವಸ್ಥೆ ಇದೆ. ಸಂಪರ್ಕಿಸಿ:
7795518038 / 8884208814

2 ಎಕರೆ ತೆಂಗಿನ ತೋಟ ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ರೋಡ್, ಅಲಹ್ಯ ಗ್ರಾಮ, 1 ಬೋರ್‌ವೆಲ್, ಗೇಟ್ ಕಾಂಪೌಂಡ್, ಮುಳ್ಳುತಂತಿ ಡಾಂಬರ್ ರಸ್ತೆಗೆ ಹೊಂದಿಕೊಂಡಿದ್ದು, ಮೈಸೂರಿನಿಂದ 15 ಕಿಲೋ ಮೀಟರ್, 1 ಎಕರೆಗೆ 65 ಲಕ್ಷ.
7411223692

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್, ಶ್ರೀನಗರ ಹಿಂಭಾಗ ಮೈಸೂರು
8050345574

ಮನೆ ಮಾರಾಟಕ್ಕಿದೆ
17x50 ಅಳತೆ, ಎರಡು ಅಂತಸ್ತು ಇರುವ ಮನೆ, 11ಬಿ ಖಾತೆ ಹೊಂದಿದೆ (ಫಾರಂ 3 ಬರುತ್ತಿದೆ). ಶ್ರೀರಾಂಪುರ ಪಟ್ಟಣ ಪಂಚಾಯಿತಿ, ಮಹದೇವಪುರ ಗ್ರಾಮ ಜೆ.ಪಿ.ನಗರ. (25 ಲಕ್ಷ ಬ್ಯಾಂಕ್ ಲೋನ್ ಹೊಂದಿದೆ) 46 ಲಕ್ಷ.
Negotiable ಸಂಪರ್ಕಿಸಿ.
6361239157

WANTED
1) Labourers for outdoor and indoor factory work.
2) Women for indoor factory work. Yadavgiri Industrial estate Mysuru.
9448664411

ಕಳೆದಿದೆ
ಎಲ್.ಚಂದ್ರಶೇಖರ್ S/o ಲಕ್ಷ್ಮೀನಾರಾಯಣ,#35, 5ನೇ ಕ್ರಾಸ್, ನರಸಿಂಹಲು ಲೇಔಟ್, ಕಂಠೀರವ ಸ್ಟೂಡಿಯೋ ಬೆಂಗಳೂರು – 560096. ಇಲ್ಲಿ ವಾಸವಾಗಿರುವ ನಾನು ಪ್ರಮಾಣೀಕರಿಸುವುದೇನೆಂದರೆ, ಮೈಸೂರು (ತಾ) ಇಲವಾಲ ಹೋಬಳಿ, ಹುಯಿಲಾಲು ಗ್ರಾಮದ ಸರ್ವೆ ನಂ. 81/2, 2/1, 2, 83 ಇದರಲ್ಲಿರುವ ನಿವೇಶನ ಸಂಖ್ಯೆ 37 ರ ಮೂಲ ಖಾತ ಪತ್ರ ಕಳೆದು ಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ:
9686373038

ಬೇಕಾಗಿದ್ದಾರೆ
ಆಸ್ಪತ್ರೆಗೆ ಸೆಕ್ಯೂರಿಟಿ ಗಾರ್ಡ್ಸ್, ಸೆಕ್ಯೂರಿಟಿ ಸೂಪರ್ ವೈಸರ್, ಹೌಸ್ ಕೀಪಿಂಗ್ ಸೂಪರ್ ವೈಸರ್, ಹೌಸ್‌ಕೀಪಿಂಗ್ ಮಹಿಳೆಯರು ಮತ್ತು ಹುಡುಗರು ವಾರ್ಡ್ ಬಾಯ್ ಕೆಲಸಕ್ಕೆ ಪುರುಷರು. ಹೋಟೆಲ್‌ಗೆ ರೂಮ್ ಬಾಯ್ಸ್, ಹೌಸ್ ಕೀಪಿಂಗ್ (ಊಟ ಮತ್ತು ವಸತಿ ಉಚಿತ) ಬೇಕಾಗಿದ್ದಾರೆ. (ESI+PF ಉತ್ತಮ ಸಂಬಳ) ಯಾವುದೇ ಶುಲ್ಕ ಇಲ್ಲ
8884286123 / 8884286321
8884339446

HOUSE FOR SALE
30x20 House for Sale Srirampura, 2nd Stage BEML Duplex 3BHK fully Furnished.
9900251194 / 9738884777

ಬೇಕಾಗಿದ್ದಾರೆ
ಆಕರ್ಷಕ ಸಂಬಳದೊಂದಿಗೆ 12 ರಿಂದ 20 ಸಾವಿರದವರೆಗೂ ಸಂಪಾದಿಸಬಹುದು. ವಯಸ್ಸಾದ ವೃದ್ಧರನ್ನು, ರೋಗಿಗಳಿಗೆ ಸೇವೆ ಮಾಡಲು ಕೆಲಸಕ್ಕೆ ಅನುಭವವುಳ್ಳ ಮಹಿಳೆಯರು ಹಾಗೂ ಪುರುಷರು ಹಾಗೂ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
9886023235 / 7760866636

ಬೇಕಾಗಿದ್ದಾರೆ
Room Boy & House Keeping, ಗಾರ್ಡನ್ ಪುರುಷರು, O.T. ಸೌಲಭ್ಯವಿದೆ. ವಯಸ್ಸು 25 ರಿಂದ 40. ಸ್ಥಳ: Hinkal Flyover ಹತ್ತಿರ.
ಸಂಪರ್ಕಿಸಿ:
7996176555

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳವರು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಕುವೆಂಪುನಗರ
9535370330

WALK IN INTERVIEW
Service Engineer - Male- ITI / Diploma (Electronics with Computer Skills)
Customer Relation Officer - Male / Female - Any Degree, Office Address : Maruthi Enterprises, #76/R, Food Zone, Hootagalli Industrial Area, Belavadi Post, Mysore - 570018. Email ID : maruthiautomation@gmail.com
0821/4288985 / 4243471

ಜಮೀನು ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ತಾಲ್ಲೂಕಿನ ಹ್ಯಾಂಡ್ ಪೋಸ್ಟ್‌ನಿಂದ ಮೂರು ಕಿಲೋ ಮೀಟರ್ ದೂರದಲ್ಲಿ 3 ಎಕರೆ 20 ಗುಂಟೆ ಜಮೀನು ಮಾರಾಟಕ್ಕಿದೆ. ಫೆನ್ಸಿಂಗ್, ಬೋರ್ ಇದೆ. 30 ತೇಗದ ಗಿಡ ಇದೆ. ಸಂಪರ್ಕಿಸಿ:
9611830025

ವಧು ಬೇಕಾಗಿದ್ದಾರೆ
ಮೈಸೂರಿನಲ್ಲಿ ನೆಲೆಸಿರುವ ಉತ್ತಮ ವರಮಾನ ಇರುವ ಬ್ರಾಹ್ಮಣ ವರನಿಗೆ ವಧು ಬೇಕಾಗಿದ್ದಾರೆ. ವಿಧವೆ, ವಿಚ್ಛೇದಿತರಿಗೂ ಅವಕಾಶ ಇದೆ. ಕೂಡಲೇ ಸಂಪರ್ಕಿಸಿ:
9341208567

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ಲಾರಿ ಡಿಕ್ಕಿ: ಬೈಕ್ ಸವಾರ ಸಾವು

ಸುಂಟಿಕೊಪ್ಪ, ಫೆ.8– ಅಡುಗೆ ಅನಿಲದ ಖಾಲಿ ಸಿಲಿಂಡರ್‌ಗಳನ್ನು ಸಾಗಿಸುತ್ತಿದ್ದ ಲಾರಿ ಡಿಕ್ಕಿಯಿಂದ ಗಂಭೀರ ಗಾಯಗೊಂಡು ಮೈಸೂರು ಆಸ್ಪತ್ರೆಗೆ ದಾಖಲಾಗಿದ್ದ ಬೈಕ್ ಸವಾರ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ನಂಜನಗೂಡು ನಿವಾಸಿ ಜಯ ಸೂರ್ಯ(25) ಮೃತಪಟ್ಟವರು.

ಸುಂಟಿಕೊಪ್ಪ ಸಮೀಪದ ಶಾಂತಿಗೇರಿ ಬಳಿ ಮೈಸೂರಿನಿಂದ ಮಂಗಳೂರಿಗೆ ಅಡುಗೆ ಅನಿಲದ ಖಾಲಿ ಸಿಲಿಂಡರ್‌ಗಳನ್ನು ಸಾಗಿಸುತ್ತಿದ್ದ ಲಾರಿಯು ಸುಂಟಿಕೊಪ್ಪದಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಹೀರೋ ಹೊಂಡ ಬೈಕಿಗೆ ಡಿಕ್ಕಿ ಹೊಡೆದಿದೆ. ಬೈಕ್ ಸವಾರ ಜಯಸೂರ್ಯ ಹೆಲ್ಮೆಟ್ ಧರಿಸದಿದ್ದ ಕಾರಣ ಮುಖ ಹಾಗೂ ತಲೆಯ ಭಾಗಕ್ಕೆ ಗಂಭೀರ ಗಾಯಗಳಾಗಿತ್ತು ಮಡಿಕೇರಿಯ ಜಿಲ್ಲಾಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಿ ನಂತರ ಮೈಸೂರು ಆಸ್ಪತ್ರೆಗೆ ಸ್ಥಳಾಂತರಿಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಅಸುನೀಗಿದ್ದಾರೆ. ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ, ಕೈಗೊಂಡಿದ್ದಾರೆ.


ಸಂಪರ್ಕಿಸಲು ಮನವಿ

ಮಡಿಕೇರಿ, ಫೆ.8– ಟರ್ಕಿ ಹಾಗೂ ಸಿರಿಯಾ ದೇಶಗಳಲ್ಲಿ ಪ್ರಬಲ ಭೂಕಂಪನ ಸಂಭವಿಸಿ, ಅಪಾರ ಜೀವಹಾನಿ ಆಗಿದೆ. ಕೊಡಗು ಜಿಲ್ಲೆಯ ನಿವಾಸಿಗಳು ಯಾರಾದರೂ ಟರ್ಕಿ ಅಥವಾ ಸಿರಿಯಾ ದೇಶಗಳಲ್ಲಿ ವಾಸವಿದ್ದು, ನೆರವಿನ ಅಗತ್ಯವಿದ್ದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರ 08272–221077, 08272–221099, ವಾಟ್ಸ್ ಆಪ್ 8550001077 ಈ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಅಧ್ಯಕ್ಷರು ಕೋರಿದ್ದಾರೆ.

ಕೊಡಗಿನಲ್ಲಿ ಜನರು ಬದಲಾವಣೆ ಬಯಸಿದ್ದಾರೆ: ಎ.ಎಸ್. ಪೊನ್ನಣ್ಣ

ಕಾಂಗ್ರೆಸ್ ಸಮಾವೇಶದಲ್ಲಿ ಹಾಲಿ ಶಾಸಕರ ಕಾರ್ಯವೈಖರಿ ಬಗ್ಗೆ ವಾಗ್ದಾಳಿ

ಮಡಿಕೇರಿ, ಫೆ.8– ಕೊಡಗಿನ 2 ವಿಧಾನಸಭಾ ಕ್ಷೇತ್ರದಲ್ಲಿ ದೀರ್ಘಕಾಲದಿಂದ ಅಧಿಕಾರದಲ್ಲಿರುವ ಶಾಸಕರು ಜನರ ಆಶೋತ್ತರಗಳಿಗೆ ಸ್ಪಂದಿಸಿಲ್ಲ. ಆದ್ದರಿಂದ ಜನರು ಬದಲಾವಣೆಯನ್ನು ಬಯಸಿದ್ದು, ಕಾಂಗ್ರೆಸ್ ಕಾರ್ಯಕರ್ತರು ಈ ಅವಕಾಶವನ್ನು ಸಂಘಟಿತರಾಗಿ ಉಪಯೋಗಿಸಿಕೊಳ್ಳಬೇಕು ಎಂದು ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಕರೆ ನೀಡಿದರು.



ಪೊನ್ನಂಪೇಟೆ ತಾಲೂಕು ಕುಟ್ಟ ಕೊಡವ ಸಮಾಜದಲ್ಲಿ ನಡೆದ ಕುಟ್ಟ, ಕೆ.ಬಾಡಗ ಮತ್ತು ನಾಲ್ಕೇರಿ ವಲಯ ಕಾಂಗ್ರೆಸ್ ಪಕ್ಷದ ಸಮಾವೇಶದಲ್ಲಿ ಅವರು ಮಾತನಾಡಿದರು. ಕೊಡಗಿನ ವಿರಾಜಪೇಟೆ ಮತ್ತು ಮಡಿಕೇರಿ ಎರಡು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲ್ಲುತ್ತಾರೆ. ಇತರ ಪಕ್ಷದಿಂದ ಕಾರ್ಯಕರ್ತರು ಈಗಾಗಲೇ ಕಾಂಗ್ರೆಸ್ ಸೇರ್ಪಡೆಗೊಳ್ಳುತ್ತಿದ್ದಾರೆ. ಸೋತರೂ ನಿರಾಸೆಗೊಳ್ಳದೇ ಮತ್ತೆ ಗೆಲುವು ಸಾಧಿಸಬೇಕೆಂಬ ಸಂಕಲ್ಪದೊಂದಿಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹಾಗೂ ಮತದಾರರು ಸಂಘಟಿತರಾಗುತ್ತಿದ್ದಾರೆ ಎಂದು ಪೊನ್ನಣ್ಣ ಹೇಳಿದರು.

ಕೊಡವ ಸಮಾಜಕ್ಕೆ 10 ಕೋಟಿ ರೂ.ಬಿಡುಗಡೆಯಾಗಿದೆ ಎಂದು ಶಾಸಕರು ಹೇಳಿಕೆ ನೀಡುತ್ತಿದ್ದು ಇದುವರೆಗೆ ಯಾವುದೇ ಹಣ ಬಿಡುಗಡೆಯಾಗಿಲ್ಲ ಎಂದು ಪೊನ್ನಣ್ಣ ಅವರು ಹೇಳಿದರು. ಶಾಸಕರು ಪ್ರತಿನಿತ್ಯ ಸುಳ್ಳು ಹೇಳುತ್ತಾ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದವರು.

ಮಾಜಿ ವಿಧಾನಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ ಮಾತನಾಡಿ, ಕಾಂಗ್ರೆಸ್ ಪಕ್ಷ ಎಲ್ಲಾ ಜನಾಂಗ, ಜಾತಿ, ಧರ್ಮದವರು ಒಂದೇ ತಾಯಿಯ ಮಕ್ಕಳಂತೆ ಬದುಕಲು ಪೂರಕ ವಾತಾವರಣವನ್ನು ಒದಗಿಸುತ್ತದೆ. ಕೊಡಗು ಜಿಲ್ಲೆಯಲ್ಲಿ ಉಭಯ ಶಾಸಕರ ಬೇಜವಾಬ್ದಾರಿ ಆಡಳಿತದಿಂದ ಜನ ರೋಸಿ ಹೋಗಿದ್ದು ಕಾಂಗ್ರೆಸ್‌ನಿಂದ ಮಾತ್ರ ಜನಪರ ಆಡಳಿತ ನಡೆಸಲು ಸಾಧ್ಯ. ಜಿಲ್ಲೆಯ ಎರಡು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಪೂರಕವಾದ ವಾತಾವರಣವಿದೆ. ಜಿಲ್ಲೆಯ ಜನತೆಗೆ ಉತ್ತಮ ಆಡಳಿತ ನೀಡಲು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಬೇಕು ಎಂದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನಪರಿಷತ್ ಮಾಜಿ ಸದಸ್ಯ ಅರುಣ್ ಮಾಚಯ್ಯ ಮಾತನಾಡಿ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಗಾಳಿ ಬೀಸುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಡಳಿತದಲ್ಲಿ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಜಿಲ್ಲೆಯ ಶಾಸಕರು ಜನಪರ ಕೆಲಸ ಮಾಡುವ ಉತ್ಸಾಹ ಕಳೆದುಕೊಂಡಿದ್ದಾರೆ. ಜಿಲ್ಲೆಯಲ್ಲಿ ವನ್ಯಪ್ರಾಣಿ–ಮಾನವ ಸಂಘರ್ಷಕ್ಕೆ ಶಾಶ್ವತ ಪರಿಹಾರದ ಆಸಕ್ತಿ ಇಲ್ಲವಾಗಿದೆ ಎಂದು ಕಿಡಿಕಾರಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ಆಡಳಿತ ವಿರೋಧಿ ಮತ್ತು ಶಾಸಕರ ದೀರ್ಘಕಾಲದ ಆಡಳಿತ ವೈಖರಿಯಿಂದ ಜಿಲ್ಲೆಯ ಜನರು ಬೇಸತ್ತಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟಿಸಲಾಗುತ್ತಿದೆ. ಮುಂಬರುವ ಚುನಾವಣೆಗೆ ಮತ್ತಷ್ಟು ಕೆಲಸ ಆಗಬೇಕು. ಬಿಜೆಪಿ ಮತ್ತು ಬಿಜೆಪಿ ಶಾಸಕರ ವೈಫಲ್ಯವನ್ನು ಮತ್ತು ಕಾಂಗ್ರೆಸ್ ಸಾಧನೆಯನ್ನು ಜನರ ಮುಂದಿಡಬೇಕೆಂದು ಕರೆ ನೀಡಿದರು.

ಕಾಂಗ್ರೆಸ್ ಮುಖಂಡ ಕಳ್ಳಿಚಂಡ ನಟರಾಜ್, ಅಲ್ಪಸಂಖ್ಯಾತ ವಿಭಾಗದ ಮುಖಂಡ ಎರ್ಮು ಹಾಜಿ, ಪೊನ್ನಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್ ಹಾಗೂ ಸಭೆಯ ಅಧ್ಯಕ್ಷತೆ ವಹಿಸಿದ್ದ ಕುಟ್ಟ ವಲಯ ಕಾಂಗ್ರೆಸ್ ಅಧ್ಯಕ್ಷ ಹೆಚ್. ವೈ ರಾಮಕೃಷ್ಣ ಅವರುಗಳು ಮಾತನಾಡಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ಕುಟ್ಟ ಬಸ್ ನಿಲ್ದಾಣದಿಂದ ಮುಖ್ಯ ಬೀದಿಯಲ್ಲಿ ಕೊಡವ ಸಮಾಜದವರೆಗೆ ಮೆರವಣಿಗೆ ನಡೆಸಲಾಯಿತು. ವೇದಿಕೆಯಲ್ಲಿ ಕಾಂಗ್ರೆಸ್ ಓಬಿಸಿ ಘಟಕದ ಜಿಲ್ಲಾಧ್ಯಕ್ಷ ಬಾನಂಡ ಪ್ರತ್ಯು, ಓಬಿಸಿ ಘಟಕದ ರಾಜ್ಯ ಉಪಾಧ್ಯಕ್ಷ ಕೆ.ಎಂ. ಬಾಲಕೃಷ್ಣ, ಪೊನ್ನಂಪೇಟೆ ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೋಳೆರ ಭಾರತಿ, ಯುವ ಘಟಕದ ಅಧ್ಯಕ್ಷ ಅಂಕಿತ್ ಪೊನ್ನಪ್ಪ, ಬ್ಲಾಕ್ ಓಬಿಸಿ ವಿಭಾಗದ ಶರತ್ ಕಾಂತ್, ತಾಪಂ ಮಾಜಿ ಸದಸ್ಯ ಪಲ್ವಿನ್ ಪೂಣಚ್ಚ, ಕೆ.ಬಾಡಗ ವಲಯ ಕಾಂಗ್ರೆಸ್ ಅಧ್ಯಕ್ಷ ಚಿಮ್ಮಣಮಾಡ ರವಿನರೇಂದ್ರ, ನಾಲ್ಕೇರಿ ವಲಯ ಅಧ್ಯಕ್ಷ ತೀತಿರ ಕಟ್ಟಿ, ಡಿಸಿಸಿ ಮಾಜಿ ಅಧ್ಯಕ್ಷ ಪಿ.ಕೆ.ಪೊನ್ನಪ್ಪ, ಎಚ್.ಡಿ.ದೊಡ್ಡಯ್ಯ ಹಾಜರಿದ್ದರು.

ಗುಂಡು ಹಾರಿಸಿಕೊಂಡು ನಿವೃತ್ತ ಅರಣ್ಯಾಧಿಕಾರಿ ಆತ್ಮಹತ್ಯೆ



ಕುಶಾಲನಗರ, ಫೆ.8– ತಾಲೂಕಿನ ಬಸವನತ್ತೂರು ಗ್ರಾಮದಲ್ಲಿ ನಿವೃತ್ತ ಅರಣ್ಯಾಧಿಕಾರಿಯೊಬ್ಬರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ನಡೆದಿದೆ.

ಕೂಡುಮಂಗಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬಸವನತ್ತೂರು ಗ್ರಾಮದ ನಿವಾಸಿ ನಿವೃತ್ತ ಅರಣ್ಯಾಧಿಕಾರಿ ಟಿ.ವಿ.ಶಶಿ(80) ಆತ್ಮಹತ್ಯೆಗೆ ಶರಣಾದವರು. ಅನಾರೋಗ್ಯದಿಂದ ಬಳಲುತ್ತಿದ್ದ ಅವರು ರಿವಾಲ್ವರ್‌ನಿಂದ ತಲೆಗೆ ಗುಂಡು ಹೊಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಕೊಡಗಿನ ವಿವಿಧೆಡೆ ರೇಂಜರ್ ಆಗಿ ಸೇವೆ ಸಲ್ಲಿಸಿದ್ದ ಶಶಿಧರ್ ಕೆಲವು ದಿನಗಳಿಂದ ನಿದ್ರಾಹೀನತೆಯಿಂದ ಬಳಲುತ್ತಿದ್ದರು ಎನ್ನಲಾಗಿದೆ. ಈ ಬಗ್ಗೆ ಡೆತ್ ನೋಟ್ ಬರೆದು ಶಶಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಗ್ರಾಮಾಂತರ ಪೊಲೀಸ್ ಠಾಣೆಯ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಆಂಬುಲೆನ್ಸ್ ಡಿಕ್ಕಿ: ಬೈಕ್ ಸವಾರ ಸಾವು

ಮಡಿಕೇರಿ, ಫೆ.8– ಆಂಬುಲೆನ್ಸ್ ಮತ್ತು ಬೈಕ್ ನಡುವೆ ಸಂಭವಿಸಿದ ಡಿಕ್ಕಿಯಿಂದ ಬೈಕ್ ಸವಾರ ಸಾವನ್ನಪಿದ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕಡಗದಾಳು ಗ್ರಾಮದಲ್ಲಿ ನಡೆದಿದೆ. ಚೆಟ್ಟಳ್ಳಿ ನಿವಾಸಿ ಲೋಕೇಶ್ ಕೆ.ಕೆ(46) ಎಂಬವರೇ ಮೃತ ದುರ್ದೈವಿ.

ಕಾರ್ಪೆಂಟರ್ ಕೆಲಸಗಾರರಾಗಿರುವ ಲೋಕೇಶ್ ತಮ್ಮ ಬೈಕ್‌ನಲ್ಲಿ ಮಡಿಕೇರಿ ಮಾರ್ಗವಾಗಿ ಚೆಟ್ಟಳ್ಳಿ ಕಡೆಗೆ ತೆರಳುತ್ತಿದ್ದು ಗೋಣಿಕೊಪ್ಪದಿಂದ ಚೆಟ್ಟಳ್ಳಿ ಮಾರ್ಗವಾಗಿ ಮಡಿಕೇರಿ ಕಡೆಗೆ ಬರುತ್ತಿದ್ದ ಆಂಬುಲೆನ್ಸ್ ಕಡಗದಾಳು ಗ್ರಾಮದ ತಿರುವು ವೊಂದರಲ್ಲಿ ಲೋಕೇಶ್ ಅವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ತಲೆಯ ಭಾಗಕ್ಕೆ ಗಂಭೀರ ಗಾಯವಾಗಿದ್ದ ಲೋಕೇಶ್ ಅವರನ್ನು ತಕ್ಷಣವೇ ಮಡಿಕೇರಿ ಜಿಲ್ಲಾಸ್ಪತ್ರೆಗೆ ಕರೆ ತರುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಪಪಂ ಮಾಜಿ ಸದಸ್ಯ ಸಂತೋಷ್ ನಿಧನ

ವಿರಾಜಪೇಟೆ, ಫೆ.8– ಪಪಂ ಮಾಜಿ ಸದಸ್ಯ, ಉದ್ಯಮಿ ಕೆ.ವಿ.ಸಂತೋಷ್ (51) ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಮೃತರು ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದು ಆಸ್ಪತ್ರೆಗೆ ದಾಖಲಾಗಿದ್ದರು. ಮೃತರ ಅಂತ್ಯಕ್ರಿಯೆ ನಗರದ ಮೀನುಪೇಟೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಶಾಂತಿಕೋರಿ ಸಂಜೆ 4 ಗಂಟೆಯಿಂದ 5 ಗಂಟೆವರೆಗೆ ಸ್ವಯಂಪ್ರೇರಿತ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ಫೆ.11, ಮಳವಳ್ಳಿಗೆ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ

ಕಾಂಗ್ರೆಸ್ ಮುಖಂಡ ಡಾ.ಮೂರ್ತಿ




ಮಳವಳ್ಳಿ, ಫೆ.8– ಫೆ.11ರಂದು ಮಳವಳ್ಳಿ ತಾಲ್ಲೂಕಿನಲ್ಲಿ ಪ್ರಜಾಧ್ವನಿ ಯಾತ್ರೆ ನಡೆಯಲಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದು, ಮಳವಳ್ಳಿ ವಿಧಾನಸಭಾ ಕ್ಷೇತ್ರ ಸೇರಿದಂತೆ ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಈ ಯಾತ್ರೆಯನ್ನು ಯಶಸ್ವಿಗೊಳಿಸಬೇಕೆಂದು ಕಾಂಗ್ರೆಸ್ ಮುಖಂಡ ಡಾ.ಮೂರ್ತಿ ಮನವಿ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 3.30ಕ್ಕೆ ಹಲಗೂರು ಮಾರ್ಗದಿಂದ ಹಾಡ್ಲಿ ಸರ್ಕಲ್, ಮಳವಳ್ಳಿ ಟೌನ್ ಮೂಲಕ ಪ್ರಜಾಧ್ವನಿ ಯಾತ್ರೆ ಆಗಮಿಸಲಿದ್ದು, ಬಳಿಕ ಬೃಹತ್ ಸಮಾವೇಶ ನಡೆಯಲಿದೆ ಎಂದು ಹೇಳಿದರು. ಜನರ ಸಮಸ್ಯೆಯನ್ನು ತಿಳಿದುಕೊಳ್ಳುವುದು, ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಆ ಸಮಸ್ಯೆಗಳನ್ನು ಬಗೆ ಹರಿಸುವುದು. ಜೊತೆಗೆ ಕಾಂಗ್ರೆಸ್ ಪಕ್ಷವನ್ನು ಪ್ರಬಲವಾಗಿ ಸಂಘಟಿಸುವುದು ಕಾರ್ಯಕ್ರಮದ ಉದ್ದೇಶವಾಗಿದ್ದು, ಮಹಿಳೆಯರು, ಕಾರ್ಮಿಕರು, ಯುವಕರು, ಬಡವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪ್ರಜಾಧ್ವನಿ ಹಾಗೂ ಭಾರತ್ ಜೋಡೋ ಯಾತ್ರೆಯ ಮೂಲಕ ನಮ್ಮ ನಾಯಕರು ಅರಿತಿದ್ದಾರೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಈ ಎಲ್ಲಾ ಸಮಸ್ಯೆಯನ್ನು ಪರಿಹರಿಸಬೇಕೆಂಬ ನಿಟ್ಟಿನಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಪಣತೊಟ್ಟಿದ್ದಾರೆ ಎಂದರು.

ದೇಶದಲ್ಲಿ ಭಾರತ್ ಜೋಡೋ ಯಾತ್ರೆ ಯಶಸ್ಸು ಕಂಡಂತೆ ರಾಜ್ಯದಲ್ಲಿ ಪ್ರಜಾಧ್ವನಿ ಯಶಸ್ವಿಯಾಗಿದೆ. ನಮ್ಮಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯವಿಲ್ಲ. ಎಲ್ಲಾ ನಾಯಕರೂ ಒಗ್ಗಟ್ಟಾಗಿ ಈಗಾಗಲೇ ಮಂಡ್ಯದಲ್ಲಿ ಪ್ರಜಾಧ್ವನಿ ಯಾತ್ರೆಯನ್ನು ಯಶಸ್ವಿಗೊಳಿಸಿದ್ದೇವೆ. ಇದೀಗ ಮಳವಳ್ಳಿ ಯಲ್ಲೂ ಯಾತ್ರೆಯನ್ನು ಸಂಪೂರ್ಣ ಯಶಸ್ವಿಗೊಳಿಸುತ್ತೇವೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಯಾವ್ಯಾವ ಸಮುದಾಯಕ್ಕೆ ನ್ಯಾಯ ಒದಗಿಸಿಕೊಡಬೇಕು. ಆ ನ್ಯಾಯವನ್ನು ಕೊಟ್ಟಿದೆ. ಆದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ಸಮುದಾಯಕ್ಕೂ ಅನ್ಯಾಯವಾಗಿದೆ. ಬಡವರು, ದಲಿತರು, ಅಲ್ಪಸಂಖ್ಯಾತರು ಬಿಜೆಪಿ ಸರ್ಕಾರದಲ್ಲಿ ಜೀವನ ನಡೆಸುವುದೇ ದುಸ್ತಾರವಾಗಿದೆ. ಈ ನಿಟ್ಟಿನಲ್ಲಿ ಮುಂದಿನ ಚುನಾವಣೆ ಯಲ್ಲಿ ಬಿಜೆಪಿಯನ್ನು ಕಿತ್ತೊಗೆದು ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರಬೇಕೆಂದು ಮನವಿ ಮಡಿದರು.

ನಿಧನ ನಾಗಮ್ಮ



ಕೆ.ಆರ್.ಪೇಟೆ, ಫೆ.8– ತಾಲೂಕಿನ ಬೂಕನಕೆರೆ ಗ್ರಾಮದ ಬಿಜೆಪಿ ಮುಖಂಡ ಮಧುಸೂದನ್ ಅವರ ತಾಯಿ ನಾಗಮ್ಮ ಅವರು ಬುಧವಾರ ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು. ಮೃತರು ಬಿ.ಕೆ.ಮಧುಸೂಧನ್ (ಯಡಿಯೂರಪ್ಪ ಅಭಿಮಾನಿ ಬಳಗದ ಅಧ್ಯಕ್ಷ) ಸೇರಿದಂತೆ ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ಬೂಕನಕೆರೆ ಗ್ರಾಮದಲ್ಲಿ ನಡೆಯಿತು. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಬನ್ನಂಗಾಡಿಯಲ್ಲಿ ವಿಜೃಂಭಣೆಯ ಸಾಹಿತ್ಯ ಸಮ್ಮೇಳನ

ಚಿನಕುರಳಿ, ಫೆ.8– ಇಲ್ಲಿನ ಸಮೀಪದ ಬನ್ನಂಗಾಡಿ ಗ್ರಾಮದಲ್ಲಿ 9ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ ವಿಜೃಂಭಣೆಯಿಂದ ಜರುಗಿತು.



ಸಮ್ಮೇಳನಾಧ್ಯಕ್ಷ ಚಂದ್ರಶೇಖರಯ್ಯ ಅವರನ್ನು ಅದ್ದೂರಿಯಾಗಿ ಮೆರವಣಿಗೆ ನಡೆಸಲಾಯಿತು. ಬನ್ನಂಗಾಡಿ ಗ್ರಾಮದ ಶಾಲಾ ವೃತ್ತದಿಂದ ಆರಂಭಗೊಂಡ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಗ್ರಾಪಂ ಅಧ್ಯಕ್ಷೆ ಕೆ.ಎಂ.ಶೃತಿ ಅವರು ಚಾಲನೆ ನೀಡಿದರು. ಬೆಳಿಗ್ಗೆ ಸುಮಾರು 9.45ಕ್ಕೆ ಆರಂಭಗೊಂಡ ಮೆರವಣಿಗೆಯೂ ಮಧ್ಯಾಹ್ನ 12 ಗಂಟೆಯವರೆಗೂ ನಡೆಯಿತು.

ಸಮ್ಮೇಳನಾಧ್ಯಕ್ಷರ ಮೆರವಣಿಗೆಯ ಮಾರ್ಗದುದ್ದಕ್ಕೂ ಗ್ರಾಮದ ಜನತೆ ರಸ್ತೆಗೆ ನೀರು ಹಾಕಿ ರಂಗೋಲಿ ಬಿಡಿಸಿ, ತಳಿರು ತೋರಣಗಳಿಂದ ಮದುವಣಗಿತ್ತಿಯಂತೆ ಅಲಂಕರಿಸಲಾಗಿತ್ತು. ಸಮ್ಮೇಳನಾಧ್ಯಕ್ಷ ಸಾಹಿತಿ ಚಂದ್ರಶೇಖರಯ್ಯ, ಪತ್ನಿ ಶಾಂತಮ್ಮ ಹಾಗೂ ಕಸಾಪ ಜಿಲ್ಲಾಧ್ಯಕ್ಷ ರವಿಕುಮಾರ್ ಚಾಮಲಾಪುರ ಅವರನ್ನು ಸಾರೋಟ್‌ನಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮೆರವಣಿಗೆಯುದ್ದಕ್ಕೂ ವಿವಿಧ ಸಾಂಸ್ಕೃತಿಕ ಕಲಾತಂಡಗಳಾದ ಶಾಲಾ ಮಕ್ಕಳ ಕೋಲಾಟ ತಂಡ, ಪೂಜಾ ಕುಣಿತ, ಡೊಳ್ಳುಕುಣಿತ, ಯಕ್ಷಗಾನ ಸಮವಸ್ತ್ರ ಧರಿಸಿದ ಶಾಲಾ ಮಕ್ಕಳ ತಂಡ, ಶಾಲಾ ಮಕ್ಕಳ ಬ್ಯಾಂಡ್‌ಶೆಟ್ ತಂಡಗಳು, ನಂದಿಕಂಭ ಕುಣಿತ, ಮಹಿಳೆಯರ ಪೂರ್ಣಕುಂಭ ಸೇರಿದಂತೆ ಹಲವು ಸಾಂಸ್ಕೃತಿಕ ತಂಡಗಳು ಭಾಗವಹಿಸಿದ್ದವು. ಗ್ರಾಮದ ಹಲವಾರು ಯುವಕರು ತಮ್ಮ ಹಳ್ಳಿಕಾರ್ ತಳಿಯ ಎತ್ತುಗಳನ್ನು ಮೆರವಣಿಗೆಯಲ್ಲಿ ಪ್ರದರ್ಶಿಸಿ ಗಮನ ಸೆಳೆದರು. ವಿಶೇಷವಾಗಿ ಕಸಾಪ ಬಳಗದಿಂದ 700 ಅಡಿ ಉದ್ದದ ಕನ್ನಡ ಭಾವುಟವನ್ನು ಮೆರವಣಿಗೆ ಯುದ್ದಕ್ಕೂ ಪ್ರದರ್ಶನ ಮಾಡುವ ಮೂಲಕ ಮೆರವಣಿಗೆ ಮೆರಗು ನೀಡಿದರು. ಮೆರವಣಿಗೆ ಹೋಗುವ ದಾರಿಯಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಬ್ಯಾನರ್ ಕಟೌಟ್‌ಗಳು: ಸಾಹಿತ್ಯ ಸಮ್ಮೇಳನದ ಅಂಗವಾಗಿ ತಾಲೂಕಿನ ಬನ್ನಂಗಾಡಿ ಗ್ರಾಮದಲ್ಲಿ ಎಲ್ಲಿ ನೋಡಿದರು ಕನ್ನಡದ ಕಂಪು ರಾರಾಜಿಸಿತ್ತು. ಗ್ರಾಮದಲ್ಲಿ ಎಲ್ಲಾ ಬೀದಿಗಳಲ್ಲೂ ಕನ್ನಡ ಭಾವುಟಗಳು, ಕಟೌಟ್‌ಗಳು ರಾರಾಜಿಸುತ್ತಿದ್ದವು. ನಾಡು–ನುಡಿ, ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದ ಕನ್ನಡದ ದಿಗ್ಗಜ ಕವಿಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳು, ಮಹಾನ್ ದಾರ್ಶನಿಕರ ಭಾವಚಿತ್ರದ ಫ್ಲೆಕ್ಸ್‌ಗಳನ್ನು ದಾರಿಯುದ್ದಕ್ಕೂ ಪ್ರದರ್ಶನ ಮಾಡಲಾಗಿತ್ತು. ದಾರಿಯಲ್ಲಿ ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು

ವೇದಿಕೆ ಪಕ್ಕದಲ್ಲಿ ವಿವಿಧ ಇಲಾಖೆಗಳಿಂದ ವಸ್ತುಪ್ರದರ್ಶನ ಮಾಡಲಾಗಿತ್ತು. ಕೃಷಿ, ತೋಟಗಾರಿಕೆ, ಪಶುಸಂಗೋಪನ, ಸಿಡಿಪಿಓ, ಶಿಕ್ಷಣ ಸೇರಿದಂತೆ ಹಲವು ಇಲಾಖೆಯಲ್ಲಿ ದೊರೆಯುವ ಸೌಲಭ್ಯಗಳು, ಮಾಹಿತಿಗಳನ್ನು ಅಲ್ಲಿ ಪ್ರದರ್ಶಿಸಲಾಗಿತ್ತು.

ಆರೋಗ್ಯ ಮೇಳ: ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಶಾಲಾ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಯಿತು. ಶಿಬಿರದಲ್ಲಿ ಬಿಪಿ, ಸಕ್ಕರೆಕಾಯಿಲೆ ಸೇರಿದಂತೆ ಹಲವು ಕಾಯಿಲೆಗಳ ತಪಾಸಣೆ ನಡೆಸಲಾಯಿತು.

ಇದಕ್ಕೂ ಮುನ್ನ ಧ್ವಜಾರೋಹಣ ನೆರವೇರಿಸಲಾಯಿತು. ತಹಶೀಲ್ದಾರ್ ಕೆ.ಸಿ.ಸೌಮ್ಯ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು. ಶಾಸಕ ಸಿ.ಎಸ್.ಪುಟ್ಟರಾಜು ಅವರು ನಾಡಧ್ವಜಾರೋಹಣ ನೆರವೇರಿಸಿದರು. ಕಸಾಪ ಜಿಲ್ಲಾಧ್ಯಕ್ಷ ಸಿ.ಕೆ. ರವಿಕುಮಾರ್ ಚಾಮಲಾಪುರ ಅವರು ಪರಿಷತ್ತಿನ ಧ್ವಜಾರೋಹಣ ನೆರವೇರಿಸಿದರು.





ಫೆ.11, ರಾಷ್ಟ್ರೀಯ ಲೋಕ ಅದಾಲತ್

ಶ್ರೀರಂಗಪಟ್ಟಣ, ಫೆ.8– ಪಟ್ಟಣದ ನ್ಯಾಯಾಲಯದಲ್ಲಿ ಫೆ.11 ರಂದು ರಾಷ್ಟ್ರೀಯ ಲೋಕ ಅದಾಲತ್ ನಡೆಯಲಿದ್ದು, ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊಳ್ಳುವಂತೆ ಪ್ರಧಾನ ಸಿವಿಲ್ ನ್ಯಾಯಾಧೀಶರು, ಜೆ.ಎಂ.ಎಫ್.ಸಿ. ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಕಾರ್ಯದರ್ಶಿಗಳಾದ ದೇವರಾಜ್ ವೈ.ಹೆಚ್ ತಿಳಿಸಿದ್ದಾರೆ. ಅಂದು ಬೆಳಗ್ಗೆ 11 ರಿಂದ ಸಂಜೆ 5 ಗಂಟೆವರೆಗೆ 15 ಪೀಠಗಳಲ್ಲಿ ಲೋಕ ಅದಾಲತ್ ನಡೆಯಲಿದೆ. ಈ ಲೋಕ ಅದಾಲತ್‌ನಲ್ಲಿ ಆಸ್ತಿ ವಿಭಾಗ, ಭೂ ಸ್ವಾಧೀನ ಪ್ರಕರಣ, ಚೆಕ್ ಬೌನ್ಸ್ ಪ್ರಕರಣ, ಪತಿ–ಪತ್ನಿ ಪ್ರಕರಣ, ವಾಹನ ಅಪಘಾತ ಪ್ರಕರಣ, ಬ್ಯಾಂಕ್ ಹಣಕಾಸಿಗೆ ಸಂಬಂಧಿಸಿದ ದಾವೆಗಳು, ಸಣ್ಣ ಪುಟ್ಟ ಪ್ರಕರಣ, ಸೇರಿದಂತೆ ಇತರೆ ಪ್ರಕರಣಗಳನ್ನು ಇತ್ಯರ್ಥ ಮಾಡಬಹುದಾದ ವ್ಯಾಜ್ಯಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲಾಗುವುದು ಹಾಗಾಗಿ ಕಕ್ಷಿದಾರರು ಇದರ ಪ್ರಯೋಜನೆ ಪಡೆದುಕೊಳ್ಳುವಂತೆ ಅವರು ಹೇಳಿದ್ದಾರೆ.

ಕೊಳ್ಳೇಗಾಲದಲ್ಲಿ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವಿಜೃಂಭಣೆಯ ಚಾಲನೆ

ಕೊಳ್ಳೇಗಾಲ, ಫೆ.8– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೊಳ್ಳೇಗಾಲ ತಾಲೂಕು ಆಡಳಿತ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಕೊಳ್ಳೇಗಾಲದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಚಾಮರಾಜನಗರ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇಂದು ವಿಜೃಂಭಣೆಯ ಚಾಲನೆ ದೊರೆಯಿತು.



ಕೊಳ್ಳೇಗಾಲ ಪಟ್ಟಣದ ಎಂಜಿಎಸ್‌ವಿ ಕಾಲೇಜು ಆವರಣದ ಜನಪದ ಮಹಾ ಮಂಟಪದ ಶ್ರೀ ಕುಮಾರ್ ನಿಜಗುಣ ವೇದಿಕೆಯಲ್ಲಿ ಜಿಲ್ಲಾ 12ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ. ಮಹೇಶ್ ಜೋಶಿ ಅವರು ಚಾಮರಾಜನಗರ ಜಿಲ್ಲೆಯು ಕೇರಳ ಹಾಗೂ ತಮಿಳುನಾಡು ರಾಜ್ಯದ ಗಡಿ ಹೊಂದಿದ್ದರೂ ಸಹ ಇಲ್ಲಿ ಕನ್ನಡಕ್ಕೆ ಇರುವ ಅಗ್ರಸ್ಥಾನವನ್ನು ಬಿಟ್ಟುಕೊಟ್ಟಿಲ್ಲ. ಕನ್ನಡತನ ಕಾಪಾಡಿಕೊಂಡು ಬಂದಿರುವ ಚಾಮರಾಜನಗರ ಜಿಲ್ಲೆಯ ಜನ ಒಳ್ಳೆಯವರು ಎಂದು ಶ್ಲಾಘಿಸಿದರು.

ಜಾನಪದ ಸಿರಿ ಸಂಪತ್ತಿನ ಜಿಲ್ಲೆ ಚಾಮರಾಜನಗರ. ಪವಾಡ ಪುರುಷರು ನಡೆದಾಡಿದ ನಾಡು. ಅನೇಕ ಹೆಸರಾಂತ ಸಾಹಿತಿಗಳು, ವರನಟ ಡಾ. ರಾಜ್‌ಕುಮಾರ್ ಸೇರಿದಂತೆ ಹಲವಾರು ಮೇರು ವ್ಯಕ್ತಿಗಳು ಈ ಜಿಲ್ಲೆಯವರಾಗಿದ್ದಾರೆ. ಸಾಹಿತ್ಯ, ಸಂಸ್ಕೃತಿಯಲ್ಲದೇ ಹೃದಯ ಶ್ರೀಮಂತಿಕೆಯಲ್ಲಿಯೂ ಜಿಲ್ಲೆ ಮುಂದೆ ಇದೆ ಎಂದರು.

ತಮ್ಮ ಅಧಿಕಾರಾವಧಿ ಇನ್ನೂ 4 ವರ್ಷಗಳಿದ್ದು ಚಾಮರಾಜನಗರ ಜಿಲ್ಲೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಲಾಗುತ್ತದೆ. ಸಾಲೂರು ಮಠದ ಶಾಂತಮಲ್ಲಿಕಾರ್ಜುನಸ್ವಾಮಿಯವರು ಮಹದೇಶ್ವರ ಬೆಟ್ಟದಲ್ಲಿಯೇ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆಗೆ ಎಲ್ಲಾ ನೆರವು ಕೊಡುವುದಾಗಿ ಹೇಳಿದ್ದಾರೆ ಎಂದು ಮಹೇಶ್ ಜೋಶಿ ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಎನ್.ಮಹೇಶ್, ಸಮ್ಮೇಳನದ ಸರ್ವಾಧ್ಯಕ್ಷ ಮಹಾದೇವ ಶಂಕನಪುರ ಅವರು ಕಲೆ, ಸಾಹಿತ್ಯ, ಸಂಸ್ಕೃತಿ, ಸಮಸ್ಯೆಗಳು ಹಾಗೂ ಜಿಲ್ಲೆಯಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ವಿಸ್ತೃತವಾಗಿ ಮಂಡಿಸಿದ್ದಾರೆ. ಸಮ್ಮೇಳನದ ಅಧ್ಯಕ್ಷರು ಪ್ರಸ್ತಾಪಿಸಿರುವ ವಿಚಾರಗಳನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುವುದಾಗಿ ನುಡಿದರು.

ಗಡಿ ಭಾಗದ ಶಾಲೆಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಮುಂದಾಗಿದೆ. ಈಗಾಗಲೇ ವಿವೇಕ ಯೋಜನೆಯಡಿ 7900 ಶಾಲಾ ಕೊಠಡಿಗಳನ್ನು 1200 ಕೋಟಿ ರೂ. ಅನುದಾನದಲ್ಲಿ ನಿರ್ಮಿಸಲು ಸಂಕಲ್ಪ ಮಾಡಲಾಗಿದ್ದು, ಫೆಬ್ರವರಿ–ಮಾರ್ಚ್ ಒಳಗೆ ಶಾಲಾ ಕೊಠಡಿ ಕಾಮಗಾರಿಗಳು ಪೂರ್ಣಗೊಳ್ಳಲಿವೆ. ಜಿಲ್ಲೆಯಲ್ಲಿ 105 ಶಾಲಾ ಕೊಠಡಿಗಳು ನಿರ್ಮಾಣವಾಗಲಿವೆ. ನನ್ನ ಕ್ಷೇತ್ರದಲ್ಲಿ ಶಾಸಕ ಅನುದಾನದಲ್ಲಿ 28 ಕೋಟಿ ರೂ. ವೆಚ್ಚದಲ್ಲಿ 35 ಶಾಲಾ ಕೊಠಡಿಗಳು ನಿರ್ಮಾಣಗೊಳ್ಳಲಿವೆ. ಶಿಕ್ಷಣ ಕ್ಷೇತ್ರದ ಮೂಲ ಸೌಕರ್ಯವನ್ನು ಸಮರ್ಪಕವಾಗಿ ಕೈಗೊಳ್ಳಲಾಗಿದೆ ಎಂದು ಶಾಸಕರು ತಿಳಿಸಿದರು.

ಪ್ರತಿಭೆಯನ್ನು ಗುರುತಿಸಿ ಗೌರವಿಸುವ ಕೆಲಸ ನಡೆಯುತ್ತಿದೆ. ಸಾಹಿತಿ ಮೂಡ್ನಕೂಡು ಚಿನ್ನಸ್ವಾಮಿ, ಮಹಾದೇವ ಶಂಕನಪುರ, ಜೀರಿಗೆಗದ್ದೆ ಮಾದಮ್ಮ ಅವರ ಪ್ರತಿಭೆ ಸಾಮರ್ಥ್ಯ ಗುರುತಿಸಿ ಗೌರವಿಸಲಾಗಿದೆ. ಜಾನಪದ ನೆಲೆಯಾಗಿರುವ ಚಾಮರಾಜನಗರ ಜಿಲ್ಲೆಯಲ್ಲಿ ಜಾನಪದ ಪ್ರತಿಭೆಗಳನ್ನು ಗುರುತಿಸುವ ಕಾರ್ಯವು ನಡೆಯಲಿದೆ. ಶೇ. 22ರಷ್ಟು ಕೃಷಿ ಭೂಮಿ ಹೊಂದಿರುವ ಜಿಲ್ಲೆಯ ಎಲ್ಲಾ ಕೆರೆ ಕಟ್ಟೆಗಳನ್ನು ಅಭಿವೃದ್ಧಿಪಡಿಸಿ ನದಿ ಮೂಲದಿಂದ ನೀರು ಹರಿಸುವ 1200 ಕೋಟಿಗೂ ಹೆಚ್ಚು ವೆಚ್ಚದ ಯೋಜನೆಗೆ ವಿಸ್ತೃತ ಯೋಜನಾ ವರದಿ ಸಿದ್ಧವಾಗಿದ್ದು ಬಜೆಟ್‌ನಲ್ಲಿ ಘೋಷಣೆಯಾಗಲಿದೆ ಎಂದರು. ದಿವ್ಯ ಸಾನಿಧ್ಯ ವಹಿಸಿದ್ದ ಶ್ರೀ ಸಾಲೂರು ಮಠದ ಶಾಂತಮಲ್ಲಿಕಾರ್ಜುನ ಸ್ವಾಮಿಯವರು ಮಾತನಾಡಿ, ಕನ್ನಡ ಸಾಹಿತ್ಯ ಹಿಮಾಲಯದ ಎತ್ತರಕ್ಕೆ ಬೆಳೆದಿದೆ. ಸಾಗರದಷ್ಟು ವಿಶಾಲವಾಗಿದೆ. ಇಡೀ ವಿಶ್ವವೇ ಮನಮುಟ್ಟುವಂತೆ ಕನ್ನಡ ಸಾಹಿತ್ಯ ತನ್ನದೇ ಆದ ಛಾಪು ಮೂಡಿಸಿದೆ. ವಿಶ್ವದ ಎರಡನೇ ಜನಪದ ಮಹಾಕಾವ್ಯ ಮಲೆಮಹದೇಶ್ವರ ಎಂಬುದು ಗಮನಾರ್ಹ. ಜನಪದ ಸಾಹಿತ್ಯ ಎಲ್ಲ ಕಡೆ ಪಸರಿಸಿಕೊಂಡಿದೆ ಎಂದರು.

ಮಳವಳ್ಳಿ ಶ್ರೀ ಮಂಟೇಸ್ವಾಮಿ ಮಠದ ಶ್ರೀಕಂಠಸಿದ್ದಲಿಂಗರಾಜೇಅರಸ್ ಅವರು ಮಾತನಾಡಿ, ಪ್ರಪಂಚದಲ್ಲಿ ಎಲ್ಲೇ ಹೋದರು ನಾವು ಕನ್ನಡಿಗರು ಎಂದು ಗುರುತಿಸಿಕೊಳ್ಳಲು ನಮ್ಮ ಕನ್ನಡ ಭಾಷೆ, ಸಾಹಿತ್ಯ ಹಿರಿಮೆಯೇ ಕಾರಣ. ಜನಪದ ಮಹಾಕಾವ್ಯಗಳನ್ನು ಎಲ್ಲರಿಗೂ ತಲುಪಿಸುವ ನಿಟ್ಟಿನಲ್ಲಿ ನೆರವು ನೀಡಲು ಸಿದ್ಧರಿರುವುದಾಗಿ ನುಡಿದರು.

ನಿಕಟಪೂರ್ವ ಸಮ್ಮೇಳನಾಧ್ಯಕ್ಷರಾದ ಮಂಜು ಕೋಡಿಉಗನೆ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಎಂ. ಶೈಲಕುಮಾರ್, ಕಾವೇರಿ ಜಲಾನಯನ ಅಭಿವೃದ್ಧಿ ಯೋಜನೆಯ ಅಧ್ಯಕ್ಷ ಜಿ. ನಿಜಗುಣರಾಜು, ಸಾಹಿತಿ ಮಂಗಳ ಮುದ್ದು ಮಾದಪ್ಪ, ಮಾಜಿ ಶಾಸಕ ಎಸ್. ಬಾಲರಾಜು ಅವರು ಮಾತನಾಡಿದರು. ಹಿರಿಯ ಸಾಹಿತಿ ಹೊರೆಯಾಲ ದೊರೆಸ್ವಾಮಿ ಅವರಿಗೆ ಮುದ್ದು ಮಾದಪ್ಪ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನೂರಾರು ಬರಹಗಾರರಿಂದ ಜಿಲ್ಲೆಯ ಸಾಹಿತ್ಯ ಶ್ರೀಮಂತ

ಸಮ್ಮೇಳನದ ಸರ್ವಾಧ್ಯಕ್ಷರಾದ ಮಹಾದೇವ ಶಂಕನಪುರ ಅವರು ಮಾತನಾಡಿ, ಪ್ರಸ್ತುತ ಆಧುನಿಕ ಕನ್ನಡ ಸಾಹಿತ್ಯ ಮತ್ತು ದಲಿತ ಬಂಡಾಯ ಸಾಹಿತ್ಯಕ್ಕೆ ನಮ್ಮ ಜಿಲ್ಲೆಯ ಸಾಹಿತಿಗಳ ಕೊಡುಗೆಯೂ ಕೂಡ ಗಮನಾರ್ಹವಾಗಿದೆ. ನೂರಾರು ಬರಹಗಾರರು ನಮ್ಮ ಜಿಲ್ಲೆಯ ಸಾಹಿತ್ಯ ಚರಿತ್ರೆಯನ್ನು ಶ್ರೀಮಂತಗೊಳಿಸಿದ್ದಾರೆ. ಜಿಲ್ಲೆಯ ಸಾಹಿತಿಗಳ ಬರಹಗಳು ಕನ್ನಡ ಮಾತ್ರವಲ್ಲದೇ ರಾಷ್ಟ್ರಮಟ್ಟದಲ್ಲೂ ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಾಮುಖ್ಯತೆ ಪಡೆದ ಉದಾಹರಣೆಗಳಿವೆ ಎಂದರು.

ನಮ್ಮ ಜಿಲ್ಲೆಯ ಜನಪದ ಮಹಾಕಾವ್ಯಗಳು ಮತ್ತು ಪಂಥಗಳ ಆಶಯ ಮಹತ್ವದಾಗಿದ್ದು, ಇಂದಿಗೂ ಪ್ರಸ್ತುತವೂ ಆಗಿದೆ. ಜಾತ್ಯಾತೀತತೆ, ಸಮಾನತೆ, ಸಹಿಷ್ಣುತೆ, ಏಕತೆ, ಸಹಬಾಳ್ವೆಯನ್ನು ಮಾದೇಶ್ವರ, ಮಂಟೇಸ್ವಾಮಿ ಕಾವ್ಯ ಮತ್ತು ಪರಂಪರೆಗಳ ಪ್ರತಿಪಾದಿಸುತ್ತವೆ. ಕುಲೇಳು ಹದಿನೆಂಟು ಜಾತಿ ಒಳಗೆ ಏಕವಾಗಿ ಉರಿಯುವ ಪರಂಜ್ಯೋತಿ ಎಂಬ ಪರಿಕಲ್ಪನೆ ನಮ್ಮ ಜಿಲ್ಲೆಯ ಒಟ್ಟು ಸಾಹಿತ್ಯ ಮತ್ತು ಸಂಸ್ಕೃತಿಯ ಅಘೋಷಿತ ತಾತ್ವಿಕತೆಯಾಗಿದೆ ಎಂದು ಸಮ್ಮೇಳನದ ಅಧ್ಯಕ್ಷರು ನುಡಿದರು.

ಕನ್ನಡ ಸಾಹಿತ್ಯ ಮತ್ತು ಸಾಹಿತ್ಯ ಪರಿಷತ್ತು ಎಂದೆಂದಿಗೂ ಮನುಷ್ಯ ಲೋಕದ ಮುಕ್ತಧ್ವನಿ ಹಾಗೂ ಪ್ರತಿನಿಧಿ. ಆದಿಕವಿ ಪಂಪನ ಮನುಷ್ಯ ಜಾತಿ ತಾನೊಂದೆ ವಲಂ ಎಂಬುದನ್ನು, ಕುವೆಂಪು ಅವರ ವಿಶ್ವಮಾನವ ಅನಿಕೇತನ ತತ್ವವನ್ನು, ದೇವನೂರರ ಜಾತಿಬಿಡಿ ಮತಬಿಡಿ ಮಾನವತೆಗೆ ಜೀವಕೊಡಿ ತತ್ವಗಳನನು ಸದಾಕಾಲ ಎಚ್ಚರವಾಗಿ ಕಾಯ್ದುಕೊಳ್ಳುವುದು ನಮ್ಮೆಲ್ಲರ ಹೊಣೆ. ಅಂದರೆ ಜಾತಿ, ಮತ, ಧರ್ಮ,ಲಿಂಗ ಬೇಧಗಳನ್ನು ದಾಟಿ ಸರ್ವರೂ ಒಂದಾಗುವುದು ಇಂದಿಗೂ ನಾಳೆಗೂ ಪ್ರಸ್ತುತವಾಗಿದೆ ಎಂದು ಸಮ್ಮೇಳನದ ಸರ್ವಾಧ್ಯಕ್ಷರಾದ ಮಹಾದೇವ ಶಂಕನಪುರ ಅವರು ತಿಳಿಸಿದರು.

ಇದೇ ವೇಳೆ ಕೃತಿಗಳ ಲೋಕಾರ್ಪಣೆ ಮಾಡಲಾಯಿತು. ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್ ಮಹಾದ್ವಾರ, ಪುಸ್ತಕ ಮಳಿಗೆ ಉದ್ಘಾಟನೆಯನ್ನು ಕಾವೇರಿ ಜಲಾನಯನ ಅಭಿವೃದ್ಧಿ ಯೋಜನೆಯ ಅಧ್ಯಕ್ಷ ಜಿ. ನಿಜಗುಣರಾಜು ನೆರವೇರಿಸಿದರು.

ನಗರಸಭೆ ಅಧ್ಯಕ್ಷೆ ರೇಖಾ ರಮೇಶ್, ಕೊಳ್ಳೇಗಾಲ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಸ್. ನಾಗರಾಜು ಕೊಂಗರಹಳ್ಳಿ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಸಮ್ಮೇಳನದ ಸರ್ವಾಧ್ಯಕ್ಷರ ಪತ್ನಿ ಶಶಿರೇಖ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ಸಮ್ಮೇಳನದ ಸರ್ವಾಧ್ಯಕ್ಷ ಮಹಾದೇವ ಶಂಕನಪುರ ಹಾಗೂ ಅವರ ಶ್ರೀಮತಿ ಶಶಿರೇಖಾ ಅವರನ್ನು ಕೊಳ್ಳೇಗಾಲ ಪಟ್ಟಣದ ನ್ಯಾಷನಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಿಂದ ಕಲಾ ತಂಡಗಳಭವ್ಯ ಮೆರವಣಿಗೆಯಲ್ಲಿ ಜನಪದ ಮಹಾ ಮಂಟಪಕ್ಕೆ ಕರೆತರಲಾಯಿತು. ಕೊಳ್ಳೇಗಾಲ ನಗರಸಭಾ ಅಧ್ಯಕ್ಷೆ ರೇಖಾ ರಮೇಶ್ ಮೆರವಣಿಗೆಗ ಚಾಲನೆ ನೀಡಿದರು.

ಗ್ರಾಪಂ ಉಪ ಚುನಾವಣೆ: ಜಿಲ್ಲಾಧಿಕಾರಿಯಿಂದ ಅಧಿಸೂಚನೆ

ಚಾಮರಾಜನಗರ, ಫೆ8– ಜಿಲ್ಲೆಯ ವಿವಿಧ ಗ್ರಾಪಂಗಳಲ್ಲಿ ವಿವಿಧ ಕಾರಣಗಳಿಂದ ತೆರವಾಗಿರುವ ಸದಸ್ಯ ಸ್ಥಾನಗಳಿಗೆ ಉಪ ಚುನಾವಣೆ ನಡೆಸುವ ಸಂಬಂಧ ಜಿಲ್ಲಾಧಿಕಾರಿಗಳು ಇಂದು ಅಧಿಸೂಚನೆ ಹೊರಡಿಸಿದ್ದಾರೆ.

ಚಾಮರಾಜನಗರ ತಾಲೂಕಿನ ಶಿವಪುರ ಗ್ರಾಪಂ ಉತ್ತುವಳ್ಳಿ ಕ್ಷೇತ್ರ (ಅನುಸೂಚಿತ ಜಾತಿ), ಜ್ಯೋತಿಗೌಡನಪುರ ಗ್ರಾಪಂ ಕ್ಷೇತ್ರ (ಸಾಮಾನ್ಯ), ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಗ್ರಾಪಂ ಕ್ಷೇತ್ರ (ಸಾಮಾನ್ಯ), ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಗ್ರಾಪಂ ಕ್ಷೇತ್ರ (ಹಿಂದುಳಿದ ವರ್ಗ ಅ ಮಹಿಳೆ) ಹಾಗೂ ಹನೂರು ತಾಲೂಕಿನ ಬಂಡಳ್ಳಿ ಗ್ರಾಪಂ ಕ್ಷೇತ್ರ (ಹಿಂದುಳಿದ ವರ್ಗ ಅ)ದ ತಲಾ ಒಂದು ಸ್ಥಾನ ಸೇರಿದಂತೆ ಒಟ್ಟು 5 ಸದಸ್ಯ ಸ್ಥಾನಗಳಿಗೆ ಚುನಾವಣೆ ನಿಗದಿಯಾಗಿದೆ. ನಾಮಪತ್ರ ಸಲ್ಲಿಸಲು ಫೆ.14 ಕೊನೆಯ ದಿನ. ಫೆ.15ರಂದು ನಾಮಪತ್ರಗಳ ಪರಿಶೀಲನೆ. ಉಮೇದುವಾರಿಕೆ ಹಿಂತೆಗೆದು ಕೊಳ್ಳಲು ಫೆ17 ಕೊನೆಯ ದಿನ. ಮತದಾನ ಅವಶ್ಯವಿದ್ದರೆ ಫೆ.25ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುವುದು. ಮರು ಮತದಾನ ಅವಶ್ಯವಿದ್ದರೆ ಫೆ.27ರಂದು ಬೆಳಿಗ್ಗೆ 7 ರಿಂದ ಸಂಜೆ 5 ಗಂಟೆಯವರೆಗೆ ನಡೆಸಲಾಗುವುದು. ಮತಗಳ ಎಣಿಕೆ ಕಾರ್ಯವು ಆಯಾ ತಾಲೂಕು ಕೇಂದ್ರಗಳಲ್ಲಿ ಫೆ.28ರಂದು ಬೆಳಿಗ್ಗೆ 8 ಗಂಟೆಗೆ ಆರಂಭವಾಗಲಿದೆ. ಫೆ.28ರಂದು ಚುನಾವಣಾ ಪ್ರಕ್ರಿಯೆ ಮುಕ್ತಾಯಗೊಳ್ಳಲಿದೆ ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ತಿಳಿಸಿದ್ದಾರೆ.

ಮೈಸೂರು ಮಿತ್ರ

ಗುರುವಾರ 9 ಫೆಬ್ರವರಿ 2023

ಮೈಸೂರು ಜಿಲ್ಲೆಯಲ್ಲಿ ಶೇ.90ಕ್ಕಿಂತ ಅಧಿಕ ಮತದಾನ ಆಗಬೇಕು

- ಜಿಲ್ಲಾಧಿಕಾರಿ ಡಾ.ರಾಜೇಂದ್ರ ಅಧಿಕಾರಿಗಳಿಗೆ ಸಲಹೆ
- ರಾಜ್ಯದಲ್ಲೇ ನಂ.1 ಸ್ಥಾನ ಪಡೆದುಕೊಳ್ಳಲು ಶ್ರಮಿಸಿ
- ಚುನಾವಣೆ ಸಂಬಂಧ ಅಧಿಕಾರಿಗಳೊಂದಿಗೆ ಸಭೆ

ಮೈಸೂರು, ಫೆ.8(ಎಂಟಿವೈ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಶೇ.90ಕ್ಕಿಂತ ಹೆಚ್ಚು ಮತದಾನವಾಗಬೇಕು. ಆ ಮೂಲಕ ರಾಜ್ಯದಲ್ಲಿಯೇ ನಂ.1 ಸ್ಥಾನ ಪಡೆದುಕೊಳ್ಳಲು ಶ್ರಮಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ನೀಡಿದ್ದಾರೆ.

ಮೈಸೂರು ಜಿ.ಪಂ ಸಭಾಂಗಣದಲ್ಲಿ ನಡೆದ ಚುನಾವಣಾ ಪೂರ್ವ ಸಿದ್ಧತೆಗಳು ಹಾಗೂ ಸ್ವೀಪ್ ಸಮಿತಿ ಚಟುವಟಿಕೆ ಕುರಿತಂತೆ ಸಭೆ ನಡೆಸಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಹಬ್ಬದಂತೆ ಚುನಾವಣೆ ನಡೆಸಬೇಕು. ಎಲ್ಲರೂ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಲು ಪಣ ತೊಡಬೇಕು. ನಗರ ಪ್ರದೇಶಕ್ಕಿಂತ ಗ್ರಾಮಾಂತರ ಭಾಗದಲ್ಲಿ ಶೇಕಡವಾರು ಮತದಾನ ಪ್ರಮಾಣ ಹೆಚ್ಚಾಗಿದೆ. ಚಾಮರಾಜ ಕ್ಷೇತ್ರದಲ್ಲಿ 58.18, ಕೃಷ್ಣರಾಜ ಕ್ಷೇತ್ರದಲ್ಲಿ ಶೇ.58.28, ನರಸಿಂಹರಾಜ ಕ್ಷೇತ್ರದಲ್ಲಿ ಶೇ.61ರಷ್ಟು ಮತದಾನವಾಗುವ ಮೂಲಕ ಒಟ್ಟು ಶೇ.72.12 ರಷ್ಟು ಮಾತ್ರ ಮತದಾನವಾಗಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಎಲ್ಲಾ ಕ್ಷೇತ್ರಗಳಿಂದ ಶೇ.90 ಕ್ಕಿಂತ ಅಧಿಕ ಮತದಾನವಾಗಬೇಕು. ಉಪವಿಭಾಗಾಧಿಕಾರಿಗಳು, ತಹಸೀಲ್ದಾರ್ ಹಾಗೂ ತಾಪಂ ಇಒಗಳು ಮತಗಟ್ಟೆ ಮಟ್ಟದ ಜಾಗೃತಿ ತಂಡ ರಚಿಸಬೇಕು. ಹಣ, ಉಡುಗೊರೆ, ಮದ್ಯ ಸೇರಿದಂತೆ ಆಮಿಷ ಒಡ್ಡುತ್ತಿದ್ದರೆ, ಅದರ ಬಗ್ಗೆ ಮಾಹಿತಿ ಪಡೆದು, ಅಕ್ರಮಗಳನ್ನು ತಡೆಯಬೇಕು ಎಂದು ಸೂಚಿಸಿದರು. ಜಿಲ್ಲಾ ಮಟ್ಟದಲ್ಲಿ ನಡೆಯುವ ಸ್ವೀಪ್ ಕಾರ್ಯಕ್ರಮ ಅಂಗವಿಕಲರು, ತೃತೀಯ ಲಿಂಗಿಗಳು ಹಾಗೂ ಆದಿವಾಸಿ ಸಮುದಾಯವನ್ನು ಒಳಗೊಳ್ಳುವಂತೆ ಮಾಡಬೇಕು. ಚುನಾವಣೆ ಹತ್ತಿರ ಬರುತ್ತಿದ್ದಂತೆ ಕೆಲವೆಡೆ ಚುನಾವಣೆ ಬಹಿಷ್ಕಾರ ಹಾಕುವ ಪ್ರಸಂಗ ನಡೆಯುತ್ತದೆ. ಈಗಲೇ ಅಂತಹ ಪ್ರದೇಶಗಳನ್ನು ಗುರುತಿಸಿ ಅವರೊಂದಿಗೆ ಸಮನ್ವಯತೆ ಸಾಧಿಸಬೇಕು ಎಂದರು.

ಪ್ರಮುಖರ ಹೆಸರು ಖಚಿತಪಡಿಸಿಕೊಳ್ಳಿ: ಜಿಲ್ಲೆಯಲ್ಲಿರುವ ಪ್ರಮುಖರು, ಜನಪ್ರತಿನಿಧಿಗಳು, ಮುಖಂಡರು, ಸಾಹಿತಿಗಳು, ಉದ್ಯಮಿಗಳ ಹೆಸರು ಮತದಾರರ ಪಟ್ಟಿಯಲ್ಲಿ ಇರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಪ್ರವಾಸಿ ತಾಣಗಳಲ್ಲಿ ಅರಿವು: ಮೈಸೂರಿನ ವಿಮಾನ ನಿಲ್ದಾಣ, ಬಸ್ ಹಾಗೂ ರೈಲು ನಿಲ್ದಾಣ, ಮೃಗಾಲಯ, ಚಾಮುಂಡಿಬೆಟ್ಟ, ನಂಜನಗೂಡು ಸೇರಿದಂತೆ ವಿವಿಧ ಪ್ರವಾಸಿ ತಾಣಗಳಲ್ಲಿ ಸ್ವೀಪ್ ಚಟುವಟಿಕೆಗಳು ನಡೆಸಿ, ಮತದಾನದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಜಿಲ್ಲೆಯಲ್ಲಿ ಸ್ವೀಪ್ ಚಟುವಟಿಕೆ ಮೂಲಕ ಮತದಾನ ಜಾಗೃತಿ ಕಾರ್ಯಕ್ರಮ ಆರಂಭಿಸಲಾಗಿದೆ. ಅದನ್ನು ಇನ್ನಷ್ಟು ಚುರುಕುಗೊಳಿಸಬೇಕಾಗಿದೆ.



ವಿವಿಧ ವರ್ಗಗಳ ಮತದಾರರನ್ನು ಜಾಗೃತಗೊಳಿಸುವುದರೊಂದಿಗೆ ಲಿಂಗತ್ವ ಅಲ್ಪಸಂಖ್ಯಾತರು, ದಮನಿತ ಮಹಿಳೆಯರು, ಹೆಚ್‌ಐವಿ ಪೀಡಿತರು, ವಿಕಲಚೇತನರು ಮುಂತಾದ ವರ್ಗಗಳನ್ನು ತಲುಪುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಮತದಾನದ ಕುರಿತು ಜನರಲ್ಲಿ ಜಾಗೃತಿಗಾಗಿ ಸಿದ್ಧಪಡಿಸಿರುವ ಧ್ಯೇಯಗೀತೆ 'ನಮ್ಮ ಭಾರತ' ಗೀತೆಯನ್ನು ಎಲ್ಲೆಡೆ ಭಿತ್ತರಿಸಬೇಕು. ಪಾಲಿಕೆಯ ಕಸ ವಿಲೇವಾರಿ ವಾಹನಗಳಲ್ಲಿರುವ ಧ್ವನಿವರ್ಧಕದಲ್ಲಿ 30 ಸೆಕೆಂಡ್‌ಗಳಲ್ಲಿ ಗೀತೆಯನ್ನು ಪ್ರಸಾರ ಮಾಡಲು ಕ್ರಮ ಕೈಗೊಳ್ಳಬೇಕು ಎಂದರು.

ಈ ಹಿಂದೆ ನಡೆದ ಚುನಾವಣೆಗಳಲ್ಲಿ ಅತೀ ಹೆಚ್ಚು ಮತದಾನವಾಗಿರುವ ಹಾಗೂ ಅತೀ ಕಡಿಮೆ ಮತದಾನವಾಗಿರುವ ಮತಗಟ್ಟೆ ಹಾಗೂ ಬಡಾವಣೆಗಳನ್ನು ಗುರುತಿಸಿ, ಮತದಾನದ ಕ್ಷೀಣತೆಗೆ ಕಾರಣಗಳನ್ನು ಕಂಡು ಹಿಡಿಯಬೇಕು. ಈ ಬಾರಿ ಮತದಾನ ಹೆಚ್ಚಿಸಲು ಆ ಭಾಗದಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು. ವಿವಿಧ ಮಾಧ್ಯಮಗಳಲ್ಲಿ ಪ್ರಚಾರಕ್ಕೆ ಹೆಚ್ಚು ಒತ್ತು ಕೊಡಬೇಕು, ಬೀದಿ ನಾಟಕ, ಚರ್ಚಾಸ್ಪರ್ಧೆ, ಕರಪತ್ರ, ಭಿತ್ತಿಪತ್ರ, ಬ್ಯಾನರ್, ಅಣಕು ಪ್ರದರ್ಶನ ಸೇರಿದಂತೆ ಇನ್ನಿತರ ಚಟುವಟಿಕೆ ಮೂಲಕ ಎಲ್ಲಾ ವರ್ಗದ ಮತದಾರರನ್ನು ತಲುಪಬೇಕು. ಜಿಲ್ಲೆಯಲ್ಲಿ 2905 ಮತಗಟ್ಟೆಗಳಿದ್ದು, ಈ ಮತಗಟ್ಟೆಗಳಲ್ಲಿ ಮೂಲಸೌಕರ್ಯ ಇಲ್ಲವೆಂದರೆ ಕೂಡಲೇ ಒದಗಿಸಬೇಕು. ಸಖಿ, ಪಿಡಬ್ಲ್ಯೂಡಿ, ಎಥ್ನಿಕ್‌ನಂತಹ ವಿವಿಧ ಆಶಯಗಳನ್ನಿಟ್ಟುಕೊಂಡು ಮತಗಟ್ಟೆ ನಿರ್ಮಿಸುವ ಮೂಲಕ ವಿನೂತನವಾಗಿ ಜನರನ್ನು ಆಕರ್ಷಿಸಲು ಈಗಿನಿಂದಲೇ ಯೋಜಿಸಬೇಕು ಎಂದು ಸೂಚಿಸಿದರು. ಜಿಲ್ಲೆಯಲ್ಲಿ 50 ಸಾವಿರ ಯುವ ಮತದಾರರಿದ್ದು, ಅವರಲ್ಲಿ 38 ಸಾವಿರ ಯುವ ಮತದಾರರು ಮಾತ್ರ ನೋಂದಾಯಿಸಿಕೊಂಡಿದ್ದಾರೆ. ಚುನಾವಣೆ ವೇಳೆಗೆ 20 ಸಾವಿರ ಯುವ ಮತದಾರರು ನೋಂದಾಯಿಸಿಕೊಳ್ಳುವಂತೆ ಪ್ರೇರೇಪಿಸಬೇಕು. ಪ್ರತಿ ಸರ್ಕಾರಿ ಇಲಾಖೆಗಳಲ್ಲಿಯೂ ಕನಿಷ್ಠ ವಾರಕ್ಕೊಂದು ಕಾರ್ಯಕ್ರಮ ಮಾಡಬೇಕು. ವಾರದ ಸಂತೆ, ಜಾತ್ರೆಗಳಲ್ಲಿ ಪ್ರಚಾರ ಮಾಡುವ ಮೂಲಕ ಮತ ಪ್ರಮಾಣ ಹೆಚ್ಚಿಸಬೇಕು ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ. ಗಾಯತ್ರಿ ಮಾತನಾಡಿ, ಸರ್ಕಾರಿ ಕಚೇರಿಗಳ ಬಳಿ ಹೋರ್ಡಿಂಗ್‌ಗಳನ್ನು ಹಾಕಬೇಕು. ಸಾಮಾಜಿಕ ಜಾಲತಾಣವನ್ನು ಬಳಸಿಕೊಳ್ಳಬೇಕು. ಆಯೋಗದ ಅಧಿಕಾರಿಗಳನ್ನು ಟ್ಯಾಗ್ ಮಾಡಬೇಕು. ಅಣಕು ಮತದಾನ ಪ್ರದರ್ಶನ ನಡೆಸಬೇಕು. ಎಲ್ಲವೂ ಡಾಕ್ಯುಮೆಂಟೇಶನ್ ಆಗಬೇಕು. ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಭೆ ನಡೆಸಬೇಕು. ಅಪಾರ್ಟ್‌ಮೆಂಟ್‌ಗಳಲ್ಲಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳನ್ನು ಬಳಸಿಕೊಳ್ಳಬೇಕು. ಮತದಾನ ನಿಮ್ಮ ಹಕ್ಕು ಎನ್ನುವುದನ್ನು ತಿಳಿಸಬೇಕು ಎಂದು ಸೂಚಿಸಿದರು. ತಾಪಂ ಇಒಗಳು ಮತ್ತು ಸಂಬಂಧಿಸಿದ ಅಧಿಕಾರಿಗಳು ಬೂತ್ ಲೆವಲ್ ಅಧಿಕಾರಿಗಳು ಮನೆ ಮನೆಗೆ ತೆರಳಿ ಮತದಾರರ ಪಟ್ಟಿಯನ್ನು ಸರಿಯಾಗಿ ಪರಿಶೀಲಿಸುತ್ತಿದ್ದಾರೆಯೇ ಎಂಬುದರ ಬಗ್ಗೆ ಗಮನಿಸಬೇಕು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್, ಜಿಪಂ ಉಪ ಕಾರ್ಯದರ್ಶಿ ಡಾ.ಬಿ.ಕೃಷ್ಣರಾಜು, ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್.ಮಂಜುನಾಥ್, ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಡಾ.ಮಂಜುನಾಥ್ ಕನಮಡಿ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಮಚಂದ್ರ ರಾಜೇ ಅರಸ್, ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್, ಡಿಡಿಪಿಯು ನಾಗಮಲ್ಲೇಶ್, ಡಯಟ್ ಪ್ರಾಂಶುಪಾಲ ಸಿ.ಆರ್.ನಾಗರಾಜಯ್ಯ, ವಿಕಲಚೇತನರ ಕಲ್ಯಾಣಾಧಿಕಾರಿ ಆರ್. ಮಾಲಿನಿ ಇನ್ನಿತರರು ಹಾಜರಿದ್ದರು.



ವಾಯುಮಾಲಿನ್ಯ ನಿಯಂತ್ರಣ ಜನಜಾಗೃತಿ ಅಂಗವಾಗಿ ಸಾರಿಗೆ ಇಲಾಖೆ ವತಿಯಿಂದ ಸಂಚಾರಿ ಜಾಗೃತಿ ವಾಹನಕ್ಕೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ (ಪಶ್ಚಿಮ) ಶ್ರೀಮತಿ ದೇವಿಕಾ ಚಾಲನೆ ನೀಡಿದರು. ಈ ವೇಳೆ ಅಧೀಕ್ಷಕರಾದ ಕುಮಾರ್, ಡಿ.ಎನ್.ಮಂಜುನಾಥ್, ಅಶ್ವಿನಿ, ಲಾರಿ ಮಾಲೀಕರ ಸಂಘದ ಅಧ್ಯಕ್ಷ ಹಾಜರಿದ್ದಾರೆ.



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ಕೆಪಿಸಿಸಿ ಒಬಿಸಿ ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ, ಕನಕ ಸಹಕಾರ ಸಂಘದ ನಿರ್ದೇಶಕ ಬೀರೇಶ್, ಯೋಗೀಶ್ ಉಪ್ಪಾರ್, ಫೋಟೋ ರಾಜು, ರಾಮು, ಬೀರಲಿಂಗ ಇತರರು ಅಭಿನಂದಿಸಿ, ಶುಭ ಕೋರಿದರು.

ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರ ದುರ್ಮರಣ

ಮೈಸೂರು, ಫೆ.8(ಆರ್‌ಕೆ)–ಮೈಸೂರಿನಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ.

ಮೈಸೂರಿನ ಹೂಟಗಳ್ಳಿ ನಿವಾಸಿ ರಾಜಶೆಟ್ಟಿ ಅವರ ಪತ್ನಿ ಮಂಜುಳಾ(41) ಹಾಗೂ ಕೆಂಪನಂಜಾಂಬ ಅಗ್ರಹಾರದ ಎಂ. ರೇವೋಜಿ ರಾವ್(57) ಸಾವನ್ನಪ್ಪಿದವರು. ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮಂಜುಳಾ ಅವರು ಮಂಗಳವಾರ ಕೆಲಸ ಮುಗಿಸಿ ಸ್ಕೂಟರ್‌ನಲ್ಲಿ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಲಾರಿ ಹೆಬ್ಬಾಳು ರಿಂಗ್ ರಸ್ತೆಯ ಬಸವ ಮಾರ್ಗ ಕಟ್ಟಡ ಬಳಿ ಸಂಜೆ 6.15 ಗಂಟೆ ವೇಳೆ ಡಿಕ್ಕಿ ಹೊಡೆಯಿತಲ್ಲದೆ, ಆಯತಪ್ಪಿ ಬಲಕ್ಕೆ ಬಿದ್ದ ಮಂಜುಳಾ ಅವರ ಮೇಲೆ ಲಾರಿಯ ಹಿಂದಿನ ಚಕ್ರ ಹರಿದು ಆಕೆ ಸ್ಥಳದಲ್ಲೇ ಸಾವನ್ನಪ್ಪಿದರು.

ಮತ್ತೊಂದು ಪ್ರಕರಣದಲ್ಲಿ ಶಾರದಾ ವಿಲಾಸ ಕಾಲೇಜು ಕಡೆಯಿಂದ ಅಗ್ರಹಾರ ಕಡೆಗೆ ಸ್ಕೂಟರ್‌ನಲ್ಲಿ ಹೋಗುತ್ತಿದ್ದ ರೇವೋಜಿ ರಾವ್ ಅವರಿಗೆ ಎದುರಿನಿಂದ ಬಂದ ಆಟೋ ಫೆಬ್ರವರಿ 4ರಂದು ರಾತ್ರಿ 9.30 ಗಂಟೆ ವೇಳೆ ನ್ಯೂ ಕಾಂತರಾಜ ಅರಸ್ ರಸ್ತೆ–ಜೆಎಲ್‌ಬಿ ರಸ್ತೆ ಜಂಕ್ಷನ್ ಬಳಿ ಡಿಕ್ಕಿ ಹೊಡೆಯಿತು. ತೀವ್ರವಾಗಿ ಗಾಯಗೊಂಡಿದ್ದ ರೇವೋಜಿ ರಾವ್‌ರನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಇಂದು ಬೆಳಗ್ಗೆ 8.15 ಗಂಟೆ ವೇಳೆ ಅವರು ಕೊನೆಯುಸಿರೆಳೆದರು.ಪ್ರಕರಣ ದಾಖಲಿಸಿಕೊಂಡಿರುವ ಕೆ.ಆರ್. ಮತ್ತು ವಿವಿಪುರಂ ಸಂಚಾರ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಅನುದಾನ ಹಂಚಿಕೆಯಲ್ಲಿ ಭಾರೀ ತಾರತಮ್ಯ

ಪ್ರಧಾನಿ ಮೋದಿ ಸರ್ಕಾರದ ನೀತಿಗೆ ಮಾಜಿ ಸಿಎಂ ಕುಮಾರಸ್ವಾಮಿ ಖಂಡನೆ



ಬೆಂಗಳೂರು, ಫೆ.8(ಕೆಎಂಶಿ)–ಅನುದಾನದಲ್ಲಿ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವುದು ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರದ ನೀತಿ. ಮನಃಸಾಕ್ಷಿ ಇಲ್ಲದ ಮೋದಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಉತ್ತರಕ್ಕೆ ಬೆಣ್ಣೆ, ದಕ್ಷಿಣಕ್ಕೆ ಸುಣ್ಣ ಅವರ ರಾಜನೀತಿ. ತೆರಿಗೆ ತೆರಲಿಕ್ಕೆ ದಕ್ಷಿಣ ಭಾರತ, ಅನುದಾನ ಹಂಚಲಿಕ್ಕೆ ಉತ್ತರ ಭಾರತ. ಇದು ಬಿಜೆಪಿ ಪಕ್ಷದ ಅಖಂಡ ಭಾರತದ ಅಭಿವೃದ್ಧಿ ವೈಖರಿ ಎಂದು ವಾಗ್ದಾಳಿ ನಡೆಸಿದ್ದಾರೆ.

ನೆರೆ ಬಂದಾಗ ಕಣ್ಣೆತ್ತಿಯೂ ನೋಡಲಿಲ್ಲ, ಬರ ಬಂದಾಗ ಬರಲಿಲ್ಲ. ಆದರೆ, ಚುನಾವಣೆ ವರ್ಷದಲ್ಲಿ ತಿಂಗಳಿಗೆ ನಾಲ್ಕು ಬಾರಿ ರಾಜ್ಯಕ್ಕೆ ಬರುತ್ತಾರೆ. ನರೇಂದ್ರ ಮೋದಿ ಅವರ ಸರ್ಕಾರವು ಸ್ವಾಭಿಮಾನಿಗಳ ನಾಡು ಕರ್ನಾಟಕವನ್ನು ಎಷ್ಟು ಕೀಳಾಗಿ ನಡೆಸಿಕೊಳ್ಳುತ್ತಿದೆ ಎನ್ನುವುದಕ್ಕೆ ಅನುದಾನ ಹಂಚಿಕೆಯ ಮಹಾಮೋಸವೇ ಸಾಕ್ಷಿ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಳೆದ 5 ವರ್ಷದಲ್ಲಿ ಉತ್ತರ ಮತ್ತು ದಕ್ಷಿಣ ರಾಜ್ಯಗಳಿಗೆ ಕೊಟ್ಟ ಅನುದಾನದ ಅಂಕಿ–ಸಂಖ್ಯೆಯನ್ನು ಲೋಕಸಭೆಯಲ್ಲಿ ಮಂಡಿಸಿದ ಸಚಿವರಿಗೆ ಕೊಂಚವೂ ಲಜ್ಜೆ ಎನಿಸಲಿಲ್ಲವೇ? ದಕ್ಷಿಣದವರನ್ನು ನರೇಂದ್ರ ಮೋದಿ ಅವರ ಸರ್ಕಾರ ಮಲತಾಯಿ ಮಕ್ಕಳಂತೆ ನಡೆಸಿಕೊಳ್ಳುತ್ತಿದೆ. ಕನ್ನಡಿಗರಂತೂ ಬಿಜೆಪಿಗರಿಗೆ ತಬ್ಬಲಿ ಮಕ್ಕಳೇ ಆಗಿದ್ದಾರೆ ಎಂದು ಆರೋಪಿಸಿದ್ದಾರೆ.

ಕೇಂದ್ರಕ್ಕೆ ಕರ್ನಾಟಕ ಗರಿಷ್ಠ ತೆರಿಗೆ ತೆರುತ್ತಿದೆ. ಬಿಜೆಪಿ ಪಾಲಿಗೆ ಕರ್ನಾಟಕ ಪೊಗರ್ದಸ್ತಾದ ಎಟಿಎಂ ಆಗಿಬಿಟ್ಟಿದೆ. ಅದೇ ಅನುದಾನವನ್ನು ಹಂಚುವ ಹೊತ್ತಿನಲ್ಲಿ ಮೋದಿ ಅವರ ಕೈಗಳು ಉತ್ತರದ ರಾಜ್ಯಗಳ ಕಡೆಗೇ ವಾಲುತ್ತಿವೆ. ಚುನಾವಣೆ ಬಂದಾಗ ಅವರ ವಿಮಾನ ಸದಾ ಬೆಂಗಳೂರಿನತ್ತಲೇ ಹಾರುತ್ತದೆ ಎಂದು ಟೀಕಾಪ್ರಹಾರ ನಡೆಸಿದ್ದಾರೆ. ಅನುದಾನ ಹಂಚಿಕೆ, ತೆರಿಗೆ ಪಾಲು, ಬಾಹ್ಯ ನೆರವಿನ ಯೋಜನೆಗಳಿಗೆ ಸಹಾಯ ಧನ, ಬಂಡವಾಳ ವೆಚ್ಚಕ್ಕಾಗಿ ಕೊಟ್ಟ ನೆರವು ಸೇರಿ ಎಲ್ಲ ವಿಶೇಷ ಅನುದಾನ ಹಂಚಿಕೆಯಲ್ಲಿ ರಾಜ್ಯಕ್ಕೆ ಸೊನ್ನೆ ಸುತ್ತಿರುವುದು ಹೇಯ. ಬಿಜೆಪಿಗೆ 25 ಸಂಸದರನ್ನು ಕೊಟ್ಟ ಕರ್ನಾಟಕಕ್ಕೆ ಇಂಥ ದುರ್ಗತಿಯೇ. ಇದು ಡಬಲ್ ಎಂಜಿನ್ ಸರ್ಕಾರದ ದ್ರೋಹ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೂರು ತಿಂಗಳಲ್ಲಿ ರಾಜ್ಯದ ಚುನಾವಣೆ. ಭಾಷಣದಲ್ಲಿ ಬರೀ ಚಿತಾವಣೆ. ತಿಂಗಳಿಗೆ ಹತ್ತು ಸಲ ರಾಜ್ಯಕ್ಕೆ ಬನ್ನಿ. ಆದರೆ, ಕನ್ನಡಿಗರಿಗೆ ಮಾಡಿರುವ ಅನುದಾನದ ಅನ್ಯಾಯಕ್ಕೆ ಕಾರಣ ಹೇಳಿ. ಮಾತಿನಲ್ಲೇ ಜುಟ್ಟಿಗೆ ಮಲ್ಲಿಗೆ ಮುಡಿಸಿದರೆ ಹೇಗೆ ಮೋದಿ ಅವರೇ. ಈ ಅನುದಾನ ಅನ್ಯಾಯ ನನಗೆ ತೀವ್ರ ಆಘಾತ ಉಂಟು ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡ ಕಡೆಗಣನೆ: ಕರ್ನಾಟಕದ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆ ಅಯೋಮಯ

ಬೆಂಗಳೂರು, ಫೆ.8(ಕೆಎಂಶಿ)– ಬ್ಯಾಂಕಿಂಗ್ ಕ್ಷೇತ್ರದ ಪರೀಕ್ಷೆಗಳು ಕನ್ನಡದಲ್ಲಿ ನಡೆಯದ ಕಾರಣ ಹಾಗೂ ಅನ್ಯ ರಾಜ್ಯಗಳಿಂದ ಆಯ್ಕೆಯಾಗುವ ಸಿಬ್ಬಂದಿಗಳು ಕನ್ನಡ ಕಲಿಯದೇ ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಸಂವಹನ ನಡೆಸುವುದರಿಂದಾಗಿ ಕರ್ನಾಟಕದ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆ ಅಯೋಮಯವಾಗಿದೆ ಎಂದು ಜೆಡಿಎಸ್ ಟೀಕಿಸಿದೆ. ಈ ಸಂಬಂಧ ಸರಣಿ ಟ್ವೀಟ್ ಮಾಡಿದ್ದು, ಗ್ರಾಮಗಳ ಜನರು ಬ್ಯಾಂಕಿಂಗ್ ಸೇವೆಗಳಿಂದ ವಂಚಿತರಾಗುತ್ತಿದ್ದಾರೆ. ಸೇವಾ ಕ್ಷೇತ್ರದ ಅನುಕೂಲಗಳನ್ನು ಪಡೆಯಲು ಭಾಷೆಯ ಕಾರಣದಿಂದ ಜನರು ವಂಚಿತರಾಗುವ ಪರಿಸ್ಥಿತಿ ಮನಸ್ಸಿಗೆ ನೋವು ತರುತ್ತದೆ. ಸರ್ಕಾರದ ನೀತಿ–ನಿಯಮಾವಳಿಗಳು ಜನರ ಆಶೋತ್ತರಗಳಿಗೆ ದನಿಯಾಗಬೇಕು. ಅದು ಬಿಟ್ಟು ಸೇವಾ ಕ್ಷೇತ್ರಗಳಿಂದ ಗ್ರಾಮಗಳ ಜನರು ದೂರಾಗುವಂತೆ ಮಾಡಬಾರದು ಎಂದಿದೆ.

ಪ್ರಾದೇಶಿಕ ಭಾಷೆ, ಅಧಿಕಾರ, ಬೇಡಿಕೆಗಳನ್ನು ಕತ್ತು ಹಿಸುಕಿ ಸಂತಸಪಡುವ ವಿಕೃತ ನಡೆಯು ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರಕ್ಕಂತೂ ಅಭ್ಯಾಸವಾಗಿ ಹೋಗಿದೆ. ಕನ್ನಡಿಗರದ್ದೇ ಆದ ವಿಜಯಾ ಬ್ಯಾಂಕ್ ಮುಳುಗಿಸಿದ್ದಾಯ್ತು. ಬ್ಯಾಂಕಿಂಗ್ ಪರೀಕ್ಷೆಗಳ ನಿಯಮಗಳಲ್ಲಿ ಬದಲಾವಣೆ ಮಾಡಿದ ಕಾರಣ, ಅಲ್ಲಿನ ಹುದ್ದೆಗಳು ಅನ್ಯ ರಾಜ್ಯದವರ ಪಾಲಾಗುತ್ತಿವೆ.

ಬ್ಯಾಂಕ್‌ಗಳು ಸ್ಥಳೀಯ ಭಾಷೆಗಳಲ್ಲೇ ಸಂವಹನ ಮಾಡಬೇಕೆಂದು ಆದೇಶಿಸಿದರೆ ನಡೆಯುವುದಿಲ್ಲ. ಅದು ಕಾರ್ಯಗತ ಆಗಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಕ ರಾಜ್ಯ ಬಿಜೆಪಿ ಸರ್ಕಾರ ಹಲವು ಕ್ರಮಗಳನ್ನು ಕೈಗೊಳ್ಳಲೇಬೇಕಿದೆ.

ಇಲ್ಲದಿದ್ದರೆ ನಮ್ಮ ಗ್ರಾಮೀಣ ಭಾಗದ ಜನತೆ ಬ್ಯಾಂಕಿಂಗ್‌ನ ಎಲ್ಲ ಸೇವೆಗಳನ್ನು ಪಡೆಯಲು ಹರಸಾಹಸ ಪಡಬೇಕಾಗುತ್ತದೆ ಎಂದು ಹೇಳಿದೆ. ಕೇಂದ್ರ ಬಿಜೆಪಿ ಸರ್ಕಾರಕ್ಕೆ ಕನ್ನಡದಲ್ಲಿ ಪರೀಕ್ಷೆಗಳನ್ನು ನಡೆಸಲು ಹಲವು ಬಾರಿ ವಿನಂತಿ ಮಾಡಿಕೊಳ್ಳಲಾಗಿದೆ. ಅವರು ನಮ್ಮ ಬೇಡಿಕೆಗಳಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡುವುದಿಲ್ಲ. ನಮ್ಮ ರಾಜ್ಯದ ತೆರಿಗೆ, ಅಧಿಕಾರ ಮಾತ್ರ ಅವರಿಗೆ ಬೇಕಿರುವುದು. ಇಂತಹ ಹೀನ ಮನಸ್ಥಿತಿಯವರನ್ನು ಜನತೆ ಅಧಿಕಾರದಿಂದ ಕಿತ್ತೊಗೆಯಲೇಬೇಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ನೀರಿನ ಟ್ಯಾಂಕ್ ನಿರ್ಮಾಣ ಪರ–ವಿರುದ್ಧ ಪ್ರತಿಭಟನೆ

ತಿಲಕ್‌ನಗರ ಅಂಧರ ಶಾಲೆ ಆವರಣದಲ್ಲಿ ಬಿಗುವಿನ ವಾತಾವರಣ



ತಿಲಕ್‌ನಗರದ ಅಂಧರ ಶಾಲೆ ಆವರಣದಲ್ಲಿ ನೀರಿನ ಟ್ಯಾಂಕ್ ನಿರ್ಮಿಸದಂತೆ ಅಂಧ ವಿದ್ಯಾರ್ಥಿಗಳ ಪ್ರತಿಭಟನೆಗೆ ಸಾರ್ವಜನಿಕರು ಬೆಂಬಲ ವ್ಯಕ್ತಪಡಿಸಿದರು.



ನೀರಿನ ಟ್ಯಾಂಕ್ ಕಾಮಗಾರಿ ಮುಂದುವರೆಸುವಂತೆ ತಿಲಕ್‌ನಗರದ ನಿವಾಸಿಗಳು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ಶಾಸಕ ಎಲ್.ನಾಗೇಂದ್ರ ಪಾಲ್ಗೊಂಡು, ಭರವಸೆ ನೀಡಿದರು.

ಮೈಸೂರು, ಫೆ.8(ಎಂಟಿವೈ)– ಮೈಸೂರಿನ ತಿಲಕ್‌ನಗರದಲ್ಲಿರುವ ಅಂಧ ಹಾಗೂ ಶ್ರವಣದೋಷವುಳ್ಳವರ ಶಾಲಾ ಆವರಣದಲ್ಲಿ ನಿರ್ಮಿಸಲುದ್ದೇಶಿಸಿರುವ ಬೃಹತ್ ನೀರಿನ ಟ್ಯಾಂಕ್ ಕಾಮಗಾರಿ ಪರ ಹಾಗೂ ವಿರುದ್ಧ ಪ್ರತ್ಯೇಕ ಪ್ರತಿಭಟನೆ ನಡೆದ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಅಂಧ ಹಾಗೂ ಶ್ರವಣದೋಷವುಳ್ಳವರ ಶೈಕ್ಷಣಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವ ಸ್ಥಳವನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳಬಾರದು ಎಂದು ಕರ್ನಾಟಕ ಅಂಧರ ಸಂಘದ ನೇತೃತ್ವದಲ್ಲಿ ಕಳೆದ ನಾಲ್ಕು ದಿನಗಳಿಂದ ನಡೆಯುತ್ತಿರುವ ಪ್ರತಿಭಟನೆಗೆ ಇಂದು ಕೆಲವು ನಾಗರಿಕರು ಬೆಂಬಲ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಯಾಗಿ ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ಕೆಲವರು ನೀರಿನ ಟ್ಯಾಂಕ್ ಕಾಮಗಾರಿ ಮುಂದುವರೆಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ಇದರಿಂದ ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ಉಂಟಾಗಿತ್ತು. ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ಮುಂದುವರೆದ ಪ್ರತಿಭಟನೆ: ಕರ್ನಾಟಕ ಅಂಧರ ಸಂಘದ ನೇತೃತ್ವದಲ್ಲಿ ಬುಧವಾರವೂ ಅಂಧ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಕಳೆದ ನಾಲ್ಕು ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆಗೆ ಇಂದು ವಿವಿಧ ಸಂಘಟನೆಗಳ ಮುಖಂಡರು ಹಾಗೂ ಕಾಳಜಿಯುಳ್ಳ ಕೆಲವು ನಾಗರಿಕರು ಪ್ರತಿಭಟನೆಗೆ ಬೆಂಬಲ ನೀಡಿದರು. ವಿಶೇಷಚೇತನರ ಅಭ್ಯುದಯಕ್ಕೆ ಮೀಸಲಿಟ್ಟಿರುವ ಸ್ಥಳವನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆದರೂ, ಗಿಡ–ಮರ ಕತ್ತರಿಸಿ, ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಮುಂದಾಗಿರುವುದು ಖಂಡನೀಯ. ಅಂಧ ಮತ್ತು ಶ್ರವಣದೋಷವುಳ್ಳ ವಿದ್ಯಾರ್ಥಿಗಳ ಏಳಿಗೆಗಾಗಿ ಸಹಕಾರ ನೀಡಬೇಕಾಗಿತ್ತು. ಆದರೆ, ನೀರಿನ ಟ್ಯಾಂಕ್‌ಗಾಗಿ ಬಲವಂತವಾಗಿ ಕಸಿದುಕೊಳ್ಳುವ ಸಂಚು ನಡೆಸುತ್ತಿರುವುದು ಖಂಡನೀಯ. ಸದರಿ ಸ್ಥಳವನ್ನು ಅಂಧ ಮತ್ತು ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಮೀಸಲಿಟ್ಟಿರುವುದು ದಾಖಲೆಗಳಲ್ಲಿ ಉಲ್ಲೇಖವಾಗಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಆಗ್ರಹ: ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣಕ್ಕೆ ಆಗ್ರಹಿಸಿ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿದರು. ಇಲ್ಲಿಯೇ ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಶಾಸಕ ಎಲ್.ನಾಗೇಂದ್ರ ಆಗಮಿಸಿ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರಲ್ಲದೆ, ಸ್ಥಳೀಯರ ಒತ್ತಾಯದ ಮೇರೆಗೆ ನೀರಿನ ಟ್ಯಾಂಕ್ ನಿರ್ಮಾಣ ಕಾಮಗಾರಿ ನಡೆಸಲು ಉದ್ದೇಶಿಸಲಾಗಿದೆ. ತಿಲಕ್‌ನಗರ ಸೇರಿದಂತೆ ವಿವಿಧ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಹಿರಿಯ ವಿದ್ಯಾರ್ಥಿಗಳ ವಿರುದ್ಧ ಆಕ್ರೋಶ: ಪ್ರತಿಭಟನಾನಿರತ ಸ್ಥಳೀಯರು ಅಂಧ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯದಲ್ಲಿರುವ ಹಿರಿಯ ವಿದ್ಯಾರ್ಥಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ತಿಲಕನಗರದ 25ನೇ ವಾರ್ಡ್‌ಗೆ ನೀರು ಪೂರೈಕೆ ಸಂಬಂಧ ನಗರ ಪಾಲಿಕೆಗೆ ಮನವಿ ಸಲ್ಲಿಸಲಾಗಿತ್ತು. ಈ ವೇಳೆ ಸರ್ಕಾರದಿಂದ ಅನುಮತಿ ಪಡೆದು, ಇಲ್ಲಿನ ಅಂಧ ಮತ್ತು ಮೂಗರ ಶಾಲೆಯ ಆವರಣದಲ್ಲಿ ಟ್ಯಾಂಕ್ ನಿರ್ಮಿಸಲಾಗುತ್ತಿದೆ. ಆದರೆ, ಈ ಶಾಲೆಯ ಕೆಲವು ಹಳೆಯ ವಿದ್ಯಾರ್ಥಿಗಳು ಇದಕ್ಕೆ ಅಡ್ಡಿಪಡಿಸುತ್ತಿದ್ದಾರೆ ಎಂದು ಸ್ಥಳೀಯ ನಿವಾಸಿಗಳು ಆರೋಪಿಸಿದರು.

ತಿಲಕ್‌ನಗರದಲ್ಲಿ 22 ಬೋರ್‌ವೆಲ್‌ಗಳಿವೆ. ಅವು ಸರಿಯಾಗಿಲ್ಲ. ತಿಲಕ್‌ನಗರದ ನಿವಾಸಿಗಳಿಗೆ ಸರಿಯಾಗಿ ಕಾವೇರಿ ನೀರು ದೊರಕುತ್ತಿಲ್ಲ. ಯಾರ ಮನೆಗೂ ಕಾವೇರಿ ನೀರು ಬರುವುದಿಲ್ಲ. ಎಲ್ಲರೂ ಮನೆ ಮುಂದೆ ಮೂರು ಅಡಿ ಆಳದ ತೊಟ್ಟಿ ನಿರ್ಮಿಸಿಕೊಂಡು, ಹರಸಾಹಸಪಟ್ಟು ನೀರು ಹಿಡಿಯಬೇಕಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಶಾಲೆಯ ಒಂದು ಮೂಲೆಯಲ್ಲಿ ಟ್ಯಾಂಕ್ ನಿರ್ಮಿಸಿಕೊಳ್ಳಲು ಅಲ್ಲಿನ ಹಿರಿಯ ಅಂಧ ವಿದ್ಯಾರ್ಥಿಗಳು ಅವಕಾಶ ನೀಡದೆ ತೊಂದರೆ ಆಗಿದೆ. ಸರ್ಕಾರದಿಂದ ಅನುಮತಿ ದೊರೆತು, ಅನುದಾನ ಬಿಡುಗಡೆ ಆಗಿದ್ದರೂ ಕಾಮಗಾರಿ ಮಾತ್ರ ಆರಂಭಿಸಲಾಗಿಲ್ಲ. ಅಂಧ ಮತ್ತು ಕಿವುಡ ವಿದ್ಯಾರ್ಥಿ ನಿಲಯದಲ್ಲಿ ಉಳಿದುಕೊಂಡಿರುವ ಹಳೇ ವಿದ್ಯಾರ್ಥಿಗಳಿಂದ ಈ ಸಮಸ್ಯೆ ಉಂಟಾಗಿದೆ ಎಂದು ನಿವಾಸಿಗಳು ದೂರಿದರು. ಪ್ರತಿಭಟನೆಯಲ್ಲಿ ಹರೀಶ್, ರವಿ, ಸತ್ಯನಾರಾಯಣ, ರಘುರಾಮ್, ಕುಮಾರ್‌ಗೌಡ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಲೋಕಾಯುಕ್ತ ನ್ಯಾಯಮೂರ್ತಿಗಳ ಸಭೆ

ಮೈಸೂರು, ಫೆ.8– ಕರ್ನಾಟಕ ರಾಜ್ಯ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಬಿ.ಎಸ್.ಪಾಟೀಲ್ ರವರು ಫೆ.11 ರಿಂದ 14 ರವರೆಗೆ ಮೈಸೂರಿಗೆ ಭೇಟಿ ನೀಡಲಿದ್ದು, ಅವರ ಅಧ್ಯಕ್ಷತೆಯಲ್ಲಿ ಫೆ13 ರಂದು ಬೆಳಗ್ಗೆ 11.30 ಗಂಟೆಗೆ ಮೈಸೂರಿನ ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ಸಭೆಯನ್ನು ಆಯೋಜಿಸಲಾಗಿದೆ. ಸದರಿ ಸಭೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಹೆಚ್.ಡಿ.ಕೋಟೆ ತಾಲೂಕಿನ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಾಗುವಂತೆ ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ನಾಳೆಯಿಂದ ಆರಂಭ

ವಿಧೇಯಕ ಸೇರಿದಂತೆ ಹಲವು ವಿಧೇಯಕಕ್ಕೆ ಅನುಮೋದನೆ ದೊರಕುವ ಸಾಧ್ಯತೆಗಳಿವೆ. ಶುಕ್ರವಾರ ಬೆಳಗ್ಗೆ 11 ಗಂಟೆಗೆ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಮುಂದಿನ ಸೋಮವಾರದಿಂದ ಅಧಿಕೃತ ಕಾರ್ಯಕಲಾಪಗಳು ನಡೆಯಲಿದ್ದು, ಜತೆಗೆ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸೂಚಿಸುವ ಚರ್ಚೆ ಸಂದರ್ಭದಲ್ಲಿ ಪ್ರತಿಪಕ್ಷಗಳ ಸದಸ್ಯರು ಸರ್ಕಾರದ ವೈಫಲ್ಯಗಳನ್ನು ಪಟ್ಟಿ ಮಾಡಿ ತರಾಟೆಗೆ ತೆಗೆದುಕೊಳ್ಳಲಿದ್ದು, ಪ್ರತಿಯಾಗಿ ಆಡಳಿತ ಪಕ್ಷವೂ ತಮ್ಮ ಸಾಧನೆ ಮುಂದಿಟ್ಟು ಸಮರ್ಥನೆ ಮಾಡಿಕೊಳ್ಳಲು ಸಜ್ಜಾಗಿದೆ. ಈಗಾಗಲೇ ಸರ್ಕಾರದ ಮೇಲೆ ಕೇಳಿಬಂದಿರುವ ಹಲವು ಭ್ರಷ್ಟಾಚಾರದ ಆರೋಪಗಳ ಬಗ್ಗೆ ಪ್ರತಿಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಇಕ್ಕಟ್ಟಿಗೆ ಸಿಲುಕಿಸಲು ಸಜ್ಜಾಗಿವೆ.

ಸ್ಯಾಂಟ್ರೋ ರವಿ ಪ್ರಕರಣ, ಗುತ್ತಿಗೆದಾರರ ಸಂಘ ಸರ್ಕಾರದ ಮೇಲೆ ಆರೋಪಿಸಿರುವ 40% ಕಮಿಷನ್, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಸಿಡಿಸಿರುವ ಬ್ರಾಹ್ಮಣ ಸಿಎಂ ಹೇಳಿಕೆ, ಅಧಿಕಾರಿಗಳ ವರ್ಗಾವಣೆಯಲ್ಲಿ ಹಣ ವಸೂಲಿ ಸೇರಿದಂತೆ ನಾಡಿನ ಹಲವು ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯಲಿದೆ. ಬಜೆಟ್ ಅಧಿವೇಶನ ಕೂಡ ಆಗಿರುವುದರಿಂದ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ. ಕೇಂದ್ರ ಬಜೆಟ್‌ನಲ್ಲಿ ಘೋಷಣೆ ವಿಚಾರವೂ ಪ್ರಮುಖವಾಗಿ ಪ್ರಸ್ತಾಪವಾಗಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ವಾಕ್ಸಮರ ನಡೆಯುವುದನ್ನು ತಳ್ಳಿ ಹಾಕುವಂತಿಲ್ಲ.

ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ರೈಲ್ವೆ ಯೋಜನೆಗಳನ್ನು ಮುಂದುವರೆಸಲು 8 ಸಾವಿರ ಕೋಟಿ ಅನುದಾನ ಹೊರತುಪಡಿಸಿದರೆ, ಕೇಂದ್ರದ ಆಯವ್ಯಯದಲ್ಲಿ ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಸಿಕ್ಕಂತಾಗಿದೆ ಎಂದು ಕಾಂಗ್ರೆಸ್, ಜೆಡಿಎಸ್ ಈಗಾಗಲೇ ಆರೋಪಿಸಿವೆ. ಅಲ್ಲದೆ ದೇಶದಲ್ಲೇ ಅತೀ ಹೆಚ್ಚು ತೆರಿಗೆ ಕಟ್ಟುವ ರಾಜ್ಯಗಳ ಪೈಕಿ ಕರ್ನಾಟಕ 2ನೇ ರಾಜ್ಯವಾಗಿದೆ. ರಾಜ್ಯದ ಪಾಲಿನ ಸುಮಾರು 13 ಸಾವಿರ ಕೋಟಿ ಜಿಎಸ್‌ಟಿ ಹಣವನ್ನು ಬಿಡುಗಡೆ ಮಾಡದಿರುವುದು ಚರ್ಚೆಗೆ ಗ್ರಾಸವಾಗಲಿದೆ.

ಇದಲ್ಲದೆ, ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಕೆಲವು ಸಂಘಟನೆಗಳು ಅಧಿವೇಶನದ ಸಂದರ್ಭದಲ್ಲಿ ನಡೆಸುವ ಹೋರಾಟ, ಪ್ರತಿಭಟನೆಯ ವಿಚಾರವೂ ಪ್ರತಿಧ್ವನಿಸಲಿದೆ. ಬಹುತೇಕ ಶಾಸಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಹೆಚ್ಚು ಸಮಯ ವ್ಯಯ ಮಾಡುತ್ತಿದ್ದಾರೆ. ಹೀಗಾಗಿ ಜಂಟಿ ಹಾಗೂ ಬಜೆಟ್ ಅಧಿವೇಶನ 10 ದಿನಗಳಿಗೆ ಸೀಮಿತವಾಗಿದೆ.

ಪ್ರತಿಬಂಧಕಾಜ್ಞೆ ಜಾರಿ: ಫೆಬ್ರವರಿ 10 ರಿಂದ 24 ರವರೆಗೆ ವಿಧಾನ ಸೌಧದಲ್ಲಿ ಬಜೆಟ್ ಅಧಿವೇಶನ ಹಿನ್ನೆಲೆ, ಅಧಿವೇಶನದ ಕಾರ್ಯಕಲಾಪಗಳಿಗೆ ಅಡಚಣೆ, ಸಾರ್ವಜನಿಕ ನೆಮ್ಮದಿಗೆ ಭಂಗ, ಸುಗಮ ಸಂಚಾರಕ್ಕೆ ತೊಂದರೆಯಾಗದಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತ ಸಿ.ಹೆಚ್. ಪ್ರತಾಪ್ ರೆಡ್ಡಿಯವರು ಐಪಿಸಿ ಸೆಕ್ಷನ್ 144ರ ಪ್ರಕಾರ ಪ್ರತಿಬಂಧಕಾಜ್ಞೆ ಜಾರಿ ಮಾಡಿ ಆದೇಶಿಸಿದ್ದಾರೆ. ಅಧಿವೇಶನ ನಡೆಯುವ ಪ್ರತಿದಿನ ಬೆಳಗ್ಗೆ 6 ರಿಂದ ರಾತ್ರಿ 12 ರವರೆಗೆ ವಿಧಾನಸೌಧದ ಸುತ್ತಲೂ 2 ಕಿ.ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ 5ಕ್ಕಿಂತ ಹೆಚ್ಚು ಜನ ಒಂದೆಡೆ ಗುಂಪು ಸೇರುವಂತಿಲ್ಲ, ಮೆರವಣಿಗೆ, ಪ್ರತಿಭಟನೆ ಹಾಗೂ ಮಾರಕಾಸ್ತ್ರಗಳು, ಕಲ್ಲು, ಇಟ್ಟಿಗೆ ದೈಹಿಕ ಹಿಂಸೆ ಉಂಟುಮಾಡುವ ವಸ್ತುಗಳನ್ನ ಒಯ್ಯುವಂತಿಲ್ಲ. ಸ್ಫೋಟಕ ವಸ್ತುಗಳನ್ನ ಸಿಡಿಸುವುದು ಸಂಪೂರ್ಣ ನಿಷೇಧವಾಗಿದ್ದು, ಯಾವುದೇ ಪ್ರತಿಕೃತಿಗಳ ಪ್ರದರ್ಶನ, ದಹನ ಮಾಡುವಂತಿಲ್ಲ.

ಹೆದ್ದಾರಿ ಅಗಲೀಕರಣಕ್ಕೆ ಹಣ ಬಿಡುಗಡೆ

ಹೆದ್ದಾರಿ ಇಲಾಖೆಗೆ ಬಹಳಷ್ಟು ಅನುದಾನ ನೀಡಲಾಗಿದ್ದು, ಇದರಲ್ಲಿ ಕರ್ನಾಟಕದ ಪ್ರಮುಖ ಹೆದ್ದಾರಿ ಯೋಜನೆಗಳಿಗೂ ಹಣ ಬಿಡುಗಡೆಯಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು ಜಿಲ್ಲೆ ಇಲವಾಲ, ಕೆಆರ್ ನಗರ ಜಂಕ್ಷನ್ ರಸ್ತೆಯಲ್ಲಿ ನಾಲ್ಕು ಪಥ ರಸ್ತೆ ನಿರ್ಮಾಣ ಯೋಜನೆಗೆ 739.39 ಕೋಟಿ ರೂ. ಬಿಡುಗಡೆ ಮಾಡಿರುವುದಾಗಿ ಹೇಳಿದ್ದಾರೆ. ಬಿಜಾಪುರದ ಮಹಾರಾಷ್ಟ್ರ ಗಡಿಭಾಗದ ಕನಮಡಿ–ಬಿಜ್ಜರಗಿ–ತಿಕೋಟ ಸೆಕ್ಷನ್‌ನಲ್ಲಿ ದ್ವಿಪಥ ರಸ್ತೆಯ ಅಗಲೀಕರಣಕ್ಕೆ 196 ಕೋಟಿ ರೂ. ಅನುದಾನ ನೀಡಿದ್ದಾರೆ.

ಕೇಂದ್ರ ಭೂಸಾರಿಗೆ ಸಚಿವರ ನಿರ್ಧಾರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿ ಟ್ವೀಟ್ ಮಾಡಿ ಸಂತಸ ವ್ಯಕ್ತಪಡಿಸಿರುವುದಲ್ಲದೆ, ವಿಶ್ವದರ್ಜೆಯ ಸೌಕರ್ಯ ಕಲ್ಪಿಸುತ್ತಿರುವುದಕ್ಕೆ ಧನ್ಯವಾದ ಹೇಳಿದ್ದಾರೆ. ವಿಜಯಪುರ ಕಲಬುರಗಿಯ ಮಹಾರಾಷ್ಟ್ರ ಗಡಿಭಾಗದ ರಾಹೆ–548ಬಿಗೆ ಸೇರುವ ಮುರುಂನಿಂದ ಐಬಿ ಸರ್ಕಲ್‌ವರೆಗಿನ ದ್ವಿಪಥ ರಸ್ತೆಯ ಅಗಲೀಕರಣ ಯೋಜನೆ: 957.09 ಕೋಟಿ ರೂ. ಕೊಪ್ಪಳ ಮತ್ತು ಗದಗ್‌ನಲ್ಲಿ ರಾಹೆ–367ರ ಗಡ್ಡನಕೇರಿ ಸೆಕ್ಷನ್‌ನಲ್ಲಿ ಕುಕನೂರ, ಯಲಬುರ್ಗ, ಗಜೇಂದ್ರಗಡದಲ್ಲಿ ಬೈಪಾಸ್ ರಸ್ತೆ ನಿರ್ಮಾಣ ಯೋಜನೆ: 333.96 ಕೋಟಿ ರೂ. ಬಾಗಲಕೋಟೆ ಜಿಲ್ಲೆ ರಾಹೆ–367: ಸರ್ಜಾಪುರದಿಂದ ಪಟ್ಟದಕಲ್ಲು ರಸ್ತೆ ಅಗಲೀಕರಣ ಯೋಜನೆ: 445.62 ಕೋಟಿ ರೂ. ಒದಗಿಸಲಾಗಿದೆ.

ಪುತ್ರಿಗೆ ಸಿಬಿಐ ನೋಟಿಸ್

ಕಾಲೇಜಿನ ನಿರ್ದೇಶಕಿಯಾಗಿರುವ ಡಿಕೆಶಿ ಪುತ್ರಿ ಐಶ್ವರ್ಯಗೆ ನೋಟಿಸ್ ನೀಡಿರುವ ಅಧಿಕಾರಿಗಳು ಕಾಲೇಜು ಶುಲ್ಕ, ಕಾಲೇಜಿನ ಬಜೆಟ್ ಸಮೇತ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ. ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ. ಶಿವಕುಮಾರ್, "ನನ್ನ ಮಗಳ ಶಿಕ್ಷಣ ಸಂಸ್ಥೆಗೆ ನೋಟಿಸ್ ಬಂದಿದೆ. ಶುಲ್ಕ ಎಷ್ಟಿದೆ, ಪರೀಕ್ಷೆ ಫಲಿತಾಂಶದ ವಿವರ ಕೇಳಿ ನೋಟಿಸ್ ನೀಡಿದ್ದಾರೆ. ನಾನು ಏನು ಉತ್ತರ ಕೊಡಲಿ? ಕೆಲ ದಿನಗಳ ಹಿಂದೆಯಷ್ಟೇ ನನಗೆ ಈ ಹಿಂದೆಯೂ ಇಡಿ ನೋಟಿಸ್ ಬಂದಿತ್ತು. ಅದಕ್ಕೆ ಉತ್ತರ ಕೊಟ್ಟು ಬಂದಿದ್ದೆ. ಈಗ ಮತ್ತೆ ಇಡಿಯಿಂದ ನೋಟಿಸ್ ಬಂದಿರುವುದರಿಂದ ಮತ್ತೆ ಹೋಗಬೇಕು. ರಾಜಕೀಯ ಒತ್ತಡದ ಮಧ್ಯೆ ನಾನು ಏನು ಮಾಡಲಿ ಹೇಳಿ. ಇಂತಹ ನೋಟಿಸ್‌ಗಳು ವಿರೋಧ ಪಕ್ಷಗಳಿಗೆ ಮಾತ್ರ ಬರುತ್ತವೆ ಎಂದು ದೂರಿದರು.

ಶೇ.33ಕ್ಕೆ ಹೆಚ್ಚಿಸಲು ಕೇಂದ್ರ ಸಲಹೆ

ರಾಜ್ಯಸಭೆಯಲ್ಲಿ ಹೇಳಿದ್ದಾರೆ. ಬ್ಯೂರೋ ಆಫ್ ಪೊಲೀಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಸಂಗ್ರಹಿಸಿದ ಮಾಹಿತಿ ಪ್ರಕಾರ, 2022ರ ಜನವರಿ 1 ರಂತೆ ರಾಜ್ಯಗಳ ಪೊಲೀಸ್ ಇಲಾಖೆಯಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿಯ ಸಾಮರ್ಥ್ಯವು ಅಖಿಲ ಭಾರತ ಮಟ್ಟದಲ್ಲಿ ಶೇ 11.75 ರಷ್ಟಿದೆ ಎಂದು ಅವರು ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರದಲ್ಲಿ ಹೇಳಿದರು. ಲಡಾಖ್ ಪೊಲೀಸ್ ಪಡೆಯಲ್ಲಿ ಅತಿ ಹೆಚ್ಚು ಶೇಕಡಾವಾರು ಮಹಿಳೆಯರನ್ನು ಹೊಂದಿದೆ (ಶೇ 28.3), ಆಂಧ್ರಪ್ರದೇಶ (ಶೇ 21.7), ಚಂಡೀಗಢ (ಶೇ 21.6) ಮತ್ತು ಬಿಹಾರ (ಶೇ 21.2) ನಂತರದ ಸ್ಥಾನದಲ್ಲಿದೆ.

ಜಮ್ಮು ಮತ್ತು ಕಾಶ್ಮೀರ (ಶೇ 3.2), ತ್ರಿಪುರ (ಶೇ 5.29) ಮತ್ತು ಮೇಘಾಲಯ (ಶೇ 5.9) ರಾಜ್ಯಗಳ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ಕಡಿಮೆ ಮಹಿಳಾ ಪ್ರಾತಿನಿಧ್ಯವನ್ನು ಹೊಂದಿವೆ. ಖಾಲಿ ಇರುವ ಕಾನ್‌ಸ್ಟೇಬಲ್ ಮತ್ತು ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳನ್ನು ಪರಿವರ್ತಿಸುವ ಮೂಲಕ ಮಹಿಳಾ ಕಾನ್‌ಸ್ಟೇಬಲ್‌ಗಳು ಮತ್ತು ಸಬ್‌ಇನ್‌ಸ್ಪೆಕ್ಟರ್‌ಗಳ ಹೆಚ್ಚುವರಿ ಹುದ್ದೆಗಳನ್ನು ರಚಿಸಲು ಎಲ್ಲಾ ರಾಜ್ಯ ಸರ್ಕಾರಗಳಿಗೆ ಮನವಿ ಮಾಡಲಾಗಿದೆ ಎಂದು ಸಚಿವರು ಹೇಳಿದರು.

ಜಿಲ್ಲೆಗೊಂದು ಟ್ರಕ್ ಟರ್ಮಿನಲ್

ನಿಲುಗಡೆಗೆ ಮತ್ತು ಇತರ ಮೂಲ ಸೌಲಭ್ಯಗಳಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಬೆಂಗಳೂರಿನಲ್ಲಿ ಟ್ರಕ್ ಟರ್ಮಿನಲ್ ಕಾಮಗಾರಿ ಪೂರ್ಣಗೊಂಡಿದ್ದು, ಸರಕು ಸಾಗಾಣಿಕೆ ನಿರ್ವಹಣೆದಾರರ ಬಳಕೆಗೆ ನೀಡಲಾಗುವುದು ಎಂದು ತಿಳಿಸಿದರು. ಹೊಸಪೇಟೆಯಲ್ಲಿ ಟರ್ಮಿನಲ್ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ. ಹುಬ್ಬಳ್ಳಿ, ದಾಂಡೇಲಿಯಲ್ಲಿ ಜಮೀನು ದೊರೆತಿದ್ದು, ಟರ್ಮಿನಲ್ ಕಾಮಗಾರಿ ಇನ್ನೇನು ಆರಂಭಗೊಳ್ಳಲಿದೆ ಎಂದು ಮಾಹಿತಿ ನೀಡಿದರು. ಬೆಂಗಳೂರು ನಗರಕ್ಕೆ ಹೊಂದಿಕೊಂಡಿರುವ ಬೆಂಗಳೂರು ಗ್ರಾಮಾಂತರದಲ್ಲಿ ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳಿದ್ದು ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಇದಕ್ಕಾಗಿ ಜಿಲ್ಲೆಯಲ್ಲೂ ಟರ್ಮಿನಲ್ಸ್ ಸ್ಥಾಪನೆ ಸ್ಥಳಾವಕಾಶಕ್ಕಾಗಿ ಜಿಲ್ಲಾಧಿಕಾರಿಗಳ ಮೂಲಕ ತಹಶೀಲ್ದಾರ್‌ಗಳಿಗೆ ಮಾಹಿತಿ ನೀಡಲಾಗಿದ್ದು, ಆದಷ್ಟು ಬೇಗ ಅಗತ್ಯವಿರುವ ಸ್ಥಳಾವಕಾಶ ಒದಗಿಸುವ ಬಗ್ಗೆ ಅಧಿಕಾರಿಗಳು ತಿಳಿಸಿದ್ದಾರೆ ಎಂದು ಹೇಳಿದರು.

ರಾಜ್ಯಾದ್ಯಂತ ಲಾರಿ, ಟ್ರಕ್ ನಿರ್ವಹಣೆಗಾರರಿಗೆ ನೆರವಾಗುವ ನಿಟ್ಟಿನಲ್ಲಿ ಎಲ್ಲಾ ಜಿಲ್ಲೆಯಲ್ಲೂ ಟ್ರಕ್ ಟರ್ಮಿನಲ್ಸ್ ನಿರ್ಮಿಸಲು, ಸರ್ಕಾರಿ ಜಮೀನು ಗುರುತಿಸಿ ಸಂಸ್ಥೆಗೆ ಹಂಚಿಕೆ ಮಾಡಲು ಆಯಾ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಭೂಮಿ ಲಭ್ಯತೆ ಹಾಗೂ ಅನುದಾನ ಲಭ್ಯತೆಯ ಆಧಾರದ ಮೇಲೆ ಯೋಜನೆಗಳನ್ನು ಕೈಗೊಳ್ಳಲಾಗುವುದು. ಪಿಪಿಟಿ ಮಾದರಿಯಲ್ಲೂ ಆರಂಭಿಸುವ ಚಿಂತನೆಯಿದೆ. ಅದರಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲೂ ಸ್ಥಳಾವಕಾಶ ಗುರುತಿಸಲು ಜಿಲ್ಲಾಧಿಕಾರಿಯವರಿಗೆ ತಿಳಿಸಲಾಗಿದೆ. ಜಿಲ್ಲೆಯಲ್ಲೂ ಶೀಘ್ರವಾಗಿ ಟರ್ಮಿನಲ್ ಕಾಮಗಾರಿ ಆರಂಭವಾಗಲಿದೆ ಎಂದು ತಿಳಿಸಿದರು. ಟ್ರಕ್ ಟರ್ಮಿನಲ್ಸ್‌ನಂತೆ ರಸ್ತೆ ಬದಿಗಳಲ್ಲಿ ಟ್ರಕ್ ನಿರ್ವಹಣೆಗಾರರಿಗೆ 10 ರಿಂದ 15 ನಿಮಿಷ ವಿಶ್ರಾಂತಿ ಪಡೆಯಲು ಹಾಗೂ ವಸ್ತುಗಳ ಖರೀದಿಸಲು ಅನುಕೂಲವಾಗುವಂತೆ 2 ಎಕರೆಯಲ್ಲಿ ಶಾಪಿಂಗ್ ಸೆಂಟರ್‌ಗಳ ನಿರ್ಮಾಣ ಮಾಡಲಾಗುವುದು. ರಾಜ್ಯದಲ್ಲಿ 20 ಕಡೆಗಳಲ್ಲಿ ಇದನ್ನು ಸ್ಥಾಪಿಸುವ ಚಿಂತನೆಯಿದ್ದು, ಮೊದಲನೇ ಹಂತದಲ್ಲಿ 10 ಕಡೆಯಲ್ಲಾದರೂ ಶಾಪಿಂಗ್ ಸೆಂಟರ್‌ಗಳು ಆರಂಭವಾಗಲಿವೆ ಎಂದರು.

ಪಾಲಿಕೆಯ ಫೌಂಟೇನ್ ಸರ್ಕಲ್ ಆಧುನೀಕರಣ ಯೋಜನೆ ತಿರಸ್ಕರಿಸಿದ ಪಾರಂಪರಿಕ ಉಪಸಮಿತಿ

ಮೈಸೂರು, ಫೆ. 8(ಆರ್‌ಕೆ)– ಮೈಸೂರಿನ ಪ್ರಸಿದ್ಧ ಫೌಂಟೇನ್ ಆಧುನೀಕರಿಸುವ ಪಾಲಿಕೆ ಯೋಜನೆಯನ್ನು ಸಾರಾಸಗಟಾಗಿ ತಿರಸ್ಕರಿಸಿರುವ ಪಾರಂಪರಿಕ ಸಂರಕ್ಷಣಾ ಉಪಸಮಿತಿಯು, ಎಲ್ಗಿನ್ ಫೌಂಟೇನ್ ಅನ್ನು ಪಾರಂಪರಿಕ ವಿನ್ಯಾಸದಂತೆಯೇ ಸಂರಕ್ಷಿಸಲು ನಿರ್ಧರಿಸಿದೆ. ಮೈಸೂರಿನ ದೊಡ್ಡಕೆರೆ ಮೈದಾನದ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪರಂಪರೆ, ಪುರಾತತ್ವ ಮತ್ತು ಸಂಗ್ರಹಾಲಯಗಳ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಯಲ್ಲಿ ಬೆಂಗಳೂರಿಂದ ಪ್ರವೇಶಿಸುತ್ತಿದ್ದಂತೆ ಎದುರುಗೊಳ್ಳುವ ಫೌಂಟೇನ್ ವೃತ್ತವನ್ನು ಸೌಂದರ್ಯೀಕರಣ ಹಾಗೂ ಆಧುನೀಕರಣಗೊಳಿಸಲು ಪಾಲಿಕೆ ತಯಾರಿಸಿದ್ದ ಡಿಪಿಆರ್ ಅನ್ನು ತಳ್ಳಿಹಾಕಿದೆ.

ಐತಿಹಾಸಿಕ ಘಟನೆಗಳಿಗೆ ಸಾಕ್ಷಿಯಾಗಿರುವ ಎಲ್ಗಿನ್ ಫೌಂಟೇನ್ ಅನ್ನು ಆಧುನೀಕರಿಸುವ ಪ್ರಯತ್ನದಲ್ಲಿ ಹಾಳು ಮಾಡುವ ಬದಲು ಪಾರಂಪರಿಕ ವಿನ್ಯಾಸ ಉಳಿಸಿಕೊಂಡು ಸಂರಕ್ಷಿಸಬೇಕೆಂದು ಉಪಸಮಿತಿ ಸದಸ್ಯರಾದ ಇತಿಹಾಸ ತಜ್ಞ ಪ್ರೊ. ಎನ್.ಎಸ್. ರಂಗರಾಜು ಸಲಹೆ ನೀಡಿದ ಹಿನ್ನೆಲೆಯಲ್ಲಿ ಅದಕ್ಕೆ ಸಮ್ಮತಿ ನೀಡಿದ ಜಿಲ್ಲಾಧಿಕಾರಿಗಳು, ಈ ಸಂಬಂಧ ಡಿಪಿಆರ್ ತಯಾರಿಸಿ, ಅಗತ್ಯ ಕ್ರಮ ವಹಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಆರಂಭದಲ್ಲಿ ಕೆಆರ್ ಸರ್ಕಲ್‌ನಲ್ಲಿ ಲಾರ್ಡ್ ಎಲ್ಗಿನ್ ಮೈಸೂರಿಗೆ ಭೇಟಿ ನೀಡಿದ ಗೌರವಾರ್ಥ ಫೌಂಟೇನ್ ಅನ್ನು ನಿರ್ಮಿಸಲಾಗಿತ್ತು. ಅಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್

ಪಾರಂಪರಿಕವಾಗಿಯೇ ಎಲ್ಗಿನ್ ಕಾರಂಜಿಯನ್ನು ಸಂರಕ್ಷಿಸಲು ನಿರ್ಧಾರ



ಪ್ರತಿಮೆ ಸ್ಥಾಪಿಸಿದ ನಂತರ ಫೌಂಟೇನ್ ಅನ್ನು ಈಗಿನ ಧನ್ವಂತರಿ ರಸ್ತೆ, ದಿವಾನ್ಸ್ ರೋಡ್ ಜಂಕ್ಷನ್‌ಗೆ ಸ್ಥಳಾಂತರಿಸಲಾಗಿತ್ತು. ನಂತರ ಅದನ್ನು ಪ್ರಸ್ತುತ ಇರುವ ಮೈಸೂರು–ಬೆಂಗಳೂರು ರಸ್ತೆಯಲ್ಲಿ ಭಾರತದ ಪ್ರಥಮ ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದ್ ಭೇಟಿಯ ಸ್ಮರಣಾರ್ಥ ಸ್ಥಳಾಂತರಿಸಲಾಗಿತ್ತು ಎಂದು ಪ್ರೊ. ರಂಗರಾಜು ಜಿಲ್ಲಾಧಿಕಾರಿಗಳಿಗೆ ವಿವರಿಸಿದರು.

ಮಿಲೇನಿಯಂ ಸರ್ಕಲ್‌ನಲ್ಲಿ ಮಹಾರಾಣಿ ಪ್ರತಿಮೆ: ಬನ್ನಿಮಂಟಪದ ಮಿಲೇನಿಯಂ (ಎಲ್‌ಐಸಿ ಸರ್ಕಲ್) ನಲ್ಲಿ ಮಹಾರಾಣಿ ಕೆಂಪನಂಜಮ್ಮಣಿ ವಾಣಿವಿಲಾಸ ಸನ್ನಿಧಾನ ಅವರ ಪ್ರತಿಮೆ ಸ್ಥಾಪಿಸಬೇಕೆಂದು ಸಮಿತಿಯು ಸಭೆಯಲ್ಲಿ ಸಲಹೆ ನೀಡಿತು. ಮೈಸೂರು ಮಹಾರಾಜ ಚಾಮರಾಜೇಂದ್ರ ಒಡೆಯರ್–X ಅವರ ಧರ್ಮಪತ್ನಿಯಾದ ಕೆಂಪನಂಜಮ್ಮಣಿ ವಾಣಿವಿಲಾಸ ಸನ್ನಿಧಾನ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ತಾಯಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ, ಮೈಸೂರು ಅರಮನೆ, ಶಿವನಸಮುದ್ರ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆ ಸೇರಿದಂತೆ ಅವರು ಹಲವು ಯೋಜನೆಗೆ ಶ್ರಮಿಸಿದ್ದರು ಎಂದು ಪ್ರೊ. ರಂಗರಾಜು ವಿವರಿಸಿದರು.

ಈ ಹಿಂದೆ 2018ರಲ್ಲಿ ಮುಡಾ ಅಧ್ಯಕ್ಷರಾಗಿದ್ದ ಡಿ. ಧ್ರುವಕುಮಾರ್, ಮಿಲೇನಿಯಂ ಸರ್ಕಲ್‌ನಲ್ಲಿ ಮಹಾರಾಣಿ ಪ್ರತಿಮೆ ಸ್ಥಾಪಿಸಲು ಮುಂದಾಗಿದ್ದರಲ್ಲದೆ, ಡಿಪಿಆರ್ ಸಹ ತಯಾರಾಗಿತ್ತಾದರೂ, ನಂತರ ಆ ಯೋಜನೆ ಸಾಕಾರಗೊಳ್ಳಲಿಲ್ಲ ಎಂದು ತಿಳಿಸಿದರು.

ಈ ಸಂಬಂಧ ಯೋಜನೆ ಕುರಿತ ಡಿಪಿಆರ್ ಪರಿಶೀಲಿಸಿ ಮುಂದಿನ ಸಭೆಯಲ್ಲಿ ಮಂಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಶಿಲ್ಪಿ ಅರುಣ್ ಯೋಗಿರಾಜ್‌ರಿಂದಲೇ ಮಹಾರಾಣಿ ಕೆಂಪನಂಜಮ್ಮಣಿ ಅವರ ಪ್ರತಿಮೆಯನ್ನು ಸಿದ್ಧಪಡಿಸಬಹುದೆಂದೂ ಪ್ರೊ. ರಂಗರಾಜು ಸಲಹೆ ನೀಡಿದರು. ಪುರಾತತ್ವ, ಸಂಗ್ರಹಾಲಯಗಳು ಹಾಗೂ ಪಾರಂಪರಿಕ ಇಲಾಖೆ ಆಯುಕ್ತ ದೇವರಾಜು, ಉಪ ನಿರ್ದೇಶಕಿ ಮಂಜುಳ, ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಎಸ್‌ಜೆಸಿಇ ನಿವೃತ್ತ ಪ್ರಾಂಶುಪಾಲ ಪ್ರೊ. ಸೈಯದ್ ಶಕೀನ್ ಉರ್–ರೆಹಮಾನ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸರ್ವೆ ಮಾಡಿರುವ 95ರ ಪೈಕಿ ದುಸ್ಥಿತಿಯಲ್ಲಿರುವ 25 ಪಾರಂಪರಿಕ ಕಟ್ಟಡಗಳ ತುರ್ತು ರಿಪೇರಿ ಅಗತ್ಯ

ಪಾರಂಪರಿಕ ಸಂರಕ್ಷಣಾ ಉಪ ಸಮಿತಿ ಸಲಹೆ

ಮೈಸೂರು, ಫೆ.8(ಆರ್‌ಕೆ)–ಮೈಸೂರಿನಲ್ಲಿರುವ 131 ಪಾರಂಪರಿಕ ಕಟ್ಟಡಗಳ ಪೈಕಿ 95 ಕಟ್ಟಡಗಳ ಸರ್ವೆ ಕಾರ್ಯ ಮುಗಿದಿದ್ದು, ದುಸ್ಥಿತಿಯಲ್ಲಿರುವ 25 ಅನ್ನು ತುರ್ತಾಗಿ ರಿಪೇರಿ ಮಾಡಬೇಕೆಂದು ಪಾರಂಪರಿಕ ಸಂರಕ್ಷಣಾ ಉಪ ಸಮಿತಿ ಸಲಹೆ ನೀಡಿದೆ. ಪಾರಂಪರಿಕ ಇಲಾಖೆ ಆಯುಕ್ತರ ಕಚೇರಿಯಲ್ಲಿ ಮಂಗಳವಾರ ನಡೆದ ಸಮಿತಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ವರದಿ ನೀಡಿದ ಸದಸ್ಯರು, ಬೀಳುವ ಪರಿಸ್ಥಿತಿಯಲ್ಲಿರುವ 25 ಪಾರಂಪರಿಕ ಕಟ್ಟಡಗಳನ್ನು ತುರ್ತಾಗಿ ರಿಪೇರಿ ಮಾಡಿ ಸಂರಕ್ಷಿಸುವ ಅಗತ್ಯವಿದೆ.

ಇಲಾಖೆಯಿಂದ ಡಿಪಿಆರ್ ತಯಾರಿಸಿ ಅನುಮೋದನೆ ಪಡೆದು ಮುಂದಿನ ಕ್ರಮ ಜರುಗಿಸಬೇಕೆಂದು ಸಮಿತಿ ಸದಸ್ಯರು ಮಾಹಿತಿ ನೀಡಿದರು. ಮಳೆಯಿಂದಾಗಿ ಹಲವು ಕಟ್ಟಡಗಳು ಕುಸಿದ ಹಿನ್ನೆಲೆಯಲ್ಲಿ 2022ರ ಅಕ್ಟೋಬರ್ 12ರಂದು ಸರ್ವೆ ಕಾರ್ಯ ಆರಂಭಿಸಲಾಗಿತ್ತು. ಪಾರಂಪರಿಕ ಆಯುಕ್ತ ದೇವರಾಜು, ಡೆಪ್ಯೂಟಿ ಡೈರೆಕ್ಟರ್ ಮಂಜುಳಾ, ಸಮಿತಿ ಸದಸ್ಯರಾದ ಪ್ರೊ. ಎನ್.ಎಸ್.ರಂಗರಾಜು, ಪ್ರೊ. ಸೈಯ್ಯದ್ ಶಕೀಬ್ ಉರ್ ರೆಹಮಾನ್, ಜಿ.ವೇಣುಗೋಪಾಲ್, ಆರ್. ರಮ್ಯಾ, ಆರ್.ಪವಿತ್ರ, ಜಿ.ಆರ್. ರಘು, ಸೌಮ್ಯಾ ಸಮೀಕ್ಷೆ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ.

ಬಜೆಟ್‌ನಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಪ್ರತ್ಯೇಕ ಅನುದಾನ ಮೀಸಲಿಡಿ: ಪ್ರೊ.ದೊರೆಸ್ವಾಮಿ

ಬೆಂಗಳೂರು: ಮುಂಬರುವ ರಾಜ್ಯ ಬಜೆಟ್‌ನಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಪ್ರತ್ಯೇಕ ಅನುದಾನ ಮೀಸಲಿಡುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಡಾ.ಎಂ.ಆರ್.ದೊರೆಸ್ವಾಮಿ ಅವರು ಮನವಿ ಮಾಡಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಪತ್ರ ಬರೆದಿರುವ ಅವರು, ಸರ್ಕಾರಿ ಶಾಲೆಗಳಲ್ಲಿ ಭೌತಿಕ ಮೂಲಸೌಕರ್ಯ, ತರಗತಿ, ಶೌಚಾಲಯ, ಕಾಂಪೌಂಡ್, ಗ್ರಂಥಾಲಯ, ಶುದ್ಧ ಕುಡಿಯುವ ನೀರಿನ ಅಭಿವೃದ್ಧಿಗೆ 10 ಸಾವಿರ ಕೋಟಿ ಅನುದಾನ ಮಂಜೂರು ಮಾಡಬೇಕು ಮತ್ತು ಶಾಲೆಗಳ ದುರಸ್ಥಿ ಮತ್ತು ನಿರ್ವಹಣಾ ಕಾರ್ಯಕ್ಕೆ ಪ್ರತ್ಯೇಕವಾಗಿ ರೂ.3 ಸಾವಿರ ಕೋಟಿ ಒದಗಿಸಬೇಕೆಂದು ಕೋರಿದ್ದಾರೆ.ಅದೇ ರೀತಿ ಶಿಕ್ಷಣದ ಮೇಲೋದ್ದೇಶಗಳನ್ನು ಮತ್ತು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ವ್ಯವಸ್ಥೆಯನ್ನು ರಾಷ್ಟ್ರೀಯ ಶಿಕ್ಷಣ ನೀತಿ 2020ಕ್ಕೆ ಅನುಗುಣವಾಗಿ ರೂಪಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾರೆ.

ಬಿಜೆಪಿ ಸಹ ಉಸ್ತುವಾರಿ ಅಣ್ಣಾಮಲೈ ಕನ್ನಡ ವಿರೋಧಿ: ಮೈಸೂರು ಕನ್ನಡ ವೇದಿಕೆ ಪ್ರತಿಭಟನೆ

ಮೈಸೂರು, ಫೆ.8(ಎಂಟಿವೈ)– ಕರ್ನಾಟಕದಲ್ಲಿ ನಡೆಯುವ ವಿಧಾನಸಭಾ ಚುನಾವಣೆಗೆ ಬಿಜೆಪಿಯ ಸಹ ಉಸ್ತುವಾರಿಯಾಗಿ ತಮಿಳುನಾಡು ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ನೇಮಕವನ್ನು ವಿರೋಧಿಸಿ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರು, ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಮೇಕೆದಾಟು ಯೋಜನೆ ಅನುಷ್ಠಾನಗೊಳಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ ಅಣ್ಣಾಮಲೈ ಅವರನ್ನು ನೇಮಕ ಮಾಡಿರುವುದು ಖಂಡನೀಯ. ರಾಜ್ಯದ ಜನರ ಸಹಕಾರದಿಂದ ಇಂದು ಅಣ್ಣಾಮಲೈ ರಾಜಕೀಯವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಆದರೆ, ಇದೀಗ ಕನ್ನಡಿಗರ ವಿರುದ್ಧವೇ ಮಾತನಾಡುತ್ತಿದ್ದಾರೆ. ಇಂತಹ ಕನ್ನಡಿಗರ ವಿರೋಧಿ ಧೋರಣೆ ತಾಳುವ ವ್ಯಕ್ತಿಯನ್ನು ನೇಮಿಸಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿರುವ ತಮಿಳರನ್ನು ಓಲೈಸಿಕೊಳ್ಳಲು ಬಿಜೆಪಿ ಸ್ವಾರ್ಥ ರಾಜಕಾರಣ ಮಾಡುತ್ತಿದೆ. ಕನ್ನಡಿಗರ ವಿರೋಧಿಯಾಗಿರುವ ಅಣ್ಣಾಮಲೈಗೆ ನೀಡಿರುವ ಜವಾಬ್ದಾರಿಯನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ನಾಲಾಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಎಲ್‌ಐಸಿ ಸಿದ್ದಪ್ಪ ಗೋವಿಂದರಾಜು, ಸ್ವಾಮಿಗೈಡ್, ಸುನೀಲ್, ಬೀಡಾಬಾಬು ಇನ್ನಿತರರು ಪಾಲ್ಗೊಂಡಿದ್ದರು.

ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಉದ್ಯೋಗ ಮೇಳ

ಮೈಸೂರು,ಫೆ.8(ಪಿಎಂ)– ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಜಂಟಿ ಆಶ್ರಯದಲ್ಲಿ ಕಾಲೇಜು ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಬೃಹತ್ ಉದ್ಯೋಗ ಮೇಳಕ್ಕೆ ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ.ಲಕ್ಷ್ಮಣ ಕುಲಗೋಡ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಖಾಸಗಿ ಕಾಲೇಜುಗಳಲ್ಲಿ ಉದ್ಯೋಗ ಮೇಳಗಳನ್ನು ಆಯೋಜಿಸುವುದು ರೂಢಿಯಲ್ಲಿತ್ತು. ಆದರೆ ಇಂದು ಸರ್ಕಾರಿ ಕಾಲೇಜುಗಳಲ್ಲಿಯೂ ಆಯೋಜನೆಗೊಳ್ಳುತ್ತಿವೆ. ಅಂತೆಯೇ ಇಂದು ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಉದ್ಯೋಗ ಮೇಳ ಆಯೋಜಿಸಿರುವುದು ಸ್ವಾಗತಾರ್ಹ. ಸರ್ಕಾರಿ ಕಾಲೇಜುಗಳಲ್ಲಿ ಸಾಮಾನ್ಯವಾಗಿ ಆರ್ಥಿಕವಾಗಿ ಹಿಂದುಳಿದ ಮಕ್ಕಳು ಹಾಗೂ ಗ್ರಾಮೀಣ ಪ್ರದೇಶ ಮಕ್ಕಳು ವ್ಯಾಸಂಗ ಮಾಡುತ್ತಾರೆ. ಅಂತಹ ಮಕ್ಕಳು ಇಂತಹ ಉದ್ಯೋಗ ಮೇಳಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಅಲ್ಲದೆ, ಸರ್ಕಾರದಿಂದಲೂ ಅನೇಕ ಸೌಲಭ್ಯಗಳು ಲಭ್ಯವಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮರ್ಥನಂ ಅಂಗವಿಕಲರ ಸಂಸ್ಥೆ ಅಧಿಕಾರಿ ಕೆ.ಸತೀಶ್ ಮಾತನಾಡಿ, ಕಳೆದ 26 ವರ್ಷಗಳಿಂದ ನಮ್ಮ ಸಂಸ್ಥೆ ಸೇವೆ ಸಲ್ಲಿಸುತ್ತಿದೆ. ಸ್ವತಃ ವಿಶೇಷಚೇತನರಾದ ಡಾ.ಜಿ.ಕೆ.ಮಹಾಂತೇಶ ಈ ಸಂಸ್ಥೆ ಸ್ಥಾಪಿಸಿದರು. ದೇಶದಲ್ಲಿ ಸಂಸ್ಥೆ 13 ಕೇಂದ್ರಗಳನ್ನು ಹೊಂದಿದ್ದು, ವಿಶೇಷಚೇತನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ ಎಂದರು.

ಪ್ರತಿವರ್ಷ ಕನಿಷ್ಠ 6 ಸಾವಿರ ವಿಶೇಷ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ಆವರಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದ ಉದ್ಯೋಗಾಕಾಂಕ್ಷಿಗಳನ್ನು ಚಿತ್ರದಲ್ಲಿ ಕಾಣಬಹುದು.

ಚೇತನರಿಗೆ ಉದ್ಯೋಗ ದೊರಕಿಸಿಕೊಡುವ ಗುರಿಯೊಂದಿಗೆ ಸಂಸ್ಥೆ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ಜೊತೆಗೆ ಯುವಕ–ಯುವತಿಯರಿಗೂ ಉದ್ಯೋಗ ಕಲ್ಪಿಸಿಕೊಡಲು ಉದ್ಯೋಗ ಮೇಳ ಆಯೋಜಿಸುತ್ತಿದೆ. ಇಂದು ಮೈಸೂರಲ್ಲಿ ಸಂಸ್ಥೆಯಿಂದ 4ನೇ ಉದ್ಯೋಗ ಮೇಳ ಆಯೋಜಿಸಲಾಗಿದೆ. ಉದ್ಯೋಗ ದೊರೆಯದಿದ್ದರೆ ಉದ್ಯೋಗಾಕಾಂಕ್ಷಿಗಳು ಬೇಸರ ಮಾಡಿಕೊಳ್ಳುವುದು ಬೇಡ. ಬದಲಿಗೆ ಇದನ್ನು ಉದ್ಯೋಗ ಪಡೆಯುವ ಮೆಟ್ಟಿಲು ಎಂದು ಸಕಾರಾತ್ಮಕ ಚಿಂತನೆ ಹೊಂದಬೇಕು ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ ಮಾತನಾಡಿ, ಕಾಲೇಜಿನ 15 ಕೊಠಡಿಗಳಲ್ಲಿ ಕಂಪನಿಗಳ ಪ್ರತಿನಿಧಿಗಳು ಸಂದರ್ಶನ ನಡೆಸಲಿದ್ದಾರೆ. ಉದ್ಯೋಗಾಕಾಂಕ್ಷಿಗಳು ಮೇಳವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕಾಲೇಜಿನ ಉದ್ಯೋಗ ಮಾಹಿತಿ ಕೋಶದ ಸಂಚಾಲಕರಾದ ಡಾ.ಕೆ.ಯು. ಕಿರಣ್, ಡಾ.ಜಿ.ಪರಶುರಾಮ ಮೂರ್ತಿ, ಸಮರ್ಥನಂ ಅಂಗವಿಕಲರ ಸಂಸ್ಥೆ ಅಧಿಕಾರಿ ಚಂದ್ರಶೇಖರ್, ಸಂಯೋಜಕ ಎಂ.ಶಿವರಾಜು ಮತ್ತಿತರರು ಹಾಜರಿದ್ದರು.

394 ಮಂದಿ ಆಯ್ಕೆ

ಎಸ್‌ಎಸ್‌ಎಲ್‌ಸಿ ಉತ್ತೀರ್ಣ, ಪಿಯುಸಿ, ಡಿಪ್ಲೊಮಾ ಸೇರಿದಂತೆ ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವ 18ರಿಂದ 35 ವರ್ಷದೊಳಗಿನ ಯುವಕ–ಯುವತಿಯರು ಮೇಳದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು. 50ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿ ಸಂದರ್ಶನ ನಡೆಸಿದವು. ಮೇಳದಲ್ಲಿ ಪಾಲ್ಗೊಂಡಿದ್ದ 1,127 ಉದ್ಯೋಗಾಕಾಂಕ್ಷಿಗಳ ಪೈಕಿ 394 ಮಂದಿ ಸ್ಥಳದಲ್ಲೇ ಆಯ್ಕೆಯಾಗಿದ್ದು, ಹಲವರು 2ನೇ ಹಂತದ ಸಂದರ್ಶನಕ್ಕೆ ಆಯ್ಕೆಯಾದರು. ಇದಲ್ಲದೆ, ಭಾಗವಹಿಸಿದ್ದ 94 ವಿಶೇಷಚೇತನರ ಪೈಕಿ 34 ಮಂದಿ ಆಯ್ಕೆಯಾದರು ಎಂದು ಸಮರ್ಥನಂ ಅಂಗವಿಕಲರ ಸಂಸ್ಥೆ ಪ್ರಕಟಣೆ ತಿಳಿಸಿದೆ.


ಸಹಾಯ ಮಾಡುವ ಸೋಗಿನಲ್ಲಿ ರೋಗಿಯ ಸಂಬಂಧಿಕನ ಬೈಕ್ ಕಳವು

ಖದೀಮನ ವಿರುದ್ಧ ಪ್ರಕರಣ ದಾಖಲು



ಮೈಸೂರು, ಫೆ. 8– ಆಸ್ಪತ್ರೆಯಲ್ಲಿ ಸಹಾಯ ಮಾಡುವ ಸೋಗಿನಲ್ಲಿ ರೋಗಿಯ ಸಂಬಂಧಿಕನ ಬೈಕ್ ಕದ್ದೊಯ್ದ ಪ್ರಕರಣ ವರದಿಯಾಗಿದೆ. ನಂಜನಗೂಡು ತಾಲೂಕು ಅಳಗಂಚಿಪುರ ನಿವಾಸಿಯಾಗಿರುವ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ನೌಕರ ಎ.ಎಂ. ಶಿವಕುಮಾರ್ (23) ಬೈಕ್ ಕಳೆದುಕೊಂಡವರಾಗಿದ್ದು, ಇವರ ಮಾವನ ತಮ್ಮ ರವಿ ಎಂಬುವರಿಗೆ ಜನವರಿ 23ರಂದು ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಬಳಿ ಅಪಘಾತವಾಗಿತ್ತು. ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಕೆಆರ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈ ವೇಳೆ ಅಪರಿಚಿತ ವ್ಯಕ್ತಿಯೋರ್ವ ಆಸ್ಪತ್ರೆಯಲ್ಲಿ ಮಾವನ ತಮ್ಮನ ಆರೈಕೆಯಲ್ಲಿದ್ದ ಶಿವಕುಮಾರ್ ಅವರಿಗೆ ಸಣ್ಣಪುಟ್ಟ ಸಹಾಯ ಮಾಡಿದ್ದ. ಅಂದು ಮಧ್ಯಾಹ್ನ ಆ ಅಪರಿಚಿತ ವ್ಯಕ್ತಿ, ಆಸ್ಪತ್ರೆಯಲ್ಲಿ ತಮ್ಮ ಸಂಬಂಧಿಕರೂ ದಾಖಲಾಗಿದ್ದು, ಅವರನ್ನು ನೋಡಲು ಊರಿನಿಂದ ತಾಯಿ ಬಂದಿದ್ದಾರೆ. ಬಸ್ ನಿಲ್ದಾಣದಲ್ಲಿರುವ ಅವರನ್ನು ಕರೆತರಲು ಸ್ವಲ್ಪ ಬೈಕ್ ಕೊಡಿ ಎಂದು ಶಿವಕುಮಾರ್ ಅವರನ್ನು ಕೇಳಿದ್ದಾನೆ.

ಆತನ ನಂಬಿದ ಶಿವಕುಮಾರ್, ಹೀರೋ ಹೋಂಡಾ ಸ್ಪ್ಲೆಂಡರ್ ಬೈಕ್ (ಕೆಎ 09–ಹೆಚ್‌ಕೆ 5019) ಅನ್ನು ಕೊಟ್ಟು ಕಳುಹಿಸಿದ್ದಾರೆ. ಬೈಕ್ ಪಡೆದು ಹೋದ ವ್ಯಕ್ತಿ ಮತ್ತೆ ವಾಪಸ್ ಬರಲೇ ಇಲ್ಲ. ಆಸ್ಪತ್ರೆಯಲ್ಲಿ ವಿಚಾರಿಸಿದಾಗ ಆತನ ಸಂಬಂಧಿಕರು ಯಾರೂ ದಾಖಲಾಗಿಲ್ಲ ಎಂಬುದು ಗೊತ್ತಾಗಿದೆ. ಈ ಸಂಬಂಧ ಫೆಬ್ರವರಿ 7ರಂದು ಶಿವಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ದೇವರಾಜ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಕಾರ್ಮಿಕನ ಹತ್ಯೆ ಮಾಡಿ ಸ್ಕೂಟರ್, ಹಣ ಕಳವು

ಕ್ರೈಂ ಬಾಕ್ಸ್

ಮೈಸೂರು, ಫೆ. 8– ಕೂಲಿ ಕಾರ್ಮಿಕನ ಹತ್ಯೆ ಮಾಡಿ, ಶವವನ್ನು ಮೋರಿಯಲ್ಲಿ ಬಿಸಾಡಿ ಆತನ ಸ್ಕೂಟರ್ ಕಳವು ಮಾಡಿರುವ ಬಗ್ಗೆ ತಡವಾಗಿ ವರದಿಯಾಗಿದೆ. ಮೈಸೂರಿನ ದಟ್ಟಗಳ್ಳಿ ಜೆ ಬ್ಲಾಕ್ ನಿವಾಸಿ ಶಂಕರ್(50) ಹತ್ಯೆಗೀಡಾದವನಾಗಿದ್ದು, ಜನವರಿ 29ರಂದು ಈತನ ಶವ ಮುಡಾ ಎಂಪ್ಲಾಯೀಸ್ ಲೇಔಟ್‌ನಲ್ಲಿರುವ ದೇಶಿಲಿಂಗೇಶ್ವರ ದೇವಸ್ಥಾನದ ಬಳಿ ದೊಡ್ಡ ಮೋರಿಯಲ್ಲಿ ಪತ್ತೆಯಾಗಿತ್ತು. ಶವ ವಶಪಡಿಸಿಕೊಂಡಿದ್ದ ಕುವೆಂಪುನಗರ ಠಾಣೆ ಪೊಲೀಸರು ಅಪರಿಚಿತ ವ್ಯಕ್ತಿಯ ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದರು.

ಜನವರಿ 31ರಂದು ಶಂಕರನ ಪತ್ನಿ ಲಕ್ಷ್ಮಿ(46) ಪತಿ ನಾಪತ್ತೆಯಾಗಿರುವ ಬಗ್ಗೆ ದೂರು ನೀಡಲು ಠಾಣೆಗೆ ಆಗಮಿಸಿದಾಗ ಅಪರಿಚಿತ ವ್ಯಕ್ತಿ ಶವ ಈಕೆಯ ಪತಿಯದ್ದೇ ಎಂಬುದು ಗೊತ್ತಾಗಿದೆ. ಜನವರಿ 29ರಂದು ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ಮನೆಯಿಂದ ಸ್ಕೂಟರ್‌ನಲ್ಲಿ ಹೋಗಿದ್ದ ಶಂಕರ್, ಅಂದು ರಾತ್ರಿ 10.30ರ ವೇಳೆಯಲ್ಲಿ ಪಾನಮತ್ತನಾಗಿ ಮನೆಗೆ ಬಂದು, ಸ್ಕೂಟರ್‌ನ ಕೀ ಎಲ್ಲೋ ಬಿದ್ದುಹೋಗಿದೆ ಎಂದು ಹೇಳಿ, ಮನೆಯಲ್ಲಿದ್ದ ಮತ್ತೊಂದು ಕೀ ತೆಗೆದುಕೊಂಡು ಪರ್ವ ಕ್ಲಬ್‌ನ ರವಿ ಎಂಬುವರಿಂದ ಹಣ ಪಡೆದು ಬರುವುದಾಗಿ ತಿಳಿಸಿ ಹೋಗಿದ್ದಾನೆ. ಪತಿಯ ಶವ ಪತ್ತೆಯಾದ ನಂತರ ಲಕ್ಷ್ಮಿ, ಪರ್ವ ಕ್ಲಬ್‌ನ ರವಿ ಎಂಬುವರ ಬಳಿ ವಿಚಾರಿಸಿದ್ದಾರೆ. ಜನವರಿ 29ರಂದು ಶಂಕರ್ ಬಂದಾಗ ತಾವು ಕ್ಲಬ್‌ನಲ್ಲಿ ಇರಲಿಲ್ಲ. ನಂತರ ಆತ ಕ್ಲಬ್‌ನಿಂದ ಸ್ವಲ್ಪ ದೂರದಲ್ಲಿ ಸರ್ವೀಸ್ ರಸ್ತೆಯಲ್ಲಿ ಸ್ಕೂಟರ್ ನಿಲ್ಲಿಸಿಕೊಂಡು ಕುಡಿಯುತ್ತಾ ಕೂತಿದ್ದನ್ನು, ಕ್ಲಬ್‌ನ ಗಜ ಎಂಬುವರು ನೋಡಿದ್ದಾರೆ. ಅದೇ ವೇಳೆ ಕ್ಲಬ್ ಹಿಂಬದಿ ವಾಸವಿರುವ ಸೂರ್ಯ ಹಾಗೂ ಮತ್ತೋರ್ವ ಸ್ಕೂಟರ್ ಸಮೇತ ಶಂಕರ್‌ನನ್ನು ಕರೆದೊಯ್ದಿದ್ದಾರೆ ಎಂದು ಶಂಕರ್‌ನ ಪತ್ನಿ ಲಕ್ಷ್ಮಿಗೆ ರವಿ ತಿಳಿಸಿದ್ದಾರೆ. ಅಂದು ಶಂಕರ್‌ನನ್ನು ಕರೆದೊಯ್ದ ಸೂರ್ಯ ಹಾಗೂ ಆತನ ಸ್ನೇಹಿತ, ಶಂಕರ್‌ನ ತಲೆ ಮೇಲೆ ಯಾವುದೋ ಆಯುಧದಿಂದ ಹೊಡೆದು ಹತ್ಯೆ ಮಾಡಿ, ಶವವನ್ನು ದೊಡ್ಡ ಮೋರಿಯಲ್ಲಿ ಬಿಸಾಡಿ ಸ್ಕೂಟರ್ ಹಾಗೂ ಆತನ ಬಳಿ ಇದ್ದ ಹಣ ದೋಚಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕುವೆಂಪುನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಎಟಿ ಅಂಡ್ ಎಸ್ ಗುತ್ತಿಗೆ ನೌಕರನಿಗೆ 4.8 ಲಕ್ಷ 'ಆನ್‌ಲೈನ್ ವಂಚನೆ'

ಮೈಸೂರು, ಫೆ. 8–ವೆಬ್‌ಸೈಟ್‌ವೊಂದರಲ್ಲಿ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟಾಗುತ್ತದೆ ಎಂದು ನಂಬಿ, ನಂಜನಗೂಡಿನ ಎಟಿ ಅಂಡ್ ಎಸ್ ಕಾರ್ಖಾನೆಯ ಗುತ್ತಿಗೆ ನೌಕರ 4.83 ಲಕ್ಷ ರೂ. ಕಳೆದುಕೊಂಡಿದ್ದಾನೆ. ನಂಜನಗೂಡು ತಾಲೂಕು ಬಿಳಿಗೆರೆ ಗ್ರಾಮದ ನಿವಾಸಿ ಬಿ.ಎನ್. ತ್ರಿನೇಶ ಆರಾಧ್ಯ(34) ಹಣ ಕಳೆದುಕೊಂಡವರಾಗಿದ್ದು, ಇವರು 2022ರ ಸೆಪ್ಟೆಂಬರ್ 27ರಂದು ಗೂಗಲ್‌ನಲ್ಲಿ ಸರ್ಚ್ ಮಾಡುತ್ತಿದ್ದಾಗ ಜಿಡಿಎ ಎಂಬ ವೆಬ್‌ಸೈಟ್‌ನಲ್ಲಿ ನೀವು ಹಣ ಹೂಡಿಕೆ ಮಾಡಿದರೆ ದುಪ್ಪಟ್ಟಾಗುತ್ತದೆ ಎಂಬ ಮಾಹಿತಿ ಲಭ್ಯವಾಗಿತ್ತು. ಸದರಿ ವೆಬ್‌ಸೈಟ್‌ಗೆ ಅವರು ಲಾಗಿನ್ ಆದಾಗ 8000 ರೂ. ಹೂಡಿಕೆ ಮಾಡಿದರೆ 30 ದಿನದಲ್ಲಿ 21,600 ರೂ. ದೊರೆಯುತ್ತದೆ ಎಂದಿತ್ತು. ಇದನ್ನು ನಂಬಿದ ಅವರು, 2022ರ ನ.5ರಿಂದ ಡಿ.30ರವರೆಗೆ 4,83,700 ರೂ. ಹೂಡಿಕೆ ಮಾಡಿದ್ದರು. ಆದರೆ ನಿಗದಿತ ವೇಳೆಗೆ ತನ್ನ ಖಾತೆಗೆ ಲಾಭದ ಹಣ ಸಂದಾಯವಾಗದೇ ಇರುವುದರಿಂದ ಸಂಶಯಗೊಂಡು, ಹೂಡಿಕೆ ಬಗ್ಗೆ ವಾಟ್ಸಾಪ್ ಮೂಲಕ ತ್ರಿನೇಶ ಆರಾಧ್ಯ, ತನ್ನ ಜೊತೆ ಚಾಟ್ ಮಾಡುತ್ತಿದ್ದ ಜೋಡೆ ವಿಲಿಯಮ್ಸ್ ಎಂಬಾಕೆಯನ್ನು ಈ ಬಗ್ಗೆ ಜ.2ರಂದು ವಿಚಾರಿಸಿದಾಗ, ಆಕೆ ಸ್ವಲ್ಪ ಕಾಯುವಂತೆ ಮೆಸೇಜ್ ಮಾಡಿದ್ದಾಳೆ. ಈ ನಡುವೆ ತ್ರಿನೇಶ್ ಹೂಡಿಕೆ ಮಾಡುತ್ತಿದ್ದ ವೆಬ್‌ಸೈಟ್ ಲಾಕ್ ಆಗಿದೆ. ಕೊನೆಗೆ ತಾನು ನಕಲಿ ವೆಬ್‌ಸೈಟ್‌ನಲ್ಲಿ ಹಣ ಹೂಡಿಕೆ ಮಾಡಿ ಮೋಸ ಹೋಗಿರುವುದನ್ನು ಮನವರಿಕೆ ಮಾಡಿಕೊಂಡ ತ್ರಿನೇಶ್, ಈ ಸಂಬಂಧ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಆದಿಚುಂಚನಗಿರಿ ವಿದ್ಯಾಸಂಸ್ಥೆ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಮತ್ತೊಬ್ಬರ ಕಣ್ಣಲ್ಲಿ ನೀರು ಬರಿಸದಿದ್ದರೆ ದೇವನಿಗೆ ದಾಸನಾಗಲು ಸಾಧ್ಯ



ಹೆಚ್.ಡಿ.ಕೋಟೆ, ಫೆ.8– ಮತ್ತೊಬ್ಬರ ಕಣ್ಣೀರಿಗೆ ಕಾರಣವಾಗದಂತೆ ತೊಡಗಿಸಿಕೊಂಡಾಗ ಮಾತ್ರ ದೇವನಿಗೆ ದಾಸನಾಗಲು ಸಾಧ್ಯ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ: ನಿರ್ಮಲಾನಂದನಾಥ ಸ್ವಾಮೀಜಿ ತಿಳಿಸಿದ್ದಾರೆ.

ಪಟ್ಟಣದ ಆದಿಚುಂಚನಗಿರಿ ವಿದ್ಯಾಸಂಸ್ಥೆಯಲ್ಲಿ ಆಯೋಜಿಸಿದ್ದ ಪದವಿ ವಿದ್ಯಾರ್ಥಿಗಳ ಪದವಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ನೀಡಿ ಅವರು ಮಾತನಾಡಿದರು. ನನ್ನನ್ನು ನಾನು ಕಂಡುಕೊಳ್ಳುವುದು ಬದುಕಿನ ಉದ್ದೇಶ, ಇದನ್ನು ಯಾವುದೇ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಹೇಳಿಕೊಟ್ಟಿಲ್ಲ. ನಿನ್ನನ್ನು ನೀನು ಪಡೆದುಕೊಳ್ಳಬೇಕಾದರೆ, ನಿನ್ನನ್ನು ನೀನು ಕಳೆದುಕೊಳ್ಳಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದ ಅವರು, ಶಿಕ್ಷಣ ಪ್ರಗತಿಯ ಸಂಕೇತವಾಗಿದ್ದು ಪದವಿ ನಮ್ಮನ್ನು ಗುರುತಿಸುವುದಿಲ್ಲ, ಬದಲಾಗಿ ನಡತೆ ನಮ್ಮನ್ನು ಗುರುತಿಸುತ್ತದೆ ಎಂದು ತಿಳಿಸಿದರು.

ಪುಸ್ತಕ ಬಿಡುಗಡೆ ಸಂಸ್ಥೆಯ ಆಡಳಿತಾಧಿಕಾರಿ ರಚಿಸಿರುವ ಕಪಿಲೆಯ ನಾಡಿನಲ್ಲಿ ಶ್ರೀ ಗುರು ಎಂಬ ಬಾಲ ಗಂಗಾಧರ ಸ್ವಾಮೀಜಿ ಅವರ ಕುರಿತು ಬರೆದಿರುವ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು.

ನಂತರ ಪುಸ್ತಕದ ಕುರಿತು ವಿಶ್ರಾಂತ ಕುಲಪತಿ ಡಾ.ಎನ್.ಎಸ್. ರಾಮೇಗೌಡ ಮಾತನಾಡಿ, ಈ ಪುಸ್ತಕವು ಸ್ವಾಮೀಜಿಗಳು ಮಾಡಿರುವ ಸಾಧನೆಗಳ ಕುರಿತಾಗಿದ್ದು, ಡಾಕ್ಟರೇಟ್ ಅಧ್ಯಯನಕ್ಕೂ ಬಳಸಬಹುದು ಎಂದರು.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯ ಪದವಿ ಪ್ರದಾನ ಸಮಾರಂಭದ ಅಂಗವಾಗಿ ವಿದ್ಯಾರ್ಥಿಗಳಿಂದ ಅದ್ದೂರಿ ಮೆರವಣಿಗೆ ನಡೆಯಿತು.

ಕಾಲೇಜು ವಿದ್ಯಾರ್ಥಿಗಳಿಂದ ನಡೆದ ಮೆರವಣಿಗೆಯು ಪಟ್ಟಣದ ಮುಖ್ಯ ರಸ್ತೆ ಮೂಲಕ ಕಾಲೇಜಿನವರೆಗೆ ಸಾಗಿತು. ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದ ಸ್ವಾಮೀಜಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಶಾಖಾ ಮಠದ ಸೋಮೇಶ್ವರ ಸ್ವಾಮೀಜಿ, ಆಡಳಿತಾಧಿಕಾರಿ ಪ್ರೊ. ಬಸವೇಗೌಡ, ಮೈವಿವಿಯ ರಿಜಿಸ್ಟ್ರಾರ್ ಆರ್.ಶೈಲಜಾ, ಕುಲಪತಿ ಪ್ರೊ. ಹೆಚ್. ರಾಜಶೇಖರ್, ಶ್ರೀಕಂಠಸ್ವಾಮಿ, ವೈ.ಕೆ. ಪವಿತ್ರ ಕಾಲೇಜಿನ ಪ್ರಾಂಶುಪಾಲ ವೆಂಕಟೇಶ್, ದೈಹಿಕ ಶಿಕ್ಷಕ ಕಲ್ಲೇಶ್ ಗೌಡ, ಪ್ರಕಾಶ್, ಬೈರೇಗೌಡ, ರವಿಗೌಡ, ನಂದಿನಿ ಹಾಜರಿದ್ದರು.

ವಿನಾಯಕ ಕಾಲೋನಿಗೆ ಸಿಮೆಂಟ್ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



ತಿ.ನರಸೀಪುರ, ಫೆ. 8– ಪಟ್ಟಣದ ಪುರಸಭಾ ವ್ಯಾಪ್ತಿಯ ವಿನಾಯಕ ಕಾಲೋನಿಯಲ್ಲಿ ಸಿಮೆಂಟ್ ರಸ್ತೆ ಹಾಗೂ ಚರುಂಡಿ ಕಾಮಗಾರಿಗೆ ಶಾಸಕ ಎಂ.ಅಶ್ವಿನ್‌ಕುಮಾರ್ ಭೂಮಿ ಪೂಜೆ ನೆರವೇರಿಸಿದರು. ಕೊಳಚೆ ನಿರ್ಮೂಲನಾ ಮಂಡಳಿಯ ಅನುದಾನದಡಿ 20 ಲಕ್ಷ ರೂ. ವೆಚ್ಚದಲ್ಲಿ ಕಾಲೋನಿಯಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಚರಂಡಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಕಾಮಗಾರಿಯಲ್ಲಿ ಗುಣಮಟ್ಟವನ್ನು ಕಾಯ್ದುಕೊಂಡು ಉತ್ತಮ ರಸ್ತೆ ಹಾಗೂ ಚರಂಡಿ ನಿರ್ಮಿಸಿಕೊಡುವಂತೆ ಅವರು ತಿಳಿಸಿದರು

ಪುರಸಭಾಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ವಾರ್ಡಿನ ಸದಸ್ಯೆ ತೇಜಸ್ವಿನಿ ರಾಜು, ಮುಖ್ಯಾಧಿಕಾರಿ ಬಸವರಾಜು, ಪುರಸಭಾ ಇಂಜಿನಿಯರ್ ಸಿದ್ದಪ್ಪ, ಪುರಸಭಾ ಸದಸ್ಯ ತುಂಬಲ ಪ್ರಕಾಶ್, ಮುಖಂಡರಾದ ಸಿ.ಬಿ. ಹುಂಡಿ ಚಿನ್ನಸ್ವಾಮಿ, ಕೆ.ಅಶ್ವಿನ್, ರಾಜು, ನಾಗರಾಜು, ಸಂಪತ್ ಹಾಗೂ ಬಡಾವಣೆಯ ಮುಖಂಡರು ಹಾಜರಿದ್ದರು.

ಸರಗೂರಲ್ಲಿ ಶ್ರೀ ಸವಿತಾ ಮಹರ್ಷಿ ಜಯಂತಿ ಆಚರಣೆ



ಸರಗೂರು, ಫೆ.8– ತಾಲೂಕು ಆಡಳಿತ, ಸವಿತಾ ಸಮಾಜದಿಂದ ತಾಲೂಕು ಕಚೇರಿಯಲ್ಲಿ ಬುಧವಾರ ತಹಶೀಲ್ದಾರ್ ಚಲುವರಾಜು ಅವರ ಅಧ್ಯಕ್ಷತೆಯಲ್ಲಿ ಶ್ರೀ ಸವಿತಾ ಮಹರ್ಷಿ ಜಯಂತಿ ಆಚರಿಸಲಾಯಿತು. ಶ್ರೀ ಸವಿತಾ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಮಲ್ಲೇಶ್ ಮಾತನಾಡಿ, ಇಂದಿನ ಯುವ ಪೀಳಿಗೆ ಸವಿತಾ ಮಹರ್ಷಿಗಳ ಆದರ್ಶ, ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವ ಮೂಲಕ ಅಭಿವೃದ್ಧಿ ಹೊಂದಬೇಕು. ಶಿಕ್ಷಣ ಪಡೆಯುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು ಎಂದು ತಿಳಿಸಿದರು.

"ಜಗತ್ತು ರಕ್ಷಿಸಿ ನಡೆಸುವವನೇ ಸವಿತಾ ಎಂಬುದು ಪುರಾಣಗಳಲ್ಲಿ ಉಲ್ಲೇಖವಾಗಿದೆ. ಸವಿತಾ ಮಹರ್ಷಿಗಳು ಶಿವನ ಕಣ್ಣಿನಿಂದ ಜನಿಸಿದವರು. ಮನುಷ್ಯ, ಪಾಪ, ಕರ್ಮ ಕಳೆಯಲು ತಲೆ ಕೂದಲು ನಿವಾರಣೆ ಮಾಡುವುದು. ಆಯುರ್ವೇದದಿಂದ ರೋಗ ಮುಕ್ತವಾಗಿಸಿ ಮಾನವನನ್ನಾಗಿ ಮಾಡುವುದು ಮಹರ್ಷಿ ನೀಡಿದ ಕೊಡುಗೆಯಾಗಿದೆ" ಎಂದು ಅವರು ಹೇಳಿದರು.

ಸವಿತಾ ಸಮಾಜದ ತಾಲೂಕು ಅಧ್ಯಕ್ಷ ನರಸಿಂಹ ಮಾತನಾಡಿದರು. ತಹಶೀಲ್ದಾರ್ ಚಲುವರಾಜು ಮಾತನಾಡಿ, 18 ವರ್ಷ ತುಂಬಿದವರು ನೂತನವಾಗಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಸಿಕೊಳ್ಳಬೇಕು. ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಭಾರತದ ಪ್ರಜೆಯಾಗಿದ್ದು, ಇನ್ನೂ ಮತದಾರರ ನೋಂದಣಿ ಮಾಡಿಸಿಕೊಳ್ಳದವರು ಕೂಡಲೇ ಮತದಾರರ ಗುರುತಿನ ಚೀಟಿ ಮಾಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸಮಾಜದ ತಾಲೂಕು ಅಧ್ಯಕ್ಷ ನರಸಿಂಹ, ಟೌನ್ ಅಧ್ಯಕ್ಷ ಬಸವರಾಜು, ಗೌರವಾಧ್ಯಕ್ಷ ದಡದಹಳ್ಳಿ ಶ್ರೀನಿವಾಸ್, ಕಾರ್ಯದರ್ಶಿ ಪ್ರಭಾಕರ್, ಖಜಾಂಚಿ ಕಾಳಶೆಟ್ಟಿ, ಸಹ ಕಾರ್ಯದರ್ಶಿ ನಿಂಗರಾಜು, ಮಹೇಶ್, ಜಯರಾಮ್, ಗೋವಿಂದರಾಜ್, ಸರ್ಕಲ್ ಇನ್ಸ್‌ಪೆಕ್ಟರ್ ಎಂ.ಲಕ್ಷ್ಮಿಕಾಂತ, ಪಿಎಸ್ಐ ಶ್ರವಣ ದಾಸ ರೆಡ್ಡಿ, ಗ್ರೇಡ್–2 ತಹಶೀಲ್ದಾರ್ ಪರಶಿವಮೂರ್ತಿ, ಡಿಟಿ ಸುನೀಲ್, ಮುಜೀಬ್, ಹೇಮಂತ್ ಸೇರಿದಂತೆ ಸಮಾಜ ಬಂಧುಗಳು ಹಾಜರಿದ್ದರು.

ಕುರುಬ ಸಮಾಜದ ಶ್ರೇಯೋಭಿವೃದ್ಧಿಗೆ ಶ್ರಮಿಸುವೆ



ಹುಣಸೂರು, ಫೆ.8– ತಾಲೂಕಿನ ಕುರುಬ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದಾಗಿ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ನಿಯೋಜಿತ ಅಭ್ಯರ್ಥಿ ಜಿ.ಡಿ. ಹರೀಶ್ ಗೌಡ ಭರವಸೆ ನೀಡಿದರು.

ನಗರದ ಕನಕಭವನದಲ್ಲಿ ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ವತಿಯಿಂದ ಆಯೋಜಿಸಿದ್ದ ಹರೀಶ್‌ಗೌಡರ ಹುಟ್ಟುಹಬ್ಬ ಆಚರಣೆ ಮತ್ತು ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆಗಳನ್ನು ಸ್ವೀಕರಿಸಿ ಮಾತನಾಡಿದರು.

ತಿಂಗಳ ಹಿಂದೆ ಕನಕ ಜಯಂತಿಯಂದು ಸಮುದಾಯದ ಮುಖಂಡರು ಕೋರಿದಂತೆ ಭವನಕ್ಕೆ ಅಗತ್ಯವಾದ ಪರಿಕರಗಳನ್ನು ನೀಡಿದ್ದೇನೆ. ನನ್ನ ತಂದೆ ಜಿ.ಟಿ.ದೇವೇಗೌಡರು ಈ ಭವನ ನಿರ್ಮಾಣಕ್ಕಾಗಿ ಒಂದು ಕೋಟಿ ರೂ.ಗಳ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಿಸಿ 25 ಲಕ್ಷ ರೂ.ಗಳ ಮೊದಲ ಹಂತದ ಚೆಕ್ ವಿತರಿಸಿದ್ದರು. ತಂದೆಯಂತೆ ನಾನು ಕುರುಬ ಸಮುದಾಯದೊಂದಿಗೆ ಸತತ ಒಡನಾಟ ಹೊಂದಿದ್ದು, ಮುಂದಿನ ದಿನಗಳಲ್ಲೂ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ನನ್ನಲ್ಲಿ ಜಾತಿ ಮತಗಳ ಲೆಕ್ಕಾಚಾರವಿಲ್ಲ, ನಾನು ಎಲ್ಲರನ್ನು ಒಳಗೊಂಡು ಕೆಲಸ ಮಾಡಲು ಇಚ್ಛಿಸುತ್ತೇನೆ. ಕುರುಬ ಸಮಾಜದೊಂದಿಗೆ ನಮ್ಮ ಕುಟುಂಬದ ಅವಿನಾಭಾವ ಸಂಬಂಧವಿದ್ದು, ಅದಕ್ಕೆ ಧಕ್ಕೆ ಬರದಂತೆ ಕಾರ್ಯ ನಿರ್ವಹಿಸುವೆ ಎಂದು ಅವರು ಹೇಳಿದರು.

ಸಮುದಾಯದ ಮುಖಂಡರ ನಡುವೆ ಕೇಕ್ ಕತ್ತರಿಸಿ, ಹುಟ್ಟುಹಬ್ಬ ಆಚರಿಸಿಕೊಂಡರು. ಸಮಾರಂಭದಲ್ಲಿ ತಾಲೂಕು ಅಧ್ಯಕ್ಷ ಡಿ.ಕೆ.ಕುಲ್ಲೇಗೌಡ, ಜಿ.ಪಂ. ಮಾಜಿ ಸದಸ್ಯ. ಎಂ.ಬಿ. ಸುರೇಂದ್ರ, ಮುಖಂಡರಾದ ಎ.ಪಿ.ಸ್ವಾಮಿ, ಬಸವರಾಜು, ಕಣಗಾಲು ರಾಮೇಗೌಡ, ಕಮಲಮ್ಮ, ವೆಂಕಟರಮಣ, ತಟ್ಟೆಕೆರ ಶ್ರೀನಿವಾಸ್, ಗ್ರಾಪಂ ಅಧ್ಯಕ್ಷ ದೇವರಾಜು ಅಂಗಟಹಳ್ಳಿ, ಮೈಲಾಂಬೂರು ಕೃಷ್ಣ ಮುಂತಾದವರು ಭಾಗವಹಿಸಿದ್ದರು.

ಇದೇ ವೇಳೆ ಮೈಲಾಂಬರಿನ ಗುಡ್ಡರ ಕುಣಿತಕ್ಕೆ ಜಿ.ಡಿ.ಹರೀಶ್ ಗೌಡ ಹೆಜ್ಜೆ ಹಾಕಿ, ಎಲ್ಲರ ಗಮನ ಸೆಳೆದರು.

ನಾಳೆ ಹರದೂರಲ್ಲಿ ವೀರಭದ್ರೇಶ್ವರ ಭದ್ರಕಾಳಿ ದೇವಾಲಯ ಉದ್ಘಾಟನೆ



ಬೆಟ್ಟದಪುರ, ಫೆ.8– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಹರದೂರು ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ದೇವಾಲಯ ಸಮಿತಿ ಮತ್ತು ಭಕ್ತರ ಸಹಕಾರದೊಂದಿಗೆ ನಿರ್ಮಾಣಗೊಂಡಿರುವ ಶ್ರೀ ವೀರಭದ್ರೇಶ್ವರ ಮತ್ತು ಭದ್ರಕಾಳಮ್ಮ ದೇವಿ ದೇವಾಲಯದ ಜೀರ್ಣೋದ್ಧಾರ ಮತ್ತು ಪುನರ್ ಪ್ರತಿಷ್ಠಾಪನಾ ಮಹೋತ್ಸವ ಕಾರ್ಯಕ್ರಮ ಫೆ.10 ರಂದು ನಡೆಯಲಿದೆ.

ಶುಕ್ರವಾರ ಬೆಳಗ್ಗೆ 12 ಗಂಟೆಗೆ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗಡೆ, ಶ್ರೀ ಚನ್ನಬಸವ ದೇಶಿ ಕೇಂದ್ರ ಸ್ವಾಮಿಗಳ ಸಮ್ಮುಖದಲ್ಲಿ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಗ್ರಾಮದ ಪ್ರತಿ ಬೀದಿಗಳಲ್ಲಿ ನಡೆಯಲಿದೆ. ಭಕ್ತಾದಿಗಳಿಗೆ ಅನ್ನದಾನವನ್ನು ಸಹ ಏರ್ಪಡಿಸಲಾಗಿದೆ. ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ದೇವಾಲಯ ಸಮಿತಿಯ, ಅಧ್ಯಕ್ಷರು ಉಪಾಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ದಿ.ದೇವರಾಜ ಅರಸು ಅಭಿಮಾನಿಗಳ ಸಭೆ

ಹುಣಸೂರು, ಫೆ.8– ಮುಂಬರುವ 2023ರ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ದಿ.ದೇವರಾಜ ಅರಸು ಅಭಿಮಾನಿಗಳ ಸಭೆಯು ಅಂಬೇಡ್ಕರ್ ಭವನದಲ್ಲಿ ಅಧ್ಯಕ್ಷ ಬಿಳಿಕೆರೆ ರಾಜು ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಅಧ್ಯಕ್ಷ ರಾಜು ಮಾತನಾಡಿ, ಬಡವರ ಬಗ್ಗೆ ಕಾಳಜಿ ಇಟ್ಟುಕೊಂಡು ಸರ್ಕಾರಿ ಸವಲತ್ತು ಮತ್ತು ಯೋಜನೆಗಳು ಸಾರ್ವಜನಿಕವಾಗಿ ಸಾಮಾನ್ಯ ಜನರಿಗೆ ತಲುಪಿ ಸುವ ಆಸಕ್ತಿ ಹೊಂದಿದವರಿಗೆ ಮುಂಬರುವ ದಿನಗಳಲ್ಲಿ ಅರಸು ಬಳಗ ಸಕ್ರಿಯವಾಗಿ ಬೆಂಬಲಿಸಲಿದೆ ಎಂದರು. ಸಭೆಯಲ್ಲಿ ಆರ್.ಸಿ.ಎನ್ ಮಾಲೀಕ ವಿ.ಪಿ.ಸಾಯಿನಾಥ್, ಬಿಳಿಕೆರೆ ಅಣ್ಣಯ್ಯನಾಯಕ, ಚೌಡನಾಯಕ, ಜಟ್ಟಿಗೌಡ, ಕುರುಬ ಸಮಾಜದ ಲಕ್ಷ್ಮಣ, ಪುಟ್ಟಚೆಲುವಯ್ಯ, ಹಗರನಹಳ್ಳಿ ಕಾಂತರಾಜು, ಮಾಜಿ ಗ್ರಾಪಂ ಅಧ್ಯಕ್ಷರಾದ ಸಣ್ಣಸ್ವಾಮಿ, ರಂಗಯ್ಯನ ಕೊಪ್ಪಲು ನಾಗ, ಮರೂರ್ ಹಾಗೂ ಅರಸು ಅಭಿಮಾನಿಗಳು ಭಾಗವಹಿಸಿದ್ದರು.

ಕ್ರಿಕೆಟ್ ಪಂದ್ಯ: ಶಂಖಹಳ್ಳಿ ತಂಡ ಜಯಬೇರಿ

ಗ್ರಾಮದೇವತೆ ಹಬ್ಬದ ಅಂಗವಾಗಿ ನಡೆದ ಪಂದ್ಯಾವಳಿ



ಸರಗೂರು, ಫೆ.8– ಸರಗೂರು ತಾಲೂಕಿನ ಶಂಖಹಳ್ಳಿ ಗ್ರಾಮದಲ್ಲಿ ಗ್ರಾಮದೇವತೆಯಾದ ಶಿವಶರಣೆ ಶಂಖಮ್ಮ ದೇವಾಲಯದ ಗೋಪುರ ಉದ್ಘಾಟನೆ ಸಮಾರಂಭದ ಅಂಗವಾಗಿ ಜೆಡಿಎಸ್ ಯುವ ಮುಖಂಡರಾದ ಜಯಪ್ರಕಾಶ್ ಅಭಿಮಾನಿ ಬಳಗದ ವತಿಯಿಂದ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿತ್ತು. ಈ ವೇಳೆ ಗ್ರಾಮದ ಯುವಕರ ತಂಡ ಜಯ ಗಳಿಸಿ ಪ್ರಥಮ ಸ್ಥಾನ ಪಡೆದುಕೊಂಡಿದೆ. ಪಂದ್ಯಾವಳಿಯಲ್ಲಿ ಒಟ್ಟು 14 ತಂಡಗಳು ಭಾಗವಹಿಸಿದ್ದವಲ್ಲದೆ, ಸಾಗರೆ ಯುವಕರ ತಂಡ ಹಾಗೂ ಶಂಖಹಳ್ಳಿ ಯುವಕರ ತಂಡ ಫೈನಲ್ ಹಂತ ತಲುಪಿದ್ದವು. ಈ ಪಂದ್ಯದಲ್ಲಿ ಶಂಖಹಳ್ಳಿ ಯುವಕರ ತಂಡ ಪಂದ್ಯಾವಳಿಯಲ್ಲಿ ಜಯ ಗಳಿಸಿ ಪ್ರಥಮ ಸ್ಥಾನ ತನ್ನದಾಗಿಸಿಕೊಂಡಿದೆ.

ಇನ್ನು, ಪಂದ್ಯಾವಳಿಯಲ್ಲಿ ವಿಜೇತರಾದ ತಂಡಕ್ಕೆ ಜೆಡಿಎಸ್ ಯುವ ಮುಖಂಡರಾದ ಜಯಪ್ರಕಾಶ್ ಪ್ರಶಸ್ತಿ ಹಾಗೂ ಬಹುಮಾನ ವಿತರಿಸಿದರು. ಈ ವೇಳೆ ಮಾತನಾಡಿ, ಯುವಕರು ಓದಿನ ಜೊತೆಗೆ ಕ್ರೀಡೆಗಳಲ್ಲೂ ಭಾಗವಹಿಸುವ ಮೂಲಕ ತಮ್ಮ ಪ್ರತಿಭೆಯನ್ನು ಹೊರತರುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಗ್ರಾಮದ ಗುಡಿಗೌಡರು, ಯಜಮಾನರು, ಗ್ರಾಪಂ ಸದಸ್ಯರು, ಮಾಜಿ ಸದಸ್ಯರು, ಯುವಕರು ಹಾಗೂ ಶಂಖಹಳ್ಳಿ ಹಾಗೂ ಅಕ್ಕಪಕ್ಕದ ಗ್ರಾಮಗಳ ಯುವಕರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಮಡಿವಾಳ ಸಮುದಾಯಕ್ಕೆ ಹೆಚ್ಚಿನ ಮೀಸಲಾತಿ ಸೌಲಭ್ಯ ಕಲ್ಪಿಸಿ



ತಿ.ನರಸೀಪುರ, ಫೆ.8– ಆರ್ಥಿಕವಾಗಿ ಹಿಂದುಳಿದ ಮಡಿವಾಳ ಸಮುದಾಯಕ್ಕೆ ಸರ್ಕಾರ ಹೆಚ್ಚಿನ ಪ್ರಮಾಣದ ಮೀಸಲಾತಿ ಸೌಲಭ್ಯ ಕಲ್ಪಿಸಿ ಅನುಕೂಲ ಮಾಡಿಕೊಡಬೇಕೆಂದು ಮೈಸೂರು ಜಿಲ್ಲಾ ಮಡಿವಾಳ ಸಂಘದ ಕಾರ್ಯದರ್ಶಿ ಜಯಲಕ್ಷ್ಮೀ ಮನವಿ ಮಾಡಿದ್ದಾರೆ.

ಪಟ್ಟಣದ ಪುರಸಭಾ ವ್ಯಾಪ್ತಿಯ ಬೈರಾಪುರದಲ್ಲಿ ವೀರ ಮಡಿವಾಳ ಮಾಚೀದೇವ ಸಂಘದ ವತಿಯಿಂದ ನಡೆದ ಮಡಿವಾಳ ಮಾಚಿದೇವರ ಜಯಂತಿ ಹಾಗೂ ಸಂಘದ ನಾಮಫಲಕ ಅನಾವರಣಗೊಳಿಸಿ ಅವರು ಮಾತನಾಡಿದರು. ಮಡಿವಾಳ ಸಮುದಾಯ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿ ರಾಜಕೀಯ ಅಧಿಕಾರ ಪಡೆಯಲು ಸಾಧ್ಯವಿಲ್ಲ, ಶೈಕ್ಷಣಿಕವಾಗಿ ಕೂಡ ಸಮುದಾಯ ಸಾಕಷ್ಟು ಪ್ರಗತಿ ಕಾಣಬೇಕಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಇಂತಹ ಸಮುದಾಯಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುವಂತೆ ಅವರು ಮನವಿ ಮಾಡಿದರು.

ಸಂಘದ ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ಸಾಕಮ್ಮ, ಪ್ರಗತಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಬೈರಾಪುರಗುಂಡಶೆಟ್ಟಿ, ಮುಖಂಡರಾದ ಸಿದ್ದಶೆಟ್ಟಿ ರಾಜು, ಕೆಂಪಣ್ಣ, ಬಸವಯ್ಯ, ನಾಗರಾಜು, ಮಂಜು, ಪ್ರಸಾದ್, ಜಿ.ಮಹದೇವ್, ಶಂಭುಶೆಟ್ಟಿ, ಸಿದ್ದಶೆಟ್ಟಿ, ನಟರಾಜ್. ಆನಂದ. ವಿನಯ್, ನಂಜುಂಡ, ಶಾಮು, ಆಕಾಶ್, ಪ್ರಾಶ, ಭಾಗವಹಿಸಿದ್ದರು.

ನ್ಯಾಕ್ ಪ್ರಕ್ರಿಯೆಗೆ ಒಳಪಟ್ಟ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು

ಕಾಲೇಜಿನಲ್ಲಿ ಸಿಹಿ ಹಂಚಿ ಸಂಭ್ರಮಾಚರಣೆ, ವಿಜಯೋತ್ಸವ



ಕೆ.ಆರ್.ನಗರ, ಫೆ.8– ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಮೈಸೂರು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ 67 ಸರ್ಕಾರಿ ಕಾಲೇಜುಗಳ ಪೈಕಿ ಮೊದಲನೇ ಸ್ಥಾನ ಮತ್ತು ಕರ್ನಾಟಕ ರಾಜ್ಯದ 412 ಕಾಲೇಜುಗಳಲ್ಲಿ 3ನೇ ಸ್ಥಾನ ಪಡೆದು 'ಎ' ಗ್ರೇಡ್ ಮೂಲಕ ನ್ಯಾಕ್ ಪ್ರಕ್ರಿಯೆಗೆ ಒಳಪಟ್ಟಿರುವುದರಿಂದ ಇಂದು ಕಾಲೇಜಿನಲ್ಲಿ ಸಿಹಿ ಹಂಚಿ ಸಂಭ್ರಮ ಆಚರಿಸಲಾಯಿತು.

ಪಟ್ಟಣದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಆಡಳಿತ ಮಂಡಳಿ ಶಿಕ್ಷಕರ ಜತೆ ವಿಜಯೋತ್ಸವ ಆಚರಿಸಿದ ನಂತರ ಶಾಸಕ ಸಾ.ರಾ.ಮಹೇಶ್ ಮಾತನಾಡಿ, ಪಟ್ಟಣಕ್ಕೆ ನನ್ನ ಅಧಿಕಾರದ ಅವಧಿಯಲ್ಲಿ ಮಹಿಳಾ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಿದ 11 ವರ್ಷಗಳಲ್ಲಿ ಮೈಸೂರು ವ್ಯಾಪ್ತಿಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯದಲ್ಲಿ 3ನೇ ಸ್ಥಾನ ಪಡೆದು ನ್ಯಾಕ್ ಪ್ರಕ್ರಿಯೆಗೆ ಒಳಪಟ್ಟಿರುವುದರಿಂದ ಕಾಲೇಜಿನ ಆಡಳಿತ ಮಂಡಳಿ ಮತ್ತು ಶಿಕ್ಷಕವೃಂದ, ವಿದ್ಯಾರ್ಥಿನಿಯರನ್ನು ಅಭಿನಂದಿಸುತ್ತೇನೆ ಎಂದರು.

ಕೆ.ಆರ್.ನಗರ ತಾಲೂಕಿನಲ್ಲಿ ಬಲಿಷ್ಠ ಸಮುದಾಯಗಳ ವಿದ್ಯಾರ್ಥಿಗಳು ಸೂಕ್ಷ್ಮಾತಿ ಸೂಕ್ಷ್ಮ ಸಮಾಜದ ಹೆಣ್ಣು ಮಕ್ಕಳಿಗೆ ಕಿರುಕುಳ ನೀಡುತ್ತಿದ್ದಾರೆ ಎಂಬ ನನ್ನ ಸ್ನೇಹಿತರೊಬ್ಬರ ಮನವಿಗೋಸ್ಕರ ಉತ್ತರ ಕರ್ನಾಟಕದ ಭಾಗಕ್ಕೆ ಸ್ಥಳಾಂತರವಾಗುತ್ತಿದ್ದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜನ್ನು ಇಲ್ಲಿಗೆ ತರಲಾಯಿತು ಎಂದರು.

ಕೇವಲ 2 ಕೊಠಡಿಗಳಲ್ಲಿ ಪ್ರಾರಂಭವಾದ ಕಾಲೇಜು ಇಂದು ಬೃಹತ್ ಕಟ್ಟಡದೊಂದಿಗೆ ಎಲ್ಲಾ ವ್ಯವಸ್ಥೆಯುಳ್ಳ ವೃತ್ತಿ ಪರ ಶಿಕ್ಷಣವನ್ನು ಬಿಟ್ಟು ಉಳಿದೆಲ್ಲ ಪದವಿ ಶಿಕ್ಷಣವನ್ನು ನೀಡಲಾಗುತ್ತಿದೆ ಹಾಗೂ ಈ ಕಾಲೇಜಿನ ಸುತ್ತ ಹೆಣ್ಣು ಮಕ್ಕಳ ರಕ್ಷಣೆಗೋಸ್ಕರ ತಡೆಗೋಡೆಯನ್ನು ನಿರ್ಮಿಸುವ ಮೂಲಕ ಕಾಲೇಜಿನ ಒಳಗೆ ಸಂಬಂಧಿಸಿದಲ್ಲದ ವ್ಯಕ್ತಿ ಒಳ ಪ್ರವೇಶಿಸದಂತೆ ನಿರ್ಬಂಧ ಹೇರಲಾಗುವುದೆಂದರು.

ಕಾಲೇಜು ನ್ಯಾಕ್ ಪ್ರಕ್ರಿಯೆಗೆ ಒಳಪಟ್ಟಿರುವುದರಿಂದ 5 ವರ್ಷಗಳ ಅವಧಿಯಲ್ಲಿ ಕೇಂದ್ರದಿಂದ ವರ್ಷಕ್ಕೆ 1 ಕೋಟಿಗೂ ಹೆಚ್ಚು ಅನುದಾನ ಇನ್ನಿತರ ಸೌಕರ್ಯಗಳ ಜತೆಗೆ ಕಾಲೇಜು ಸ್ವಾಯತ್ತತೆಯಿಂದ ಕರ್ತವ್ಯ ನಿರ್ವಹಿಸಬಹುದಾಗಿದೆ ಎಂದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಪುರಸಭಾ ಸದಸ್ಯ ಕೆ.ಪಿ.ಪ್ರಭುಶಂಕರ್, ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯ ಸಿದ್ದರಾಮೇಗೌಡ, ಪ್ರಾಂಶುಪಾಲ ವಿಜಯಕುಮಾರ್, ಕಾಲೇಜಿನ ಸದಸ್ಯ ಕಾರ್ಯದರ್ಶಿ ಕೆ.ಟಿ. ರಮೇಶ್ ಮಾತನಾಡಿದರು. ವೇದಿಕೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎ.ಆರ್.ಮದನ್‌ಕುಮಾರ್, ಪುರಸಭಾ ಸದಸ್ಯ ಉಮೇಶ್, ಆಡಳಿತ ಮಂಡಳಿಯ ಸದಸ್ಯರಾದ ಬಿ.ಎಂ.ನಾಗರಾಜು, ಪ್ರಕಾಶ್, ರೂಪಾಋಷಿಕೇಶ್, ಕೋಮಲ ಶಿವನಂಜಪ್ಪ, ಉಪನ್ಯಾಸಕರಾದ ಡಾ. ಸುನೀಲ್, ರಾಜು, ಸುರೇಶ್, ಶೃತಿ, ಭಾನುಪ್ರಕಾಶ್, ಕೋಕಿಲ, ವಿಜಯ್, ಸಿಬ್ಬಂದಿಗಳಾದ ಎಂ.ರಾಜು, ಸುರೇಶ್ ಸೇರಿದಂತೆ ವಿದ್ಯಾರ್ಥಿನಿಯರು ಹಾಜರಿದ್ದರು.

ಮೈಸೂರು ಚಳಿಗಾಲದ ರೇಸುಗಳು

2ನೇ ಎಕ್ಸ್‌ಟ್ರಾ ಡೇ, ಗುರುವಾರ 9-2-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಹಿಮಾಲಯ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಡಬಲ್ ಟ್ರಬಲ್ 2. ಐರಾನಿಕ್ ಹ್ಯೂಮರ್ 3. ಬೆಲ್ಲಿ ಬ್ರೀಸ್

II. ವಿಜಯವಾಡ ಪ್ಲೇಟ್ ಡಿ2–1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಮೆ ಡೌವ್ ಫ್ಲವರ್ 2. ಇಂಪಿರಿಯಸ್ 3. ಶಿವಾಲಿಕ ಸೌಂಡ್

III. ಬರ್ಡ್ ಸೆಂಚುರಿ ಪ್ಲೇಟ್– 1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 ಸ್ಪಿರಿಚ್ಯುಯಲ್ ಫೋಸ್ 2 ಸೆವೆಂತ್ ಸ್ಟಾರ್ 3 ಕ್ಯಾಲಿಫೋರ್ನಿಯಾ ಗೋಲ್ಡ್

IV. ವಿಜಯವಾಡ ಪ್ಲೇಟ್ ಡಿ1– 1600 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಕೊಯಾಟೆ ಗರ್ಲ್ 2. ಎನ್.ಆರ್.ಐ. ಪ್ಲಾನ್ 3. ವೈಟ್ ರಿವರ್

V. ವಿಕ್ಟರಿ ಜೋನ್ ಟ್ರೋಫಿ–1200 ಮೀ. 3 ವರ್ಷ (ಟರ್ಮ್ಸ್) ಮ.4.00ಕ್ಕೆ
1. ಮಿಸ್ಟಿಕ್ ಬಾಂಡ್ 2. ಅಂಕುಶ್ 3. ಅನುಶ್ ತುಬಾ

VI. ಪಟ್ಟದಕಲ್ಲು ಪ್ಲೇಟ್–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1 ಇಂಡಿಯನ್ ಪ್ಯಾಟ್ರಿಯಾಟ್ 2. ಪರ್ಫೆಕ್ಟ್ ಪರ್ಫೆಕ್ಟೊ 3. ಕಿಂಗ್ ಟಿ ಚಾಲಾ

VII. ಚಿತ್ರದುರ್ಗ ಪ್ಲೇಟ್– 1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಸಿಪ್ಪಿನಾ 2. ಕ್ರಿಮ್‌ಸನ್ ಫೈರ್ 3. ಕಂಟ್ರಿಸ್ ಲೈಟ್

ದಿನದ ಅತ್ಯುತ್ತಮ........................	: ಸಿಪ್ಪಿನಾ
ಡಬ್ಬಲ್........................	: ಮಿಸ್ಟಿಕ್ ಬಾಂಡ್, ಇಂಡಿಯನ್ ಪ್ಯಾಟ್ರಿಯಾಟ್
ಜಾಕ್‌ಪಾಟ್........................	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್........................	: 4, 5, 6 ಮತ್ತು 7
I ಟ್ರಿಬಲ್........................	: 2, 3 ಮತ್ತು 4
II ಟ್ರಿಬಲ್........................	: 5, 6 ಮತ್ತು 7
ಎಕ್ಸ್‌ಆಕ್ಸ್........................	: 1 ರಿಂದ 7

ಟಿಪ್‌ಸ್ಟರ್ ಪಿಜೆಸಿ

ಟಿ.ಸಿ.ನಂಜುಂಡಸ್ವಾಮಿ ನಿಧನ



ತಿ.ನರಸೀಪುರ, ಫೆ.8– ತಾಲೂಕಿನ ತೊಟ್ಟವಾಡಿ ಗ್ರಾಮದ ಸರಳ ಸಜ್ಜನಿಕೆಯ ವ್ಯಕ್ತಿತ್ವಕ್ಕೆ ಹೆಸರಾಗಿದ್ದ ಟಿ.ಸಿ.ನಂಜುಂಡಸ್ವಾಮಿ (85) ಬುಧವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಗುರುವಾರ (ಫೆ.9) ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬರಡನಪುರ ಮಹಾಂತೇಶ್ವರ ಮಠದ ಶ್ರೀ ಮಹಾಂತೇಶ್ವರ ಸ್ವಾಮಿಗಳ 34ನೇ ಪುಣ್ಯಾರಾಧನೆ

ಶ್ರೀ ಮಹಾಂತೇಶ್ವರ ಸ್ವಾಮಿಗಳು ತಮ್ಮ ಬದುಕನ್ನು ಸಮಾಜದ ಕಲ್ಯಾಣಕ್ಕೆ ಮುಡುಪಾಗಿಟ್ಟಿದ್ದರು

ಮೈಸೂರು, ಫೆ8(ಪಿಎಂ)–ಶ್ರೀ ಮಹಾಂತೇಶ್ವರ ಸ್ವಾಮಿಗಳು ತಮ್ಮ ಇಡೀ ಬದುಕನ್ನು ಸಮಾಜದ ಕಲ್ಯಾಣಕ್ಕೆ ಮುಡುಪಾಗಿಟ್ಟಿದ್ದರು ಎಂದು ಶ್ರೀ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಜಯಪುರ ಹೋಬಳಿಯ ಬರಡನಪುರ ಮಹಾಂತೇಶ್ವರ ಮಠದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಶ್ರೀ ಮಹಾಂತೇಶ್ವರ ಸ್ವಾಮಿಗಳ 34ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಭಕ್ತರ ಶ್ರೇಯೋಭಿವೃದ್ಧಿಗಾಗಿ ಮಠಮಾನ್ಯಗಳು ಆಧ್ಯಾತ್ಮಿಕ, ಧಾರ್ಮಿಕ ಮತ್ತು ಸಮಾಜಮುಖಿ ಸೇವಾ ಕಾರ್ಯಗಳನ್ನು ನಡೆಸುತ್ತಾ ಬಂದಿವೆ. ಅಂತೆಯೇ ಮಹಾಂತೇಶ್ವರ ಸ್ವಾಮಿಗಳು ಹಲವೆಡೆ ಸುತ್ತಿ ಲಿಂಗ ದೀಕ್ಷೆ ಪಡೆದು ಬರಡನಪುರ ಗ್ರಾಮದಲ್ಲಿ ಮಠ ಸ್ಥಾಪಿಸಿ, ಅತ್ಯಂತ ನಿಷ್ಠೆಯಿಂದ ತಮ್ಮ ಇಡೀ ಬದುಕನ್ನು ಸಮಾಜ ಕಲ್ಯಾಣಕ್ಕಾಗಿ ಮೀಸಲಿರಿಸಿದ್ದರು. ಅವರು ಸ್ಥಾಪಿಸಿದ ಈ ಮಠ ತನ್ನ ಸಮಾಜಮುಖಿ ಕೆಲಸಗಳನ್ನು ಮುಂದುವರೆಸಿ ದೊಡ್ಡ ಮಟ್ಟದಲ್ಲಿ ಬೆಳೆಯಬೇಕು ಎಂದು ತಿಳಿಸಿದರು.

ವಿರಕ್ತಮಠದ ಶ್ರೀಕಂಠಸ್ವಾಮೀಜಿ ಮಾತನಾಡಿ, ಜಗತ್ತಿನಲ್ಲಿ ಎಲ್ಲವನ್ನೂ ಮಾಡಿಸುವುದು ಪರಮಾತ್ಮ. ಕಾಯಕ ಜೀವಿಯಾಗಿ ಕಾಯಕ ಮಾಡುವುದೇ ಆ ಪರಮಾತ್ಮ ಮೆಚ್ಚುವ ಪರಮಕಾರ್ಯ ಎಂದು ಆಶೀರ್ವಚನ ನೀಡಿದರು.

ಕುಂದೂರು ಮಠದ ಶರಶ್ಚಂದ್ರ ಸ್ವಾಮೀಜಿ ಮಾತನಾಡಿ, ಉದಾತ್ತ ಮಾನವೀಯ ಮೌಲ್ಯಗಳು ಇಂದು ಮರೆಯಾಗುತ್ತಿದ್ದು, ಇದು ನಿಜಕ್ಕೂ ವಿಷಾದನೀಯ. ಲೋಕದ ಡೊಂಕನ್ನು ಬಿಟ್ಟು ತನ್ನನ್ನು ತಾನು ಶುದ್ಧೀಕರಿಸಿಕೊಳ್ಳಬೇಕು. ಕಾಯಕ ನಿಷ್ಠೆಗೆ ಒತ್ತು ಕೊಡಬೇಕು. ಮಠಗಳು ಧರ್ಮವನ್ನು ಉಳಿಸಿ, ಸಂಸ್ಕೃತಿಯನ್ನು ಉಳಿಸುವಂತಹ ಕೆಲಸ ಮಾಡುತ್ತಿವೆ ಎಂದು ಪ್ರವಚನ ನೀಡಿದರು. ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಬರಡನಪುರ ಮಹಾಂತೇಶ್ವರ ಮಠವು ಸಮಾಜಮುಖಿ ಸೇವೆಯಲ್ಲಿ ತೊಡಗಿ, ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವ ಮೂಲಕ ಆಡಂಬರದ ಖರ್ಚು ವೆಚ್ಚಗಳನ್ನು ತಗ್ಗಿಸಿದೆ. ಎಲ್ಲಾ ಕುಟುಂಬಗಳು ಸರಳ ವಿವಾಹಕ್ಕೆ ಆದ್ಯತೆ ನೀಡುವ ಮೂಲಕ ಅನಗತ್ಯ ಆರ್ಥಿಕ ಹೊರೆಯಿಂದ ತಪ್ಪಿಸಿಕೊಂಡು ಬದುಕು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿ ಬಸವರಾಜು, ಕೈಗಾರಿಕಾ ತರಬೇತಿ ಸಂಸ್ಥೆ ನಿರ್ದೇಶಕ ಹೆಚ್.ಎಸ್.ಪ್ರಸಾದ್ ಮತ್ತು ಅರ್ಕಾ ಫೌಂಡೇಷನ್‌ನ ಶ್ರೀನಿವಾಸ ಗುರೂಜಿ ಅವರನ್ನು ಸನ್ಮಾನಿಸಲಾಯಿತು. ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಅಲ್ಲದೆ, ದಾಸೋಹ ಏರ್ಪಡಿಸಲಾಗಿತ್ತು. ಬರಡನಪುರ ಮಹಾಂತೇಶ್ವರ ಮಠದ ಶ್ರೀ ಪರಶಿವಮೂರ್ತಿ ಸ್ವಾಮೀಜಿ, ಕನಕಪುರ ದೇಗುಲಮಠದ ಶ್ರೀ ಚೆನ್ನಬಸವ ಸ್ವಾಮೀಜಿ, ದೇವನೂರು ದಾಸೋಹ ಮಠದ ಶ್ರೀ ಮಹಾಂತ ಸ್ವಾಮೀಜಿ, ಮೈಸೂರು ನೀಲಕಂಠ ಮಠದ ಶ್ರೀ ಸಿದ್ದಮಲ್ಲ ಸ್ವಾಮೀಜಿ, ಸಾಲೂರು ಬೃಹನ್ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಹುಲ್ಲಹಳ್ಳಿ ವಿರಕ್ತಮಠದ ಶ್ರೀ ಚೆನ್ನಮಲ್ಲ ಸ್ವಾಮೀಜಿ, ಮುಡಿಗುಂಡ ವಿರಕ್ತಮಠದ ಶ್ರೀ ಶ್ರೀಕಂಠಸ್ವಾಮೀಜಿ, ಮಾದಹಳ್ಳಿ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವ ಸ್ವಾಮೀಜಿ, ಮೈಸೂರು ಪಂಚಗವಿಮಠದ ಶ್ರೀ ಗುರುಬಸವ ಲಿಂಗಸ್ವಾಮೀಜಿ, ದಂಡಿಕೆರೆ ಪಟ್ಟದಮಠ ಶ್ರೀ ಬಸವಲಿಂಗಸ್ವಾಮೀಜಿ, ಪುರಪಟ್ಟದ ಮಠ ಶ್ರೀ ಚಂದ್ರಶೇಖರ ಸ್ವಾಮೀಜಿ, ಸಂಗಮಕ್ಷೇತ್ರ ಕಾರ್ಯಸ್ವಾಮಿ ಮಠದ ಶ್ರೀ ಮಹೇಶ್ವರ ಸ್ವಾಮೀಜಿ, ಶ್ರೀ ಇಮ್ಮಡಿ ಮಡಿವಾಳ ಸ್ವಾಮೀಜಿ, ಶೆಟ್ಟಿನಾಯಕನಹಳ್ಳಿ ಪಟ್ಟದಮಠದ ಶ್ರೀ ಬಸವಣ್ಣ ಸ್ವಾಮೀಜಿ, ಜಯಪುರ ಗ್ರಾಪಂ ಉಪಾಧ್ಯಕ್ಷ ಡಿ. ಬಸವಣ್ಣ, ಪಿಡಿಓ ಬಸವಣ್ಣ, ಕಾರ್ಯದರ್ಶಿ ನಾಗವೇಣಿ, ಉದ್ಯಮಿ ಎಸ್.ಶ್ರೀಕಾಂತ್, ಮುಖಂಡ ಜಗದೀಶ್ ಸೇರಿದಂತೆ ಬರಡನಪುರ ಗ್ರಾಮಸ್ಥರು ಹಾಜರಿದ್ದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸ್ಮರಣೆ



ಮೈಸೂರು ತಾಲೂಕು ಜಯಪುರ ಹೋಬಳಿಯ ಬರಡನಪುರ ಮಹಾಂತೇಶ್ವರ ಮಠದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಶ್ರೀ ಮಹಾಂತೇಶ್ವರ ಸ್ವಾಮಿಗಳ 34ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಶಾಸಕ ಜಿ.ಟಿ.ದೇವೇಗೌಡ ಸನ್ಮಾನಿಸಿದರು.

ಮಠಮಾನ್ಯಗಳಿಂದ ಸಂಸ್ಕಾರ–ಸಂಸ್ಕೃತಿ ಉಳಿದಿದೆ...

ಮಠಮಾನ್ಯಗಳು ಸಮಾಜವನ್ನು ತಿದ್ದಿತೀಡುವಂತಹ ಕೆಲಸ ಮಾಡುತ್ತಿದ್ದು, ಇದರಿಂದಲೇ ಸಮಾಜದಲ್ಲಿ ಸಂಸ್ಕಾರ–ಸಂಸ್ಕೃತಿ ಇನ್ನು ಉಳಿದಿದೆ. ಬಸವಣ್ಣನವರು ಸಮಾನತೆ ಸಂದೇಶ ಸಾರಿದರು. ಅವರ ಉದಾತ್ತ ಮತ್ತು ಮಾನವೀಯ ಮೌಲ್ಯಗಳು ಒಳಗೊಂಡ ಅವರ ವಿಚಾರಧಾರೆಗಳನ್ನು ನಾವು ಅಳವಡಿಸಿಕೊಳ್ಳಬೇಕು. –ಜಿ.ಟಿ.ದೇವೇಗೌಡ, ಶಾಸಕರು

ಉತ್ಸವ ಮೂರ್ತಿ ಮೆರವಣಿಗೆ

ಮಂಗಳವಾರ ರಾತ್ರಿ ಬರಡನಪುರ ಗ್ರಾಮದಲ್ಲಿ ಮಹಾಂತೇಶ್ವರ ಸ್ವಾಮಿಯವರ ಬೆಳ್ಳಿ ವಿಗ್ರಹದ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಾಯಿತು. ಕಲಾ ತಂಡಗಳು ಮೆರವಣಿಗೆಯಲ್ಲಿ ಸಾಗಿದವು. ಅಲ್ಲದೆ, ಶಿವಭಜನಾ ಕಾರ್ಯಕ್ರಮ ನಡೆಯಿತು. ಜೊತೆಗೆ ಕರ್ತೃಗದ್ದುಗೆಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ ನೆರವೇರಿಸಲಾಯಿತು. ಇದಕ್ಕೂ ಮುನ್ನ ನಡೆದ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಕರ್ನಾಟಕ ರಾಜ್ಯ ಪತ್ತಿನ ಸಹಕಾರಿ ಮಹಾಮಂಡಳ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ ಅವರು, ನವ ಜೋಡಿಗಳಿಗೆ ಮಾಂಗಲ್ಯ ವಿತರಣೆ ಮಾಡಿದರು.



ಖಾತೆದಾರರಿಂದ ವಸೂಲಿ ಮಾಡಿದ್ದು 8,162 ರೂ., ಸರ್ಕಾರಕ್ಕೆ ಜಮಾ ಮಾಡಿದ್ದು 440 ರೂ.

ನಕಲಿ ರಶೀದಿ ಮೂಲಕ 7,722 ರೂ. ಗುಳುಂ: ಗ್ರಾಮ ಲೆಕ್ಕಿಗ ಅಮಾನತು

ಮೈಸೂರು, ಫೆ.8(ಆರ್‌ಕೆ)ನಕಲಿ ರಶೀದಿ ಮೂಲಕ ಜಮೀನಿನ ಖಾತೆದಾರರಿಂದ ಹಣ ಸಂಗ್ರಹಿಸಿ ಸರ್ಕಾರದ ಬೊಕ್ಕಸಕ್ಕೆ 7,722 ರೂ. ನಷ್ಟ ಉಂಟು ಮಾಡಿದ್ದ ತಿ.ನರಸೀಪುರ ತಾಲೂಕು, ಗ್ರಾಮ ಲೆಕ್ಕಿಗ ಅಂಥೋನಿ ರಾಜ್ ಸುನಿಲ್‌ರನ್ನು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಸೇವೆಯಿಂದ ಅಮಾನತುಗೊಳಿಸಿದ್ದಾರೆ.

ಈ ಹಿಂದೆ ತಿ.ನರಸೀಪುರ ತಾಲೂಕು, ಮೂಗೂರು ಹೋಬಳಿ ಮಾಡ್ರಹಳ್ಳಿ ವೃತ್ತದಲ್ಲಿ ಪ್ರಭಾರ ಕರ್ತವ್ಯದಲ್ಲಿದ್ದ ವೇಳೆ ಮಾಡ್ರಹಳ್ಳಿ ಸರ್ವೆ ನಂ. 74/1, 74/3, 81/2, 23 ಹಾಗೂ 180/1ರ ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ಪಾವತಿ ರಶೀದಿಯಲ್ಲಿ ಹೆಚ್ಚಿನ ಶುಲ್ಕ ವಸೂಲಿ ಮಾಡಿರುವುದಾಗಿ ಗ್ರಾಮದ ಎಂ.ಕೆ.ಶಂಕರ ಗುರು ಎಂಬುವರು ನೀಡಿದ ದೂರಿನ ಮೇರೆಗೆ ಹಾಗೂ ಮೈಸೂರಿನ ಆರ್‌ಟಿಐ ಕಾರ್ಯಕರ್ತ ಬಿ.ಎನ್.ನಾಗೇಂದ್ರ ಅವರು ಅಗತ್ಯ ದಾಖಲೆ ಪುರಾವೆಗಳೊಂದಿಗೆ ಸಲ್ಲಿಸಿದ್ದ ದೂರಿನನ್ವಯ ಹಣ ದುರುಪಯೋಗಪಡಿಸಿಕೊಂಡಿದ್ದಾರೆಂದು ತಿ. ನರಸೀಪುರ ತಾಲೂಕು ತಹಶೀಲ್ದಾರರ ವರದಿ ಆಧರಿಸಿ ಇಂದು ಜಿಲ್ಲಾಧಿಕಾರಿಗಳು ಅಂಥೋನಿ ರಾಜ್ ಸುನಿಲ್‌ನ್ನು ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಅಮನತುಗೊಳಿಸಿದ್ದಾರೆ. ಮಾಡ್ರಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಜಮೀನಿನ 7 ಖಾತೆದಾರರಿಂದ ಒಟ್ಟು 8,162 ರೂ. ವಸೂಲಿ ಮಾಡಿ ರಶೀದಿ ನೀಡಿ, ಮತ್ತೊಂದು ಚಲನ್‌ನಲ್ಲಿ ಕೇವಲ 440 ರೂ. ನಮೂದಿಸಿ ಸರ್ಕಾರಕ್ಕೆ 7,722 ರೂ. ನಷ್ಟ ಉಂಟು ಮಾಡಿದ್ದಾನೆಂಬುದು ರಶೀದಿಗಳಿಂದ ಕಂಡು ಬಂದಿದೆ. ರೈತರಿಂದ ಹೆಚ್ಚಿಗೆ ಹಣ ವಸೂಲಿ ಮಾಡಿ ಸರ್ಕಾರಿ ರಶೀದಿ ತಿದ್ದುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿ ಹಣ ದುರುಪಯೋಗ ಮಾಡಿರುವುದರಿಂದ ಗ್ರಾಮ ಲೆಕ್ಕಿಗನನ್ನು ಅಮಾನತುಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರು ಆದೇಶದಲ್ಲಿ ತಿಳಿಸಿದ್ದಾರೆ. ಕಚೇರಿ ರಶೀದಿ ಪ್ರತಿಗಳಲ್ಲಿ 7 ಖಾತೆದಾರರಿಂದ ಕೇವಲ 440 ರೂ. ನಮೂದಿಸಿ ಖಾತೆದಾರರಿಗೆ ನೀಡಿದ ರಶೀದಿಯಲ್ಲಿ 8,162 ರೂ. ತೋರಿಸಿರುವ ಅಂಥೋನಿ ರಾಜ್, ಸರ್ಕಾರಕ್ಕೆ 440 ರೂ. ಜಮೆ ಮಾಡಿ ಉಳಿದ 7,722 ರೂ.ಗಳನ್ನು ದುರುಪಯೋಗಪಡಿಸಿಕೊಂಡಿದ್ದಾನೆ.



ಐದನೇ ವರ್ಷದ ಸವಿನೆನಪು

ಬಿ.ಎಸ್. ವಿರೂಪಾಕ್ಷ ಶೆಟ್ಟಿ
23-12-1950 - 09-02-2018
ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದರೂ ನಿಮ್ಮ ಮಾತು, ನೆನಪು ಇನ್ನೂ ಸದಾ ಹಚ್ಚ ಹಸಿರಾಗಿರುತ್ತದೆ. ನಿಮ್ಮ ಆತ್ಮಕ್ಕೆ ಶಾಂತಿಯನ್ನು ನೀಡುವಂತೆ ಕೋರುವ
ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ : ಶ್ರೀಮತಿ ಕೆ.ಎಸ್. ಪಾರ್ವತಿ
ಮಗ, ಮಗಳು, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

5ನೇ ವರ್ಷದ ಸವಿನೆನಪು



ಶ್ರೀ ದೇವೇಗೌಡರು
ದುಃಖತಪ್ತರು: ಪತ್ನಿ ನಿಂಗಮ್ಮ ಮತ್ತು ಮಕ್ಕಳು ಹಾಗೂ ಕುಟುಂಬವರ್ಗ, ಸಾಹುಕಾರಹುಂಡಿ

8ನೇ ವರ್ಷದ ಸವಿನೆನಪು



ಶ್ರೀ ಮಹದೇವ
ನಿಧನ 09.02.2015
ನೀವು ನಮ್ಮನ್ನಗಲಿ ಇಂದಿಗೆ 8 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ಪತ್ನಿ ಪುಟ್ಟನಂಜಮ್ಮ, ಮಗ ಎಂ.ಶ್ರೀನಿವಾಸ್, ಸೊಸೆ ಎಸ್.ರಾಜೇಶ್ವರಿ, ಮೊಮ್ಮಕ್ಕಳು ಎಸ್.ಕಾವ್ಯ, ಮಧು, ಎಸ್.ನಿರಂಜನ್ ಕುಮಾರ್

10ನೇ ವರ್ಷದ ಸವಿನೆನಪು



ಶ್ರೀ ಸಿ. ಜವರಯ್ಯನವರು
ನೀವು ನಮ್ಮನ್ನಗಲಿ ಇಂದಿಗೆ **10** ವರ್ಷಗಳೇ ಕಳೆದರೂ ಸದಾ ನಿಮ್ಮ ಸವಿನೆನಪಿನಲ್ಲಿರುವ
ದುಃಖತಪ್ತರು : ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



73ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು
ಶ್ರೀ ಚಾಮುಂಡೇಶ್ವರಿ ಅನುಗ್ರಹ ಇರಲೆಂದು ಶುಭಕೋರುವವರು:
ಶ್ರೀಮತಿ ಪದ್ಮಾವತಿ ಸ್ವಾಮಿ, ಡಾ॥ ರಜನಿಕಾಂತ್ ಮತ್ತು ಶ್ರೀಮತಿ ಮಧು.ಪಿ ಡಾ॥ ಗೋಪಾಲಕೃಷ್ಣ ಬಿ.ಎಸ್, ಶ್ರೀಮತಿ ಅಶ್ವಿನಿ.ಎಸ್.ಪಿ, ಎಸ್.ಪಿ. ಸುಭಾಷ್ ಮತ್ತು ಶ್ರೀಮತಿ ಅರ್ಚನ.ಎಸ್ , ಪಿ.ಜಿ.ಯೋಗೇಶ್‌ಬಾಬು ಮತ್ತು ಶ್ರೀಮತಿ ಸಂಧ್ಯಾ.ಎಸ್.ಪಿ, ಜಿ.ಎ.ಶ್ರೀಮಾ ಮತ್ತು ಜಿ.ಎನ್.ರೀಮ್
ಸ್ವಾಮಿ IOB

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : transportmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆಗಳನ್ನು ನೀಡಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಅಡಿ www.eproc.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT No: 05–03/ ಸಾರಿಗೆ–ಸಂಸ್ಕರಣೆ/ ಮೈಮುಲ್/ ಇ–ಪ್ರೋಕ್/2023	ಒಕ್ಕೂಟದ ಶೀಥಲೀಕರಣ ಕೇಂದ್ರಗಳಿಂದ ಹಾಗೂ ಮುಖ್ಯ ಡೇರಿಯಿಂದ ಅಂತರ ಡೇರಿ ಹಾಗೂ ಅಂತರ ರಾಜ್ಯ ಡೇರಿಗಳಿಗೆ ಪರಿವರ್ತನೆಗೆ ಮತ್ತು ಮಾರಾಟಕ್ಕೆ ಹಾಲು ಸಾಗಾಣಿಕೆ ಮಾಡಲು ಹಾಲಿನ ಟ್ಯಾಂಕರ್‌ಗಳನ್ನು ದ್ವೈವಾರ್ಷಿಕ ಅವಧಿಗೆ ಟೆಂಡರ್ ಕರೆಯುವ ಬಗ್ಗೆ.	10.03.2023 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಸಾರಿಗೆ ವಿಭಾಗದ ಅಧೀಕ್ಷಕರು (6366430832 / 9449056797) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

BUILDING AVAILABLE FOR RENT
1) METAGALLI PREMIUM LUXURY 17 ROOMS: with Attach B/R on 60ft Commercial road, 250 mt from KRS Main Road.
2) HOOTAGALLI PREMIUM LUXURY 1 BKH 14 nos. with Attach B / R :100 mts from Yelwala double Road, close to Silver spring Apartment
Amenities : Parking area, Lift Facility, Individual Rooms with Attach bath Rooms, Terrace cafeteria, Good ventilation and light.
•Good for Boarding & Lodging •Staff Quarters, PG or Hostel.
•Employee Accommodation •Company guest House etc..
SRIJA VENTURES @ MYSORE
Call: 8277529922 / 9663107947

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಮೈಸೂರು ವಿಭಾಗ, ಮೈಸೂರು
ಸಂ: ಕರಾಸಾ/ಮೈವಿ/ಸಂ/ವಾ/3958/2022–23 ದಿನಾಂಕ: 31.01.2023

ಟೆಂಡರ್ ಪ್ರಕಟಣೆ ಸಂ. 06/2022–23
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮೈಸೂರು ವಿಭಾಗದ ವ್ಯಾಪ್ತಿಯ ಕುವೆಂಪುನಗರ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಗಳಿಗೆ "ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ" ಆಧಾರದ ಮೇಲೆ ಏಕೈಕ ಪರವಾನಗಿದಾರರನ್ನು ಆಯ್ಕೆಗಾಗಿ ಅರ್ಹ ವ್ಯಕ್ತಿ / ಕಂಪನಿ / ಸಂಸ್ಥೆಗಳಿಂದ ಅರ್ಜಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದೆ.
ಇ–ಟೆಂಡರ್ ವಿವರಗಳು: (1) ಪ್ರಿ ಬಿಡ್ ಮೀಟಿಂಗ್: **27.02.2023** ಸಮಯ: **11:00** ಗಂಟೆಗೆ. (2) ಇ–ಟೆಂಡರ್ ವಿಚಾರಣೆಗೆ ಕಡೆಯ ದಿನಾಂಕ: **28.02.2023** ಸಮಯ: **13:00** ಗಂಟೆಗೆ. (3) ಡಿ.ಡಿ.ಗಳನ್ನು ವಿಭಾಗೀಯ ಕಛೇರಿಗೆ ಸಲ್ಲಿಸಲು ಕಡೆಯ ದಿನಾಂಕ: **28.02.2023** ಸಮಯ: **17:00** ಗಂಟೆಗೆ. (4) ಇ–ಟೆಂಡರ್ / ಅರ್ಜಿ ಸ್ವೀಕರಿಸಲು ಕಡೆಯ ದಿನಾಂಕ: **01.03.2023** ಸಮಯ: **13:00** ಗಂಟೆಗೆ. (5) ಇ–ಟೆಂಡರ್ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **04.03.2023** ಸಮಯ: **11:00** ಗಂಟೆಗೆ. (6) ಇ–ಟೆಂಡರ್ ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: **06.03.2023** ಸಮಯ: **11:00** ಗಂಟೆಗೆ.
ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಮೈಸೂರು ವಿಭಾಗ (ಸಂಚಾರ ಶಾಖೆ), ಹನುಮಂತನಗರ ಮುಖ್ಯ ರಸ್ತೆ, ಬನ್ನಿಮಂಟಪ, ಮೈಸೂರುರವರನ್ನು ಸಂಪರ್ಕಿಸಲು ಕೋರಲಾಗಿದೆ. (ದೂರವಾಣಿ ಸಂಖ್ಯೆ:– 7760990802, 7760990811, 7019026615, 9343554555). ಇ–ಪೋರ್ಟಲ್ ವಿಳಾಸ: https://www.eproc.karnataka.gov.in
ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ಮೈಸೂರು ವಿಭಾಗ
ವಾಸಾಸಂಇ/ವಾಪ್ರ/ಎಲ್‌ಸಿ/4565/2022–23

ಹಸಿರು ನಮ್ಮ ಉಸಿರು

PUBLIC NOTICE
Notice is hereby Given that SMT.KAMALA GOPAL RAO, wife of late Dasappa Gopal Rao @Dr.D.Gopal Rao, Has agreed to sell the under mentioned Property to my Client and any person or persons claiming any interest on then under mentioned property or any part thereof, is hereby required to communicate the same to me with documentary evidence at my office, situated at DOOR NO. 2765 /1A D13 / A1, ' KEYANS ' 5th Main road, V.V.puram (V.V. Mohalla, Mysore-570002,) with in 15 (fifteen)days from the date of this publication, as otherwise the said sale will be completed without any reference or regard to any such purposed claim or interest which shall be deemed to have been waived for all intents and purposes.
Schedule property: House property bearing site No.98 situated at Jayalakshmipuram block II Extension, 7th Main, Devraja mohalla, Mysore ciy with building thereon, site measuring north to south: 90 feet and east to west: 56 feet, totally Measuring 5040 SQFT, bounded on : North: Road South: Site bearing No.113 East : Site bearing No.97 and west : site bearing No.99.
Sd/- Dhirendra Kumar R. Mehta
Advocate
Key-Ans Law Solutions
Date: 08.02.2023
Place: Mysore

ಪುರಸಭಾ ಕಾರ್ಯಾಲಯ, ಬೇಲೂರು
E-mail: itstaff_ulb_belur@yahoo.co.in,
townmunicipal.belur@gmail.com ದೂರವಾಣಿ: 08177–222221
ಸಂಖ್ಯೆ:ಪು.ಬೇ/ಜೆ.ಇ/ಟೆಂಡರ್–02/2022–23 ದಿನಾಂಕ:07.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)

2018–19ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ ವಿವೇಚನಾ ನಿಧಿಯಡಿ ಎಸ್.ಎಫ್.ಸಿ. ವಿಶೇಷ ಯೋಜನೆಯಡಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಸಿವಿಲ್ ಗುತ್ತಿಗೆದಾರರುಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ. 1)ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: ದಿನಾಂಕ: 14.02.2023 ಸಂಜೆ 5.30 ಗಂಟೆಗೆ 2)ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ: ದಿನಾಂಕ: 16.02.2023 ಬೆಳಿಗ್ಗೆ 11.30 ಗಂಟೆಗೆ 3)ಕೆಲಸ ಮುಗಿಸಲು ಕಾಲಾವದಿ: 06 ತಿಂಗಳು (ಮಳೆಗಾಲ ಹೊರತುಪಡಿಸಿ) (ಟೆಂಡರ್‌ನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಪ್ರಚುರ ಪಡಿಸಲಾಗುವುದು.) ಕ್ರ.ಸಂ .1)ಕಾಮಗಾರಿ ವಿವರ DMA/2022-23/BD/WORK_INDENT138808/CALL-2 ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ. ಲಕ್ಷಗಳಲ್ಲಿ) 33,86,669/– ಇ.ಎಂ.ಡಿ. ಮೊತ್ತ 67,733/– 2)DMA/2022-23/RD/WORK_INDENT138807/CALL-2 ಟೆಂಡರ್‌ಗಿಟ್ಟ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ) (ರೂ. ಲಕ್ಷಗಳಲ್ಲಿ) 33,80,821/– ಇ.ಎಂ.ಡಿ. ಮೊತ್ತ 67,616/– ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕಾಮಗಾರಿ ಶಾಖೆಯಲ್ಲಿ ಕೆಲಸದ ವೇಳೆಯಲ್ಲಿ ಮತ್ತು http://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– (ಸಿ.ಎನ್.ದಾನಿ) ಅಧ್ಯಕ್ಷರು, ಪುರಸಭೆ, ಬೇಲೂರು
ಸಹಿ/– (ಎಸ್.ಎಂ.ಸುಜಯಕುಮಾರ್) ಮುಖ್ಯಾಧಿಕಾರಿ, ಪುರಸಭೆ, ಬೇಲೂರು
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1049/2022–23

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ಪಂಚವಳ್ಳಿ, ಪಿರಿಯಾಪಟ್ಟಣ ತಾ॥

ಮೇಲ್ಕಂಡ ಸಂಘವು ಪಿರಿಯಾಪಟ್ಟಣ ತಾಲೂಕು ಪಂಚವಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳು ಬಾಡಿಗೆಗೆ ಹರಾಜಿಗಿದೆ ಮುಂಗಡ ಹಣ ನಿಗದಿಯಾಗಿರುತ್ತದೆ ಆಸಕ್ತರು ದಿನಾಂಕ 28.02.2023ರ ಫೆಬ್ರವರಿ ತಿಂಗಳ ಒಳಗಾಗಿ ಅರ್ಜಿಯೊಂದಿಗೆ ಮಳಿಗೆ ಅಳತೆ 12x29ಕ್ಕೆ 1 ಲಕ್ಷ ರೂಗಳು ಮತ್ತು 10x12 ಹಾಗೂ 12x12ಕ್ಕೆ 50,000 ಠೇವಣಿ ಹಣವನ್ನು ಸಂಘದ ಕಚೇರಿಗೆ ಬಂದು ಪಾವತಿಸತಕ್ಕದ್ದು ಮಳಿಗೆಗಳನ್ನು ಬಾಡಿಗೆ ನೀಡುವ ಮತ್ತು ತಿರಸ್ಕರಿಸುವ ಹಕ್ಕನ್ನು ಸಂಘದ ಆಡಳಿತ ಮಂಡಳಿಯ ಸದಸ್ಯರು ಹೊಂದಿರುತ್ತಾರೆ. ಹರಾಜು ನಡೆಯುವ ದಿನಾಂಕ 1–3–2023 ಬುಧವಾರ ಬೆಳಗ್ಗೆ 11 ಗಂಟೆಗೆ ಸ್ಥಳ ಸಂಘದ ಕಚೇರಿ ಆವರಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ ಪಂಚವಳ್ಳಿ 571107 .
ಮೊ: 9481532984, 9448958898, 8961836436
ಷರತ್ತುಗಳು ಅನ್ವಯಿಸುತ್ತದೆ"